
ರಂಜನೆ ಬೋಧನೆ ಪ್ರಚೋದನೆ

ಲಂಕೇಶ್


ಏಪ್ರಿಲ್ 29, 2009 ರೂ. 12/-




77 ಲಕ್ಷ ನುಂಗಿದ ಸಿದ್ದೇಶ್




'ಬಂ' ಬಗ್ಗೆ ಭಯ 100 ಕೋಟಿ ಖಾಲಿ



ಮಂಗಳೂರು
ಗೆಲುವಿನ ಭರವಸೆಯಲ್ಲಿ ಪೂಜಾರಿ




ಬೆಳಗಾವಿ
ಎ.ಬಿ. ಪಾಟೀಲ ಗೆಲುವು ನಿಶ್ಚಿತ!




ಬೀದರ್
ನಾಗಮಾರಪಳ್ಳಿಗೆ ಧರ್ಮಸಿಂಗ್ ಟಾಂಗ್!



ಮಂಡ್ಯ
ಅಂಬರೀಶ್ ಕಡೇ ಆಟ ಸ್ವಪಕ್ಷೀಯರಿಂದಲೇ ಗೂಟ



ಚಿಕ್ಕಬಳ್ಳಾಪುರ
ಹೋರಾಟದಲ್ಲಿ ಮೊಯ್ಲಿ ಅಶ್ವಥ್ ಜೇಬು ಖಾಲಿ




ಗುಲ್ಬರ್ಗಾ
ಬೆವರುತ್ತಿರುವ ಬೆಳಮಗಿ ಮುನ್ನಡೆಯಲ್ಲಿ ಖರ್ಗೆ



ಮೈಸೂರು
ದಿಲ್ಲಿಗೆ ಹಾರೀತೆ ಹಳ್ಳಿಹಕ್ಕಿ ವಿಶ್ವನಾಥ್?



ಬೆಂಗಳೂರು ಉತ್ತರ
ಜಾಫರ್ ಷರೀಫ್‌ಗೆ ಸಾಧನೆಯೇ ಶ್ರೀರಕ್ಷೆ



ಮಿ॥ಅಡ್ವಾಣಿ... ಗುಡ್‌ಬೈ



ಸಿದ್ದು ಏಟಿಗೆ ಬಿಜೆಪಿ ಸುಸ್ತು

1984ರ ಸಿಖ್ ನರಮೇಧದಲ್ಲಿ RSSನ ಪಾತ್ರ

ಮುಚ್ಚಿಹೋದ ಇತಿಹಾಸದ ಕರಾಳ ಪುಟಗಳು

ಚೆಪ್ಪಲಿ ಪೂಜೆಯಾಗದ ಹೊರತು ನಮ್ಮ ರಾಜಕಾರಣಿಗಳು ಪಾಠ ಕಲಿಯುವುದಿಲ್ಲವೆಂಬುದು ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಮತ್ತೊಮ್ಮೆ ಸಾಬೀತಾಗಿದೆ. 1984ರಲ್ಲಿ ನಡೆದ ಘನಘೋರ ಸಿಖ್ ನರಮೇಧಕ್ಕೆ ನೇತೃತ್ವ ಕೊಟ್ಟು ಹಲವಾರು ಸಿಖ್ಖರನ್ನು ಕಡಿದುರುಳಿಸಿದ ಜಗದೀಶ್ ಟೈಟ್ಲರ್ ಮತ್ತು ಸಜ್ಜನ್ ಕುಮಾರ್‌ಗೆ ಈ ಬಾರಿಯೂ ಕಾಂಗ್ರೆಸ್ ಪಕ್ಷ ಟಿಕೆಟ್ ಕೊಟ್ಟಿತ್ತು. ಗಾಯಕ್ಕೆ ಬರೆ ಎಳೆಯುವಂತೆ ಸಿಬಿಐ ಎಂಬ ಕೇಂದ್ರ ಸರ್ಕಾರದ ಕೈಗೊಂಬೆ ತನಿಖಾ ಸಂಸ್ಥೆ ಸಿಖ್ ನರಮೇಧದಲ್ಲಿ ಟೈಟ್ಲರ್ ಭಾಗವಹಿಸಿದ್ದು ಸೂರ್ಯನ ಬೆಳಕಷ್ಟೆ ಸತ್ಯವಾಗಿದ್ದರೂ ಆತನ ವಿರುದ್ಧ ಯಾವುದೇ ಸಾಕ್ಷ್ಯ ಇಲ್ಲವೆಂದು ಕ್ಲೀನ್ ಚಿಟ್ ಕೊಟ್ಟುಬಿಟ್ಟಿತು. ಇದು ದೇಶದೆಲ್ಲೆಡೆ ಸಿಖ್ಖರ ಅಪಾರ ಪ್ರತಿಭಟನೆಗೆ ಕಾರಣವಾಯಿತು. ಗೃಹಮಂತ್ರಿ ಚಿದಂಬರಂ ಪತ್ರಿಕಾಗೋಷ್ಠಿಯೊಂದರಲ್ಲಿ ಈ ಬಗ್ಗೆ ಕೇಳಿದ ಪ್ರಶ್ನೆಗೆ ಸರಿಯಾಗಿ ಉತ್ತರ ನೀಡದಿದ್ದರಿಂದ ಕೆರಳಿದ 'ದೈನಿಕ್ ಜಾಗರಣ್' ಪತ್ರಿಕೆಯ ವರದಿಗಾರ ಜರ್ನೈಲ್ ಸಿಂಗ್ ಚಿದಂಬರಂ ಕಡೆಗೆ ಚಪ್ಪಲಿ ತೂರಿದ್ದು ಈ ಪ್ರತಿಭಟನೆಗಳ ಮುಂದುವರಿಕೆಯೇ ಆಗಿತ್ತು. ಪಂಜಾಬ್‌ನಲ್ಲಿ ಈ ಬಾರಿಯ ಚುನಾವಣೆಯಲ್ಲಿ ಕಾಂಗ್ರೆಸ್ ಉತ್ತಮ ಫಲಿತಾಂಶವನ್ನು ನಿರೀಕ್ಷಿಸುತ್ತಿತ್ತು. ಆದರೆ ಈ ಚಪ್ಪಲಿ ಪ್ರಕರಣ ಫಲಿತಾಂಶದ ಮೇಲೆ ಕೆಟ್ಟ ಪ್ರಭಾವ ಬೀರಬಹುದೆಂದು ಹೆದರಿ ಟೈಟ್ಲರ್ ಮತ್ತು ಸಜ್ಜನ್ ಕುಮಾರ್‌ರನ್ನು ಕೊನೆಗೂ ಕಾಂಗ್ರೆಸ್ ಕೈಬಿಟ್ಟಿದೆ. ಆದರೆ ಇದೂ ಸಹ ಅವಕಾಶವಾದಿ ರಾಜಕಾರಣವೇ ಹೊರತು ಪಶ್ಚಾತ್ತಾಪದ ರಾಜಕಾರಣವೇನಲ್ಲ ಎಂಬುದು ಎಳೆಮಕ್ಕಳಿಗೂ ಅರ್ಥವಾಗುತ್ತದೆ.

ಆದರೆ ಒಟ್ಟಾರೆ 1984ರ ಸಿಖ್ ನರಮೇಧದ ಪ್ರಕರಣದಲ್ಲಿ ಕಾಂಗ್ರೆಸ್‌ಗಿಂತ ಹೆಚ್ಚಿಗೆ ಅವಕಾಶವಾದದಿಂದ ವರ್ತಿಸುತ್ತಿರುವುದು ಆರೆಸ್ಸೆಸ್ ಮತ್ತು ಬಿಜೆಪಿಗಳು. ಗುಜರಾತ್‌ನಲ್ಲಿ ಸಂಘ ಪರಿವಾರ ನಡೆಸಿದ ಮುಸ್ಲಿಮರ ಮಾರಣಹೋಮದ ಬಗ್ಗೆ ಬಿಜೆಪಿ ಸಾರ್ವಜನಿಕರ ಆಕ್ರೋಶಕ್ಕೆ ಗುರಿಯಾದಾಗಲೆಲ್ಲ ಕಾಂಗ್ರೆಸ್‌ನವರು ಸಿಖ್ ನರಮೇಧ ನಡೆಸಲಿಲ್ಲವೇ ಎಂದು ಪ್ರತಿದಾಳಿ ನಡೆಸಿ ತಮ್ಮ ಹುಳುಕನ್ನು ಮುಚ್ಚಿಕೊಳ್ಳುತ್ತಾ ಬಂದಿದ್ದಾರೆ. ಅದರಲ್ಲೂ 1999ರಿಂದ ಬಿಜೆಪಿ ಪಕ್ಷದ ಆಪ್ತಮಿತ್ರನಾಗಿದ್ದ ಮಾಜಿ ರಕ್ಷಣಾ



ಸಚಿವ ಮತ್ತು ಮಾಜಿ ಸಮಾಜವಾದಿ ಜಾರ್ಜ್ ಫರ್ನಾಂಡಿಸ್‌ರವರಂತೂ ಗುಜರಾತ್ ಪಾಪದಿಂದ ಬಿಜೆಪಿಯನ್ನು ರಕ್ಷಿಸಲು 84ರ ಸಿಖ್ ನರಮೇಧವನ್ನು ಪ್ರತಾಸ್ತ್ರವನ್ನಾಗಿ ಬಳಸುವುದರಲ್ಲಿ ನಿಸ್ಸೀಮರಾಗಿದ್ದರು. 2002ರಲ್ಲಿ ಸಂಸತ್‌ನಲ್ಲಿ ಪೋಟಾ ಬಗ್ಗೆ ನಡೆದ ಚರ್ಚೆಯಲ್ಲೂ ಜಾರ್ಜ್ ಫರ್ನಾಂಡಿಸರು ಸಮಾಜವಾದಿಯಾಗಿದ್ದಾಗ ಕಲಿತ ವಾಕ್ಚಾತುರ್ಯವನ್ನೆಲ್ಲಾ ಬಳಸಿ ಕೊಂದು ಸಿಖ್ ನರಮೇಧದ ಮುಂದೆ ಗುಜರಾತ್ ನರಮೇಧ ಏನೂ ಅಲ್ಲವೆಂದು ವಾದಿಸಿದ್ದರು.

ಆದರೆ 84ರ ನರಮೇಧದ ಬಗ್ಗೆ ಸಂಘ ಪರಿವಾರದ ನಿಲುವು ಮತ್ತು ಪಾತ್ರವೇನಾಗಿತ್ತು ಎಂಬುದನ್ನು ಮಾತ್ರ ಈ ಜಾರ್ಜ್ ಮತ್ತು ಸಂಘಪರಿವಾರ ಎರಡೂ ಮುಚ್ಚಿಹಾಕುತ್ತಿವೆ. ವಾಸ್ತವವಾಗಿ 1984ರಲ್ಲಿ ಜಾರ್ಜ್ ಫರ್ನಾಂಡಿಸರು ಇನ್ನೂ ಸಂಘ ಪರಿವಾರದ ಸನಿಹ ಸುಳಿಯದೇ ಇದ್ದಾಗ ಪ್ರತೀಕ್ಷಾ ಎಂಬ ಹಿಂದಿ ವಾರಪತ್ರಿಕೆಯನ್ನು ಹೊರತರುತ್ತಿದ್ದರು. ಅದರ 1984ರ ನವಂಬರ್ 25ರ ಸಂಚಿಕೆಯಲ್ಲಿ ಸಿಖ್ ಹತ್ಯಾಕಾಂಡದಲ್ಲಿ ಆರೆಸ್ಸೆಸ್‌ನ ಪಾತ್ರದ ಬಗ್ಗೆ ಫರ್ನಾಂಡಿಸರು **'Indira Congress-RSS collusion'** (ಇಂದಿರಾ ಕಾಂಗ್ರೆಸ್ ಮತ್ತು ಆರೆಸ್ಸೆಸ್‌ಗಳ ಒಳ ಒಪ್ಪಂದ) ಎಂಬ ಲೇಖನವನ್ನು ಬರೆದಿದ್ದರು. ಅಲ್ಲದೆ ಸಿಖ್ ಹತ್ಯಾಕಾಂಡದ ಬಗ್ಗೆ ಆರೆಸ್ಸೆಸ್ ನಿಲುವೇನು ಎಂದು ಆಗಿನ ಆರೆಸ್ಸೆಸ್ ಪ್ರಮುಖರಲ್ಲಿ ಒಬ್ಬರಾದ ನಾನಾ ದೇಶಮುಖ್ ಎಂಬುವರು ಗುರು ನಾನಕ್ ದಿವಸವಾದ ನವಂಬರ್ 8, 2004ರಂದು ಎಲ್ಲಾ ರಾಜಕೀಯ ಪಕ್ಷಗಳಿಗೂ ಕಳಿಸಿದ ಪತ್ರವೊಂದನ್ನು ಯಥಾವತ್ ಪ್ರಕಟಿಸಿದ್ದರು. ಅಷ್ಟು ಮಾತ್ರವಲ್ಲ ಆರೆಸ್ಸೆಸ್‌ನ ಆ ಪತ್ರದ ಬಗ್ಗೆ ಫರ್ನಾಂಡಿಸರು ತಮ್ಮ ಸಂಪಾದಕೀಯದಲ್ಲಿ ಹೀಗೆ ಬರೆದುಕೊಂಡಿದ್ದರು:

"ಈ ಕೆಳಗಿನ ಪತ್ರವನ್ನು ಬರೆದಿರುವವರು ಆರೆಸ್ಸೆಸ್ಸಿನ ಪ್ರಮುಖ ಸಿದ್ಧಾಂತಕರ್ತರು ಮತ್ತು ನೀತಿ ನಿರ್ಣಯ ಮಾಡುವವರೂ ಆಗಿದ್ದಾರೆ. ಪ್ರಧಾನಿ ಇಂದಿರಾ ಗಾಂಧಿಯವರ ಹತ್ಯೆಯಾದ ನಂತರ ಅವರು ಈ ದಾಖಲೆಯನ್ನು ಎಲ್ಲಾ ಪ್ರಮುಖ ರಾಜಕಾರಣಿಗಳಿಗೂ ವಿತರಿಸಿದರು. ಇದಕ್ಕೆ ಒಂದು ಐತಿಹಾಸಿಕ ಮಹತ್ವವಿರುವುದರಿಂದ ನಾವು ನಮ್ಮ ಪತ್ರಿಕಾ ನೀತಿಯನ್ನು ಉಲ್ಲಂಘಿಸಿ ಅದರ ಪೂರ್ಣ ಪಾಠವನ್ನು ಪ್ರಕಟಿಸುತ್ತಿದ್ದೇವೆ. ಈ ದಾಖಲೆಯು ಆರೆಸ್ಸೆಸ್ಸಿಗೂ ಮತ್ತು ಇಂದಿರಾ ಕಾಂಗ್ರೆಸ್ಸಿಗೂ ಕುದುರುತ್ತಿರುವ ಗೆಳೆತನದ ಬಗ್ಗೆಯೂ ಬೆಳಕು ಚೆಲ್ಲುತ್ತದೆ."

ಆದರೆ ಫರ್ನಾಂಡಿಸರಿಗೂ ಮತ್ತು ಆರೆಸ್ಸೆಸ್ಸಿಗೂ ಗೆಳೆತನ ಕುದುರಿದ ನಂತರ ಇದರ ಬಗ್ಗೆ ಮಾತನಾಡುವುದನ್ನೇ ಬಿಟ್ಟುಬಿಟ್ಟರು. ಈಗ ಮತ್ತೆ 1984ರ ಸಿಖ್ ನರಮೇಧ ಮತ್ತು 2002ರ ಗುಜರಾತ್ ಹತ್ಯಾಕಾಂಡಗಳನ್ನು ರಾಜಕೀಯ ಪಕ್ಷಗಳು ಅದರಲ್ಲೂ ವಿಶೇಷವಾಗಿ ಬಿಜೆಪಿ ಅಮಾನವೀಯವಾದ ಅವಕಾಶವಾದಿ ರಾಜಕಾರಣವಾದ ವಸ್ತುವನ್ನಾಗಿ ಮಾಡಿಕೊಳ್ಳುತ್ತಿರುವುದರಿಂದ ಈ ಮಹತ್ವದ ದಾಖಲೆಯ ಬಗ್ಗೆ ದೆಹಲಿ ವಿಶ್ವವಿದ್ಯಾಲಯದ ಪ್ರೊಫೆಸರ್ ಆಗಿರುವ ಶಂಸುಲ್ ಇಸ್ಲಾಂರವರು ಮತ್ತೊಮ್ಮೆ ಎಲ್ಲರ ಗಮನವನ್ನು ಸೆಳೆದಿದ್ದಾರೆ.

ನಾನಾ ದೇಶ್‌ಮುಖ್‌ರವರ ಆ ಸುದೀರ್ಘ ಪತ್ರದ ಪೂರ್ಣ ಪಾಠವನ್ನು ಇಲ್ಲಿ ಅಚ್ಚು ಮಾಡಲು ಸಾಧ್ಯವಿಲ್ಲವಾದ್ದರಿಂದ ಸಿಖ್ ನರಮೇಧದ ಬಗ್ಗೆ ಆರೆಸ್ಸೆಸ್ ನಿಲುವುಗಳನ್ನು ಬಯಲುಗೊಳಿಸುವ ಮುಖ್ಯಾಂಶಗಳನ್ನು ಮಾತ್ರ ಇಲ್ಲಿ ಉಲ್ಲೇಖಿಸಲಾಗಿದೆ:

1. ಸಿಖ್ಖರ ನರಮೇಧವನ್ನು ಮಾಡಿದವರು ಯಾರೋ ಕಲವು ಸಮಾಜ ವಿರೋಧಿ ಪುಂಡರಲ್ಲ, ಬದಲಿಗೆ ಅದು ಭಾರತದ ಹಿಂದೂಗಳಲ್ಲಿ ಉಂಟಾಗಿದ್ದ ಸಹಜ ಆಕ್ರೋಶದ ಅಭಿವ್ಯಕ್ತಿಯಾಗಿದೆ.
2. ಇಂದಿರಾ ಗಾಂಧಿಯವರನ್ನು ಕೊಂದ ಇಬ್ಬರು ಸಿಖ್ಖರು ಮತ್ತು ಇಡೀ ಸಿಖ್ ಸಮುದಾಯದ ನಡುವೆ ನಾನಾ



ಚಾರ್ವಾಕ

ಶಿವಸುಂದರ್

ದೇಶಮುಖರು ಯಾವುದೇ ವ್ಯತ್ಯಾಸ ಕಾಣುವುದಿಲ್ಲ. ಅವರ ಪ್ರಕಾರ ಇಡೀ ಸಿಖ್ ಸಮುದಾಯದ ಆದೇಶದಂತೆಯೇ ಅವರಿಬ್ಬರೂ ಇಂದಿರಾರವರನ್ನು ಹತ್ಯೆ ಮಾಡಿದ್ದಾರೆ.
3. 'ಆಪರೇಷನ್ ಬ್ಲೂ ಸ್ಟಾರ್' ಅತ್ಯಂತ ರಾಷ್ಟ್ರಭಕ್ತಿಯಿಂದ ಕೂಡಿದ ಕಾರ್ಯಾಚರಣೆಯಾಗಿದೆ. ಅದನ್ನು ವಿರೋಧಿಸುವುದು ರಾಷ್ಟ್ರದ್ರೋಹ.
4. ಸಿಖ್ಖರು ತಮ್ಮ ಮೇಲೆ ರಾಷ್ಟ್ರೀಯವಾದಿ ಹಿಂದೂಗಳು ನಡೆಸುತ್ತಿರುವ ದೌರ್ಜನ್ಯಗಳನ್ನು ಸಹಿಸಬೇಕೆ ವಿನಃ ಪ್ರತಿಭಟಿಸಬಾರದು.
5. ಇಂದಿರಾ ಗಾಂಧಿಯವರು ರಾಷ್ಟ್ರದ ದೊಡ್ಡ ನಾಯಕಿಯಾಗಿದ್ದು ಅಂಥವರನ್ನು ಕೊಂದಾಗ ಇಂಥ ಹತ್ಯಾಕಾಂಡಗಳು ಸಂಭವಿಸುವುದು ಸಹಜ.
6. "ದೊಡ್ಡ ಮರವೊಂದು ಉರುಳಿದಾಗ ಸುತ್ತಮುತ್ತಲಲ್ಲಿ ಕಂಪನ ಉಂಟಾಗುವುದು ಸಹಜ" ಎಂಬ ರಾಜೀವ್ ಗಾಂಧಿ ಹೇಳಿಕೆಯಲ್ಲಿ ಯಾವುದೇ ತಪ್ಪಿಲ್ಲ.

ಸಿಖ್ ನರಮೇಧವಾಗಿ 25 ವರ್ಷಗಳಾಯಿತು. ಗುಜರಾತ್ ನರಮೇಧವಾಗಿ 7 ವರ್ಷಗಳಾಯಿತು. ಹಳೆಯ ಗಾಯಗಳನ್ನು ಕೆರೆದುಕೊಳ್ಳುವ ಬದಲಿಗೆ ಎಲ್ಲವನ್ನೂ ಮರೆತು ಭವಿಷ್ಯದ ಕಡೆ ನೋಡಬೇಕಲ್ಲವೆ ಎಂದು ಸಂಘಪರಿವಾರದ ಕೆಲವು ಜಾಣ ರಾಜಕಾರಣಿಗಳು ಪ್ರಶ್ನಿಸುತ್ತಾರೆ. ಆದರೆ ಇತಿಹಾಸವನ್ನು ಮರೆತವರು ವರ್ತಮಾನವನ್ನೂ ಅರಿತುಕೊಳ್ಳಲಾರರು ಮತ್ತು ಭವಿಷ್ಯವನ್ನೂ ನಿರ್ಮಿಸಲಾರರು ಎಂಬುದು ಇತಿಹಾಸದಲ್ಲಿ ಪದೇ ಪದೇ ರುಜುವಾತಾಗಿದೆ. "ಸಿಖ್ ನರಮೇಧ ನಡೆದು 25 ವರ್ಷಗಳಾದ ಮೇಲೆ ಈಗೇಕೆ ಅದನ್ನು ಕೆದಕುತ್ತಿದ್ದೀರಿ?" ಎಂದು ಸಿಖ್ ಹತ್ಯಾಕಾಂಡದ ಬಲಿಪಶುಗಳಾದವರ ಪರವಾಗಿ ವಾದಿಸಿದ ವಕೀಲರಾದ ಹರ್ವಿಂದರ್ ಸಿಂಗ್ ಫೂಲ್ಕ ಅವರಿಗೆ ಪತ್ರಕರ್ತರೊಬ್ಬರು ಪ್ರಶ್ನಿಸಿದರಂತೆ. ಅದಕ್ಕೆ ಅವರು ಕೊಟ್ಟ ದಾರ್ಶನಿಕ ಉತ್ತರ ಈ ಎಲ್ಲಾ ಪ್ರಶ್ನೆಗಳಿಗೂ ಉತ್ತರವಾಗುತ್ತದೆ:

"25 ವರ್ಷಗಳ ಕೆಳಗೆ ನಡೆದದ್ದರ ಬಗ್ಗೆ ಈಗೇಕೆ ಮಾತನಾಡುತ್ತಿದ್ದೀಯಾ ಎಂದು ನನ್ನನ್ನು ಕೇಳಿದವರಿಗೆ 1984ರ ಹತ್ಯಾಕಾಂಡದ ಆರೋಪಿಗಳಿಗೆ ಶಿಕ್ಷೆ ಆಗಿದ್ದರೆ 2002ರ ಗುಜರಾತ್ ಹತ್ಯಾಕಾಂಡ ಸಂಭವಿಸುತ್ತಿರಲಿಲ್ಲ ಎಂದು ನಾನು ಉತ್ತರಿಸುತ್ತೇನೆ. ನೀವು 1984 ಮತ್ತು ಗುಜರಾತನ್ನು ಮರೆತುಬಿಟ್ಟರೆ ಮತ್ತೊಮ್ಮೆ ಅದೇ ರೀತಿಯ ಹತ್ಯಾಕಾಂಡಕ್ಕೆ ಸಿದ್ಧವಾಗಬೇಕಾಗುತ್ತದೆ. ಅಪರಾಧ ನ್ಯಾಯಸಂಹಿತೆಯ ಮೂಲ ಸಿದ್ಧಾಂತವೇ ಶಿಕ್ಷೆ ಏಕೆಂದರೆ ಅದು ಭಾವೀ ಅಪರಾಧಿಗಳು ಅಪರಾಧವನ್ನು ಮಾಡದಂತೆ ಎಚ್ಚರಿಕೆ ನೀಡುತ್ತದೆ. ಆದರೆ ಇಂಥ ಹೀನಾಯ ಅಪರಾಧವನ್ನು ಎಸಗಿದ ರಾಜಕಾರಣಿಗಳು ತಾವು ಕಾನೂನಿಗಿಂತ ದೊಡ್ಡವರು ಎಂಬಂತೆ ಯಾವುದೇ ಶಿಕ್ಷೆ ಇಲ್ಲದೆ ರಾಜಾರೋಷವಾಗಿ ಬೀದಿಗಳಲ್ಲಿ ನಡೆದಾಡುತ್ತಿದ್ದರೆ, ಮುಂದೆಯೂ ಅವರು ಓಟಗಾಗಿ ಮತ್ತು ಕುರ್ಚಿಗಾಗಿ ಇಂಥ ಹತ್ಯಾಕಾಂಡಗಳನ್ನು ನಡೆಸುತ್ತಲೇ ಹೋಗುತ್ತಾರೆ. ಇದು ಆಗಬಾರದು. ಇದರಿಂದ ಕಾನೂನಿನ ಆಡಳಿತವಾಗಲೀ ಪ್ರಜಾತಂತ್ರವಾಗಲೀ ಉಳಿಯುವುದಿಲ್ಲ."

ನಾನಾ ದೇಶಮುಖರು ಮೇಲಿನ ಪತ್ರವನ್ನು ಬರೆದದ್ದು 1984ರ ನವಂಬರ್ 8ರ ಗುರುನಾನಕ್ ದಿನದಂದು. ದೆಹಲಿಯಲ್ಲಿ ಸಿಖ್ಖರನ್ನು ಅತಿ ಹೆಚ್ಚು ಸಂಖ್ಯೆಯಲ್ಲಿ ಹತ್ಯೆ ಮಾಡಿದ್ದು 1984ರ ನವಂಬರ್ 5-8ರ ನಡುವೆ. ಅಂದರೆ ಸಿಖ್ಖರ ಹತ್ಯಾಕಾಂಡ ಬೀದಿಗಳಲ್ಲಿ ನಡೆಯುತ್ತಿರುವಾಗ ಅದನ್ನು ನಿಲ್ಲಿಸಬೇಕೆಂಬ ಯಾವ ಒತ್ತಾಯವನ್ನು ಹಾಕದೆ ಅದನ್ನು 'ಆಕ್ರೋಶಗೊಂಡ ಹಿಂದೂಗಳ ಸಹಜ ವರ್ತನೆ' ಎಂದು ಸಮರ್ಥಿಸಿಕೊಂಡ ಆರೆಸ್ಸೆಸ್‌ನ ಪಾತ್ರ ಈ ಹತ್ಯಾಕಾಂಡದಲ್ಲಿ ಏನಿತ್ತೆಂಬುದನ್ನು ಕೂಲಂಕಷ ತನಿಖೆಗೆ ಒಳಪಡಿಸಲೇಬೇಕಾಗಿದೆ. ಅಲ್ಲದೆ ಬಿಜೆಪಿ ಮತ್ತು ಸಂಘ ಪರಿವಾರ ಸಿಖ್ ಹತ್ಯಾಕಾಂಡವನ್ನು ಗುಜರಾತ್ ನರಮೇಧಕ್ಕೆ ಗುರಾಣಿಯಾಗಿ ಬಳಸಿಕೊಳ್ಳುತ್ತಿರುವ ಈ ಹೊತ್ತಿನಲ್ಲಿ ಸಿಖ್ ನರಮೇಧದಲ್ಲಿ ಆರೆಸ್ಸೆಸ್‌ನ ಪಾತ್ರವೇನೆಂಬುದನ್ನು ಕೇವಲ ಸಿಖ್ ಸಮುದಾಯವಲ್ಲ ಇಡೀ ಭಾರತದ ಜನತೆ ಅರ್ಥ ಮಾಡಿಕೊಳ್ಳುವ ಅಗತ್ಯವಿದೆ. ಈ ದೇಶದ ಪ್ರಜಾತಂತ್ರದ ಉಳಿವಿನ ಹಿತಾಸಕ್ತಿಯಿಂದಲೇ ಸಿಖ್ ಹತ್ಯಾಕಾಂಡದಲ್ಲಿ ಆರೆಸ್ಸೆಸ್ಸಿನ ಪಾತ್ರವೇನಿತ್ತೆಂಬುದು ತನಿಖೆಗೆ ಒಳಗಾಗಬೇಕಿದೆ. ■

No Comments

"ಸೋನ್ಗಿಯಾನ ಅವರ ಚುನಾವಣಾ ಪ್ರಚಾರದ ಬಗ್ಗೆ ನನಗೆ ಯಾವ ಮಾಹಿತಿಯೂ ಇಲ್ಲ. ನನಗೆ ಅದನ್ನು ತಿಳಿದುಕೊಳ್ಳುವ ಆಸಕ್ತಿಯೂ ಇಲ್ಲ."

-ರೋಥಿಂಗ್ ಫುಲ್, ಸಾಂಗ್ಲಿಯಾನ ಅವರ ಪತ್ನಿ

"ನಾನು ಮೂಲತಃ ಆರೆಸ್ಸೆಸ್ ಕಾರ್ಯಕರ್ತ. ಹೀಗಾಗಿ, ನಾನು ಬಿಜೆಪಿಗೆ ಹೊಸಬನೇನೂ ಅಲ್ಲ."

-ಸೋಮಣ್ಣ

"ಚುನಾವಣೆಯಲ್ಲಿ ಮತದಾರರಲ್ಲಿ ಜಾಗೃತಿ ಮೂಡಿಸಲು ಮಹಿಮಾ ಪಟೇಲ್ ಅವರು ಡಾಲರ್ಸ್ ಕಾಲೋನಿಯ ತಮ್ಮ ನಿವಾಸದಲ್ಲಿ ಹೋಮ ಮಾಡಿಸಿದರು."

-ಒಂದು ಪತ್ರಿಕಾ ವರದಿ

ನಂಬಿದ್ರೆನಂಬಿ ಬಿಟ್ರೆಬಿಡಿ

"ಚುನಾವಣೆಯಲ್ಲಿ ಗೆಲ್ಲುವುದೇ ಮುಖ್ಯ. ಆದ್ದರಿಂದಲೇ ನಾನು ಸಮಾಜವಾದಿ ಪಕ್ಷ ಸೇರಿದೆ. ಅಲ್ಲದೆ ಆ ಪಕ್ಷದ ಸಿದ್ಧಾಂತ ಸೆಕ್ಯುಲಾರ್ ಮತ್ತು ಸಮಾಜವಾದಿ ಪ್ರಜಾತಂತ್ರವೇ ಆಗಿದೆ."

-ನಫೀಜಾ ಅಲಿ

"ಬೆಂಗಳೂರ್ ಸೆಂಟ್ರಲ್‌ನಲ್ಲಿ ನಾನೇ ವಿನ್ನರ್. ಬಿಜೆಪಿ ಮತ್ತು ಜೆಡಿಎಸ್ ಅಭ್ಯರ್ಥಿಗಳು ಎರಡನೇ ಸ್ಥಾನಕ್ಕೆ ಹೈಪೋಟಿ ನಡೆಸುತ್ತಿದ್ದಾರೆ."

-ಸಾಂಗ್ಲಿಯಾನ

"ರಾಜಕೀಯ ಶತ್ರುತ್ವ ಶಾಶ್ವತ ಅಲ್ಲ. ನಾನು ಹಾಸನ ಮತ್ತು ಬೆಂಗಳೂರಿನಲ್ಲಿ ದೇವೇಗೌಡ ಮತ್ತು ಕುಮಾರಸ್ವಾಮಿಗೂ ಉಳಿದ ಕಡೆ ಕಾಂಗ್ರೆಸ್ ಪರವಾಗಿಯೂ ಪ್ರಚಾರ ಮಾಡಲಿದ್ದೇನೆ."

-ಸಿಂಧ್ಯಾ

"ಯಡಿಯೂರಪ್ಪ ಹಠಾವೋಗೆ ಬಿಜೆಪಿಯಲ್ಲಿ ಸ್ಕೆಚ್ ಸಿದ್ಧವಾಗುತ್ತಿದೆ."

-ಕುಮಾರಸ್ವಾಮಿ

ಅರ್ಥಾತ್ ಹಿಂದೂ ಬಡವರಿಗೆ ಎಂದಲ್ಲವೇ?

"ಪ್ರಧಾನ ಮಂತ್ರಿಗಳು ಈ ದೇಶದ ಸಂಪನ್ಮೂಲದ ಮೇಲಿನ ಪ್ರಥಮ ಹಕ್ಕು ಮುಸ್ಲಿಮರದ್ದಾಗಿರಬೇಕು ಎಂದಿದ್ದಾರೆ. ಆದರೆ ನಾನು ಆ ಹಕ್ಕು ಬಡವರದ್ದಾಗಿರಬೇಕು ಎನ್ನುತ್ತೇನೆ."

-ನರೇಂದ್ರ ಮೋದಿ

ಅಂಬೇಡ್ಕರ್ ಫೋಟೋ ಕೂಡಾ ಪ್ರವೇಶಿಸದಂತೆ ಮಾಡಿದವರು ಬಿಜೆಪಿಗಳು!

"ಅಂಬೇಡ್ಕರ್ ಸಂವಿಧಾನ ಸಭೆ ಪ್ರವೇಶಿಸದಂತೆ ಸಂಚು ಮಾಡಿದವರು ಕಾಂಗ್ರೆಸ್ಸಿನವರು."

-ಅಡ್ವಾನಿ

ಚಿಂತಕರ ಚಾವಡಿ

"ಬೀದಿಗಿಳಿಯಿರಿ. ಆದರೆ ರಸ್ತೆ ಗಡಿ ದಾಟಬೇಡಿ. ನಾಗರಿಕ ಅಸಮ್ಮತಿ ತೋರಿರಿ. ಆದರೆ ಅಸಹಕಾರ ಮಾಡಬೇಡಿರಿ, ಇದು ಈ ಮಧ್ಯೆ ಚಳವಳಿಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಮಧ್ಯಮ ವರ್ಗದವರ ನೀತಿಸಂಹಿತೆಯಂತೆ ಕಾಣುತ್ತಿದೆ. ಮತ್ತೊಂದೆಡೆ ಮಧ್ಯಮ ವರ್ಗದ ಮೌಲ್ಯಗಳನ್ನೇ ಬಿತ್ತುವ ಮಾಧ್ಯಮಗಳು ಪ್ರತಿಭಟನೆಗಳ ಸ್ವರೂಪವನ್ನೇ ಬದಲಾಯಿಸುವಷ್ಟು ಪ್ರಭಾವ ಬೀರುತ್ತಿವೆ. ಯಾವುದೇ ಪ್ರತಿಭಟನೆ ಮಾಧ್ಯಮಗಳಲ್ಲಿ ಕಾಣಿಸಿಕೊಳ್ಳದಿದ್ದರೆ ಅದು ನಡೆದೇ ಇಲ್ಲವೆಂಬಷ್ಟು ಅಪ್ರಸ್ತುತವಾಗಿ ಬಿಡುತ್ತಿದೆ. ಮಾಧ್ಯಮಗಳ ಪ್ರಭಾವದಿಂದ 150 ಜನ ಮಧ್ಯಮ ವರ್ಗದವರು ಮಾಡುವ ಪ್ರತಿಭಟನೆ 4000 ಜನ ಸ್ಲಂವಾಸಿಗಳು ಮಾಡುವ ಪ್ರತಿಭಟನೆಗಿಂತ ಪ್ರಮುಖವಾಗಿಬಿಡುತ್ತಿದೆ. 150 ಜನ ಮಧ್ಯಮ ವರ್ಗದವರು ಟೀ ಶರ್ಟ್ ಹಾಕಿಕೊಂಡು ನಡೆಸುವ ಪ್ರತಿಭಟನೆಗಳು 5000 ರೈತರ ಪ್ರತಿಭಟನೆಗೆ ಸಮವಾಗಿ ಬಿಡುತ್ತದೆ."


-ನಿಶಾ ಸೂಸನ್, ಪತ್ರಕರ್ತೆ

ಕ್ರೌರ್ಯದ ಎದುರು ಮಾನವೀಯತೆಯ ಗೆಲುವು

ಅವರಿಬ್ಬರೂ ಸ್ಮಶಾನವನ್ನು ನೋಡಿಕೊಳ್ಳುತ್ತಿರುವ ಪುರುಷರು. ಅವತ್ತು ರಾಶಿಗಟ್ಟಲೆ ಬರುತ್ತಿರುವ ಹೆಣಗಳಿಗೆ ಸಾಮೂಹಿಕ ಸಮಾಧಿ ತೋಡುತ್ತಾ, ಸತ್ತಿರುವವರಲ್ಲಿ ತಮ್ಮ ಸಂಬಂಧಿಕರು ಮತ್ತು ಪರಿಚಿತರನ್ನು ಕಂಡು ದುಃಖಿಸುತ್ತಿರುವವರು; ಬೆವರಿನೊಂದಿಗೆ ಕಣ್ಣೀರನ್ನೂ ಹರಿಸುತ್ತಿರುವವರು.







ಆಗ ಇನ್ನೊಂದು ಲಾರಿ ಬಂದು ಮತ್ತಷ್ಟು ಹೆಣಗಳ ರಾಶಿಯನ್ನು ಸುರಿಸಿ ಹೋಗುತ್ತದೆ. ಆ ಹೆಣಗಳ ಮಧ್ಯೆ ಸೀರೆ ಉಟ್ಟಿರುವ, ಕೆಂಪು ಬಳೆಗಳನ್ನು ತೊಟ್ಟಿರುವ, ಹಣೆ ಮೇಲಿರುವ ಕುಂಕುಮ ಅಸ್ಪಷ್ಟವಾಗಿ ಕಾಣಿಸುತ್ತಿರುವ ಮಹಿಳೆಯೋರ್ವಳ ಶವ ಇದೆ. ಅದನ್ನು ಗಮನಿಸುವ ಯುವಕ "ಚಾಚಾ, ಬಾ ಇಲ್ಲಿ" ಎಂದು ಹಿರಿಯನನ್ನು ಕರೆಯುತ್ತಾನೆ. ಗುಂಡಿಯಲ್ಲಿ ಹೆಣಗಳನ್ನು ಜೋಡಿಸುತ್ತಿರುವ ಚಾಚಾ ಮೇಲಕ್ಕೆ ಹತ್ತಿ ಬರುತ್ತಾನೆ. ಆಗ ಯುವಕ "ಈ ಹಿಂದೂ ಮಹಿಳೆಯನ್ನು ನಮ್ಮವರೊಂದಿಗೆ ಹೂಳುವುದು ಸರಿಯೇ?" ಎಂದು ಕೇಳುತ್ತಾನೆ. ಅಷ್ಟೊತ್ತಿಗಾಗಲೇ ತನ್ನ ಸಮುದಾಯದವರ ಮಾರಣಹೋಮವನ್ನು ಕಂಡು, ನೂರಾರು ಜನರನ್ನು ಸಮಾಧಿ ಮಾಡಿ ಹೈರಾಣಾಗಿರುವ ಚಾಚಾನಿಗೆ ಅವಳ ಶವವನ್ನು ನೋಡಿ ಕೋಪ, ದುಃಖ, ಆವೇಶವೆಲ್ಲ ಉಕ್ಕಿಬರುತ್ತದೆ. ಆಗ ತನ್ನ ಕೈಯಲ್ಲಿರುವ ಗುದ್ದಲಿಯನ್ನು ಎತ್ತಿ ಆಕೆಯ ಶವವನ್ನು ಥಳಿಸಲು ಮುಂದಾಗುತ್ತಾನೆ. ಆದರೆ ಯುವಕ ಅವನನ್ನು ತಡೆದು ಹಿಂದಕ್ಕೆ ದೂಡುತ್ತಾನೆ; "ಆಗಲೇ ಸತ್ತಿರುವವರಿಗೆ ಹೊಡೆದು ಏನನ್ನು ಸಾಧಿಸುತ್ತೀಯಾ?" ಎಂದು ಪ್ರಶ್ನಿಸುತ್ತಾನೆ. ಅದನ್ನು ಕೇಳಿ ಚಾಚಾ ಬೆಚ್ಚಿಬೀಳುತ್ತಾನೆ. ತನ್ನ ಸುತ್ತಲಿನ ಕ್ರೌರ್ಯ, ಅದಕ್ಕೆ ಪ್ರತಿಘರ್ಷಣೆಯಾಗಿ ತನ್ನಿಂದ ಹೊಮ್ಮಿದ ನೀಚ ಪ್ರತಿಕ್ರಿಯೆ, ತನ್ನ ಅಸಹಾಯಕತೆ.. ಇವೆಲ್ಲವೂ ಚಾಚಾನನ್ನು ದುಃಖದಲ್ಲಿ ಮುಳುಗಿಸುತ್ತದೆ.

"ಆಗಲೇ ಸತ್ತಿರುವವರನ್ನು ಹೊಡೆದು ಏನನ್ನು ಸಾಧಿಸುತ್ತೀಯಾ?" ಎಂಬ ಪ್ರಶ್ನೆ ಚಾಚಾನಿಗೆ ಮಾತ್ರ ಅನ್ವಯಿಸುವುದಿಲ್ಲ, ಬದಲಾಗಿ ನೈತಿಕಪ್ರಜ್ಞೆ ಮತ್ತು ಮಾನವೀಯತೆಯನ್ನು ಕಳೆದುಕೊಂಡು ಮಾರಣಹೋಮಗಳಿಗೆ ಕಾರಣೀಭೂತರಾದವರ ವಿರುದ್ಧ ಪ್ರತೀಕಾರ ಬಯಸುವವರಿಗೂ ಮುಖ್ಯ ಪ್ರಶ್ನೆಯಾಗುತ್ತದೆ.

ಹೀಗೆ ನಮ್ಮನ್ನು ಅಲ್ಲಾಡಿಸುವ ದೃಶ್ಯ ಮತ್ತು ಸಂದೇಶದೊಂದಿಗೆ ಪ್ರತಿಭಾನ್ವಿತ ನಟಿ ನಂದಿತಾ ದಾಸ್ ಅವರು ಪ್ರಥಮ ಬಾರಿಗೆ ನಿರ್ದೇಶಿಸಿರುವ 'ಫಿರಾಖ್' ಎಂಬ ಸಿನಿಮಾ ಪ್ರಾರಂಭವಾಗುತ್ತದೆ. ಆರಂಭದ ದೃಶ್ಯದಲ್ಲೇ ವ್ಯಕ್ತವಾಗುವ ಅನ್ಯಾಯ, ದುಃಖ, ಹಿಂಸೆ, ಕೋಪ ಇತ್ಯಾದಿಗಳನ್ನು ಗ್ರಹಿಸಲು ಪ್ರೇಕ್ಷಕನಿಗೆ ಸಮಯ ನೀಡುವಂತೆ ಕ್ರೆಡಿಟ್ ಟೈಟಲ್‌ಗಳು ತೆರೆಯ ಮೇಲೆ ಸಾಗುತ್ತದೆ. ಅದು ಮುಗಿದ ಕೂಡಲೇ ಈ ಹಿಂಸಾಕಾಂಡ ನಡೆದು ಒಂದು ತಿಂಗಳ ನಂತರದ ಜನರ ಬದುಕಿನತ್ತ ಚಿತ್ರ ಹೊರಳುತ್ತದೆ.

'ಫಿರಾಖ್'ನಲ್ಲಿ ಇತರೆ ಸಿನಿಮಾಗಳಲ್ಲಿರುವಂತೆ ನೇರ ಕತೆ ಎಂಬುದಿಲ್ಲ, ಆದರೆ ಬೇರೆ ರೀತಿಯ ಹಲವಾರು ಕತೆಗಳಿವೆ. ನಗರವೊಂದರ ವಿವಿಧ ವರ್ಗ, ಲಿಂಗ, ವಯಸ್ಸು ಮತ್ತು ಪ್ರದೇಶಗಳಲ್ಲಿ ವಾಸಿಸುತ್ತಿರುವ ಕೆಳಜನರ ಜೀವನದಲ್ಲಿ ಒಂದು ಮುಂಜಾನೆಯಿಂದ ಮತ್ತೊಂದು ಮುಂಜಾನೆಯೊಳಗೆ ನಡೆಯುವ ಸಂಗತಿಗಳು, ಅವುಗಳು ಬೀರುವ ಪರಿಣಾಮಗಳು ಮತ್ತು ಆ ಜನರಲ್ಲಿ ಆಗುವ ಬದಲಾವಣೆಗಳೇ 'ಫಿರಾಖ್' ಚಿತ್ರದ ಕತೆ. ಈ ಚಿತ್ರದ ಹಿನ್ನೆಲೆ 2002ರಲ್ಲಿ ಗುಜರಾತಿನಲ್ಲಿ ಸಂಭವಿಸಿದ ಕೋಮುಗಲಭೆ.

ಚಿತ್ರದಲ್ಲಿ ಆರು ಪ್ರಮುಖ ಪಾತ್ರಗಳಿದ್ದು ಒಂದಕ್ಕೊಂದು ನೇರ ಸಂಬಂಧ ಇಲ್ಲದಿದ್ದರೂ ಅವರೆಲ್ಲ ಒಂದಲ್ಲಾ ಒಂದು ರೀತಿಯಲ್ಲಿ ಹಿಂಸಾಕಾಂಡಕ್ಕೆ ಗುರಿಯಾದವರು. ಉದಾಹರಣೆಗೆ ಮುನೀರಾ ಎಂಬ ಹಸುಳೆಯ ತಾಯಿ. ಗೋಧ್ರಾ ನಂತರ ಗುಜರಾತಿನಲ್ಲಿ ಅಲ್ಪಸಂಖ್ಯಾತರ ಮಾರಣಹೋಮ ನಡೆದಾಗ ಬೇರೆಲ್ಲೋ ಆಶ್ರಯ ಪಡೆದು ಒಂದು ತಿಂಗಳ ನಂತರ ತನ್ನ ಗಂಡ ನವಾಜನೊಂದಿಗೆ ಮನೆಗೆ ಹಿಂದಿರುಗುವ ಮುನೀರಾಳಿಗೆ ಆಘಾತ ಕಾದಿರುತ್ತದೆ. ಗಲಭೆಯಲ್ಲಿ ಅವರ ಪುಟ್ಟ ಮನೆ ಲೂಟಿಯಾಗಿ ಭಸ್ಮಗೊಂಡಿರುತ್ತದೆ. ತನ್ನ ಮನೆಯನ್ನು ಸುಟ್ಟು ಹಾಕಿದವರು ಯಾರೆಂದು ತನ್ನ ಹಿಂದೂ ಸ್ನೇಹಿತೆಗೆ ಗೊತ್ತಿರುತ್ತದೆ ಎಂದೇ ನಂಬಿರುವ ಮುನೀರಾ ಆಕೆಯನ್ನು ಪದೇಪದೇ ಕೇಳುತ್ತಾಳೆ. ಆದರೆ ಆ ಪ್ರಕರಣ ನಡೆದಾಗ ಸ್ನೇಹಿತೆ ಕೂಡ ಅಲ್ಲಿರದಿದ್ದ ಕಾರಣಕ್ಕೆ ಆಕೆಗೆ ಗೊತ್ತಿರುವುದಿಲ್ಲ. ತನ್ನ ಮನೆಯನ್ನು ನಾಶ ಮಾಡಿದವರ ವಿರುದ್ಧ ಕೆಂಡ ಕಾರುತ್ತಿರುವ ಮುನೀರಾ ತನ್ನ ಸ್ನೇಹಿತೆಯನ್ನು ನಂಬುವುದಿಲ್ಲ, ಬದಲಾಗಿ ಬರುಬರುತ್ತಾ ಸ್ನೇಹಿತೆಯನ್ನೇ ಸಂಶಯಿಸಲು ಪ್ರಾರಂಭಿಸುತ್ತಾಳೆ. ಕೋಪ ಹೇಗೆ ಒಬ್ಬರನ್ನು ಒಳಗಿಂದಲೇ ನಾಶ ಮಾಡುತ್ತದೆ ಎಂಬುದನ್ನು ಮುನೀರಾ ಅರಿತಾಗ ಕಣ್ಣೀರಿಡುತ್ತಾಳೆ.

ಆರತಿಯ ಕತೆ ಇನ್ನೊಂದು ರೀತಿಯದ್ದು. ಮಧ್ಯಮ ವರ್ಗದ ಸಂಸಾರವೊಂದರ ಸೊಸೆಯಾಗಿರುವ ಆರತಿ ಅಪ್ಪಟ ಗೃಹಿಣಿ. ಆಕೆ ಎಂದೂ ತನ್ನ ಗಂಡನ ಮುಂದೆ ದನಿ ಎತ್ತಿದವಳಲ್ಲ. ತಾನಾಯಿತು ತನ್ನ ಅಡುಗೆಮನೆಯಾಯಿತು ಎಂದು ಬದುಕಿರುವವಳು. ಆದರೆ ಆ ಹಿಂಸಾಕಾಂಡ ನಡೆಯುತ್ತಿದ್ದಾಗ ಮಹಿಳೆಯೊಬ್ಬಳು ಆಶ್ರಯ ಕೋರಿ ತನ್ನ ಮನೆ ಬಾಗಿಲನ್ನು ತಟ್ಟಿದಾಗ, ಅದನ್ನು ತೆರೆದು ಆಕೆಗೆ ನೆರವಾಗದಿದ್ದದ್ದು ಆರತಿಯನ್ನು ಆಳವಾಗಿ ಕಾಡುತ್ತಿದೆ. ಎಷ್ಟರಮಟ್ಟಿಗೆ ಅಂದರೆ ಪಾಪ ಪ್ರಾಯಶ್ಚಿತ್ತ ಎಂಬಂತೆ ಆಕೆ ತನ್ನ ಕೈಮೇಲೆ ಕಾದ ಎಣ್ಣೆ ಸುರಿದುಕೊಂಡು ನೋವು ಅನುಭವಿಸುತ್ತಾಳೆ.

ಆ ಹಿಂಸಾಕಾಂಡದಲ್ಲಿ ಆರತಿಯ ಸಂಸಾರದ ಪಾತ್ರವೂ ಇದೆ. ಆಕೆಯ ಮೈದುನ ಅಲ್ಪಸಂಖ್ಯಾತರ ಅಂಗಡಿಗಳ ಲೂಟಿಯಲ್ಲಿ ಭಾಗಿಯಾಗಿದ್ದಾನಲ್ಲದೆ, ಮಹಿಳೆಯೋರ್ವಳ ಮೇಲೆ ನಡೆದ ಸಾಮೂಹಿಕ ಅತ್ಯಾಚಾರದಲ್ಲಿ ಪಾಲ್ಗೊಂಡಿದ್ದಾನೆ. ಆರತಿಯ ಗಂಡ ಸಂಜಯ್ ಒಮ್ಮೆ ತನ್ನ ತಮ್ಮನನ್ನು "ಹೇಗಿತ್ತು ಆ ಅನುಭವ, ಚೆನ್ನಾಗಿತ್ತಾ?" ಎಂದು ಕೇಳಿದಾಗ ಅಸಹ್ಯ ಹುಟ್ಟುತ್ತದೆ. ಇಂತಹ ಸಂಸಾರದ ಆರತಿ ಒಮ್ಮೆ ಬೀದಿಯಲ್ಲಿ ಸಿಕ್ಕ ಅನಾಥ ಮುಸಲ್ಮಾನ ಬಾಲಕನನ್ನು ತನ್ನ ಮನೆಗೆ ಕರೆದುಕೊಂಡುಬರುತ್ತಾಳೆ. ಆತನಿಗೆ ಪ್ರೀತಿ ತೋರಿಸಿ ಆಶ್ರಯ ನೀಡುವ ಮೂಲಕ ತನ್ನ ಪಾಪಪ್ರಜ್ಞೆಯನ್ನು ನಿವಾರಿಸಿಕೊಳ್ಳಲು ಯತ್ನಿಸುತ್ತಾಳೆ. ಆದರೆ ತನ್ನ ಗಂಡನ ದೌರ್ಜನ್ಯದಿಂದ ತನ್ನನ್ನೇ ರಕ್ಷಿಸಿಕೊಳ್ಳಲಾರದ ಆರತಿ ಆ ಬಾಲಕನಿಗೆ ಆಶ್ರಯ ನೀಡುವುದಾದರೂ ಹೇಗೆ. ಆದರೆ ಅಂತಹ ಆರತಿ ಕೂಡ ತನ್ನ ಗಂಡನ ವಿರುದ್ಧ ಸಿಡಿದೇಳುತ್ತಾಳೆ, ಮನೆಯನ್ನು ತೊರೆದು ತನ್ನ ಆತ್ಮಸಾಕ್ಷಿಗಾಗಿ ಹುಡುಕತೊಡಗುತ್ತಾಳೆ.

ಮುನೀರಾ ಕೆಲವರ್ಗದವಳಾದರೆ, ಆರತಿ ಮಧ್ಯಮ ವರ್ಗದವಳಾದರೆ, ಸಮೀರ್ ಶೇಖ್ ಮೇಲುವರ್ಗದ, ಸುಲಲಿತವಾಗಿ ಇಂಗ್ಲಿಷ್ ಮಾತಾಡುವ, ಅಂತರಧರ್ಮ ವಿವಾಹವಾಗಿರುವ ಹಣವಂತ. ಸಾಮಾನ್ಯವಾಗಿ ದೊಂಬಿ, ಗಲಭೆಗಳು ಸಮೀರ್‌ನ ವರ್ಗದ ಜನರನ್ನು ತಾಕುವುದೇ ಇಲ್ಲ. ಆದರೆ ಗುಜರಾತಿನಲ್ಲಿ ಹಾಗಲ್ಲ. ಟೀವಿ, ಫ್ರಿಡ್ಜ್ ಇತ್ಯಾದಿ ದುಬಾರಿ ವಸ್ತುಗಳನ್ನು ಮಾರುವ ಮಳಿಗೆಯೊಂದಕ್ಕೆ ಸಮೀರ್ ಪಾರ್ಟನರ್ ಆಗಿದ್ದಾನೆ. ಆ ಕಾರಣಕ್ಕಾಗಿಯೇ ಆ ಮಳಿಗೆ ಲೂಟಿಯಾಗುತ್ತದೆ. ಆಗ ಸಮೀರನಿಗೆ ಭಯ ಶುರುವಾಗುತ್ತದೆ. ತನ್ನ ಹಿಂದೂ ಹೆಂಡತಿಯ ಹೆಸರಿನ ಹಿಂದೆ ತನ್ನ ಮುಸ್ಲಿಮ್ ಐಡೆಂಟಿಟಿಯನ್ನು ಬಚ್ಚಿಡುವ ಸಮೀರ್ ಗುಜರಾತನ್ನೇ ತೊರೆದು ದೆಹಲಿಗೆ ಹಾರಿಹೋಗಲು ನಿರ್ಧರಿಸುತ್ತಾನೆ.

ಆದರೆ ಆ ನಿರ್ಧಾರದ ಹಿಂದೆ ಇರುವ ಹೇಡಿತನ ಆತನನ್ನು ಕಾಡಲಾರಂಭಿಸುತ್ತದೆ. ಜೊತೆಗೆ ತಾನು ಎಲ್ಲಿಗೆ ಹೋದರೂ ತನ್ನ ಹೆಸರು ಸಮೀರ್ ಶೇಖ್ ಎಂಬುದನ್ನು, ತಾನೋರ್ವ ಮುಸಲ್ಮಾನ್ ಎಂಬುದನ್ನು ಬದಲಾಯಿಸಲಾಗುವುದಿಲ್ಲ ಎಂಬ ಅರಿವು ಮೂಡುತ್ತದೆ. ಆಗ ಆತ ತನ್ನ ಹೆಂಡತಿಯೊಂದಿಗೆ ಗುಜರಾತಿನಲ್ಲೇ ಇದ್ದು ಬಂದದ್ದನ್ನು ಎದುರಿಸುವ ಧೈರ್ಯ ತಂದುಕೊಳ್ಳುತ್ತಾನೆ.

ಇನ್ನು ಸಂತನಂತಿರುವ ಸಂಗೀತಗಾರ ಖಾನ್ ಸಾಹೇಬರ ಜೀವನದೃಷ್ಟಿಯೇ ಬೇರೆ. ಗಲಭೆಗಳು ಪ್ರಾರಂಭವಾದಾಗ "ಯಾರು ಯಾರನ್ನು ಕೊಲ್ಲುತ್ತಿದ್ದಾರೆ ಎಂಬುದಕ್ಕಿಂತ ಮನುಷ್ಯರು ಮನುಷ್ಯರನ್ನು ಕೊಲ್ಲುತ್ತಿದ್ದಾರಲ್ಲಾ" ಎಂದು ವ್ಯಥೆಪಡುತ್ತಾನೆ. ಆರಂಭದಲ್ಲಿ ಇದೊಂದು ಸಣ್ಣ ಘಟನೆ ಎಂದು ಭಾವಿಸುವ ಖಾನ್‌ಗೆ ಖ್ಯಾತ ಸೂಫಿ ಸಂತ ವಲಿ ದಖ್ಖನಿಯ ಸಮಾಧಿಯನ್ನೂ ನಾಶಗೊಳಿಸುವ ಹಂತಕ್ಕೆ ಹೋದದ್ದು ಆತಂಕವನ್ನು ಉಂಟುಮಾಡುತ್ತದೆ. ಆಗ ಆತ ಹೇಳುತ್ತಾನೆ "ಇಂತಹ ದ್ವೇಷದ ಮುಂದೆ ಸಂಗೀತದ ಏಳು ಸ್ವರಗಳಿಗೆ ಯಾರ ಶಕ್ತಿಯೂ ಉಳಿಯುವುದಿಲ್ಲ."

ಹಿಂಸೆಗೆ ಪ್ರತಿಹಿಂಸೆ ಸರಿಯಾದ ಮಾರ್ಗವಲ್ಲ ಎಂಬುದಕ್ಕೆ ಮುನೀರಾಳ ಗಂಡ ನವಾಜನ ಕತೆಯಿಂದ ಅರ್ಥವಾಗುತ್ತದೆ. ಗಲಭೆಯಲ್ಲಿ ತನ್ನ ಮನೆ ಭಸ್ಮವಾಗಿರುವುದು, ತನ್ನವರು ಕೊಲೆಗೀಡಾಗಿರುವುದು... ಇದನ್ನೆಲ್ಲ ಕೇಳಿ ನವಾಜ್ ಉದ್ರೇಕಗೊಳ್ಳುತ್ತಾನೆ. ತನ್ನ ಕೈಯಲ್ಲಿ ಒಂದು ಅಸ್ತ್ರ ಇದ್ದಿದ್ದರೆ ಅವರನ್ನು ಕೊಂದು ಹಾಕುತ್ತಿದ್ದೆ ಎಂದು ಶಪಿಸುತ್ತಾನೆ. ಹಾಗೆಯೇ ಗನ್ ಒಂದನ್ನು ಹುಡುಕಿಕೊಂಡು ಹೋಗುತ್ತಾನೆ. ಆ ಪ್ರಕ್ರಿಯೆಯಲ್ಲಿ ಪೊಲೀಸರು ಅವನನ್ನು ಅಟ್ಟಿಸಿಕೊಂಡು ಬರುತ್ತಾರೆ. ಪೊಲೀಸರಿಂದ ಬಚಾವಾಗುವ ನವಾಜನ ತಲೆ ಮೇಲೆ ಹಿಂದೂ ಒಬ್ಬ ಏಟು ಕೊಟ್ಟಾಗ ನವಾಜ್ ಸಾಯುತ್ತಾನೆ. ಯಾರನ್ನಾದರೂ ಸಾಯಿಸಿ ಪ್ರತೀಕಾರ ಸಾರಬೇಕೆಂದು ಹೊರಡುವ ನವಾಜ್ ಹೀಗೆ ತಾನೇ ಹೆಣವಾಗುತ್ತಾನೆ.

ಕೊನೆಯದಾಗಿ ಪುಟ್ಟ ಬಾಲಕ ಮೊಹಿಸಿನ್ ಕತೆ. ಗಲಭೆಯಲ್ಲಿ ಈ ಹುಡುಗ ಅಪಾರ ಕ್ರೌರ್ಯವನ್ನು ಕಣ್ಣಾರೆ ಕಂಡಿದ್ದಾನೆ. ತನ್ನ ತಾಯಿ ಮತ್ತು ಚಿಕ್ಕಮ್ಮಳನ್ನು ಬೆತ್ತಲೆಗೊಳಿಸಿ ಸುಟ್ಟು ಹಾಕಿದ್ದನ್ನು, ಪುರುಷರನ್ನು ಕೊಂದದ್ದನ್ನು ನೋಡಿದ್ದಾನೆ. ಆ ಗಲಭೆಗಳಲ್ಲಿ ಮೊಹಿಸಿನ್ ತನ್ನ ತಂದೆಯನ್ನೂ ಕಳೆದುಕೊಂಡಿದ್ದರೂ ಅದು ಆತನಿಗೆ ಗೊತ್ತಿಲ್ಲ. ಆದ್ದರಿಂದ ನಿರಾಶ್ರಿತರ ಕ್ಯಾಂಪಿನಿಂದ ತಪ್ಪಿಸಿಕೊಂಡು ಊರನ್ನು ಸುತ್ತುತ್ತಾ ತನ್ನ ಅಪ್ಪನಿಗಾಗಿ ಹುಡುಕುತ್ತಿದ್ದಾನೆ. ಚಿತ್ರದ ಅಂತಿಮ ದೃಶ್ಯದಲ್ಲಿ ವಿಧಿ ಇಲ್ಲದೆ ನಿರಾಶ್ರಿತರ ಕ್ಯಾಂಪಿಗೆ ವಾಪಸ್ಸಾಗುತ್ತಾನೆ.

'ಫಿರಾಖ್' ಇವರೆಲ್ಲರ ಕತೆಗಳನ್ನು ಇಲ್ಲಿ ನೀಡಿರುವಂತೆ ಪ್ರತ್ಯೇಕವಾಗಿ ಹೇಳದೆ ಜೊತೆಜೊತೆಯಾಗಿ ಸಾಗುತ್ತದೆ. ಕೋಮುಗಲಭೆ ಮತ್ತು ದೌರ್ಜನ್ಯ ಹಿಂಸೆ ಮತ್ತು ಅವುಗಳ ಪರಿಣಾಮಗಳು ಈ ಚಿತ್ರದ ಕಥಾಹಂದರವಾದರೂ ಎಲ್ಲೂ ಒಂದೇ ಒಂದು ಗಲಭೆ, ದೌರ್ಜನ್ಯ ಅಥವಾ ಹಿಂಸೆಯ ದೃಶ್ಯಗಳಿಲ್ಲ, ಬದಲಾಗಿ ಅವುಗಳ ಮುಂದೆ ಹೇಗೆ ಮನುಷ್ಯರ ಮಾನವೀಯತೆ ಗೆಲ್ಲುತ್ತದೆ ಎಂದು ಸಾರುತ್ತದೆ.

ನಂದಿತಾ ದಾಸ್ ನಿರ್ದೇಶನದ ಈ ಚಿತ್ರ ಇತ್ತೀಚೆಗೆ ಬಿಡುಗಡೆಗೊಂಡು ಒಂದು ವಾರದಲ್ಲೇ ಚಿತ್ರಮಂದಿರಗಳಿಂದ ಎತ್ತಂಗಡಿಯಾಗಿತ್ತು. ಆದರೆ ಅದೃಷ್ಟವಶಾತ್ ಅದನ್ನು ಈಗ ಡಿವಿಡಿ ರೂಪದಲ್ಲಿ ಬಿಡುಗಡೆ ಮಾಡಲಾಗಿದೆ.


'ಫಿರಾಖ್' ಅಂದರೆ ಅಗಲಿಕೆ ಮತ್ತು ಅನ್ವೇಷಣೆ ಎಂಬ ಎರಡೂ ಅರ್ಥಗಳಿವೆ. ಚುನಾವಣೆಯ ಅಬ್ಬರದ ನಡುವೆ ಈ ಚಿತ್ರದ ಬಗ್ಗೆ ಸಾಕಷ್ಟು ಚೆನ್ನಾಗಿ ಬರೆಯಲಾಗಿಲ್ಲ ಅನ್ನಿಸುತ್ತಿದೆ. ಆದರೇನಂತೆ ಇದರ ಡಿವಿಡಿ ಪ್ರತಿಗಳು ಈ ಮಾರುಕಟ್ಟೆಯಲ್ಲಿ ಲಭ್ಯವಿವೆ. ಎಲ್ಲರೂ ಇದನ್ನು ನೋಡುವಂತಾಗಲಿ ಎಂದು ಆಶಿಸುತ್ತೇನೆ.... ■



ಕಂಡಹಾಗೆ


■ ಗೌರಿ ಲಂಕೇಶ್

ಅಶೋಕ್ ಎಂಬ ಐರನ್‌ಲೆಗ್



ಸದ್ಯ ಬಿಜೆಪಿ ಪಾಳಯದಲ್ಲಿ ಹುಟ್ಟಿಕೊಂಡ ಟೈಮ್‌ಪಾಸ್ ಕುಚೋದ್ಯವೊಂದರ ಪ್ರಕಾರ ಹೇಗೆ ದೇವೇಗೌಡರು ಹೆಗಲಿಗೆ
ಕೈಯಿಟ್ಟವರೆಲ್ಲ ನಾಶವಾಗುತ್ತಾರೋ ಹಾಗೇ ಬಿಜೆಪಿ ಪಾಲಿಗೆ ಸಾರಿಗೆ ಮಂತ್ರಿ ಆರ್. ಅಶೋಕ್ ಭಸ್ಮಾಸುರನಂತೆ!
ಮೊದಲಿಗೆ ಮೈಸೂರಿನ ಜಿ.ಟಿ. ದೇವೇಗೌಡರನ್ನು ಅಶೋಕ್ ಬಿಜೆಪಿಗೆ ಕರೆತಂದರು. ಅದ್ಯಾವ ಗಳಿಗೆಯಲ್ಲಿ ಅಶೋಕ್
ಹೆಗಲಿಗೆ ಕೈಯಿಟ್ಟರೋ ಅವತ್ತಿನಿಂದ ಜೀಟಿ ಮೇಲೆದ್ದಿಲ್ಲ. ನಂತರದ ಸರದಿ ಚಿತ್ರನಟ ಜಗ್ಗೇಶ್‌ದಾಗಿತ್ತು. ತುರುವೇಕೆರೆಯಿಂದ
ಗೆದ್ದು ಎಮ್ಮೆಲ್ಲೇಯಾಗಿದ್ದ ಜಗ್ಗೇಶ್ ತಲೆ ಮೇಲೆ ಅಶೋಕ್ ಕೈಬಿದ್ದಾಗಿನಿಂದ ಜಗ್ಗೇಶ್ ಪಾಲಿಗೆ ಒಳಿತೆಂಬುದೇ ಇಲ್ಲ. ಇದ್ದ
ಎಮ್ಮೆಲ್ಲೇಗಿರಿ ಹೋಯ್ತು, ತುರುವೇಕೆರೆ ಕ್ಷೇತ್ರವೇ ಕೈತಪ್ಪಿತು. ತುಮಕೂರಿನ ಲೋಕಸಭೆಗೆ ನಿಲ್ಲುವ ಕನಸೂ ಮಣ್ಣು
ಪಾಲಾಯ್ತು, ನಟಿಸಿದ ಸಿನಿಮಾಗಳೂ ನೆಲಕಚ್ಚಿತು.
ಜಗ್ಗೇಶ್‌ಗಾದ ಗತಿಯೇ ಮಂಡ್ಯದ ಡೀಸಿ ತಮ್ಮಣ್ಣನಿಗಾಯ್ತು. ಮದ್ದೂರು ಉಪಚುನಾವಣೆಯಲ್ಲಿ ಸೋಲಾಯ್ತು, ಕ್ರಿಮಿನಲ್
ಕೇಸು ಬಿತ್ತು, ಮಧು ಮಾದೇಗೌಡರಿಗೆ ಅವರದೇ ಪಕ್ಷದವರಿಂದ ಒದೆ ಬಿತ್ತು. ಅಶೋಕ್ ನಂಬಿಕೊಂಡೇ ಬಿಜೆಪಿಗೆ ಬಂದ
ಚಿಕ್ಕಣ್ಣ ಪುತ್ರನ ಮಗ ಗೌರಿಶಂಕರನ ಪಾಲಿಗಿದ್ದ ಎಮ್ಮೆಲ್ಲೇಗಿರಿಯೂ ಕೈತಪ್ಪಿತು. ಅಶೋಕ್ ನಂಬಿಕೊಂಡು ಬಿಜೆಪಿಗೆ ಬಂದ
ಮತ್ತೊಬ್ಬ ಕಾಂಗ್ರೆಸ್ ನಾಯಕ ಕನಕಪುರದ ನಾರಾಯಣಗೌಡರದೂ ಇದೇ ಗತಿಯಾಯ್ತು.
ಈಗ ಅಶೋಕ್ ನಂಬಿಕೊಂಡು ಡಿ.ಬಿ. ಚಂದ್ರೇಗೌಡ, ಎಲ್ಲಾರ್ ಶಿವರಾಮೇಗೌಡ ಮತ್ತು ಸಿ.ಪಿ. ಯೋಗೇಶ್ವರ್ ಎಂಬ
ಗೌಡತ್ರಯರು ಬಿಜೆಪಿಗೆ ಕಾಲಿಟ್ಟಿದ್ದಾರೆ. ಹಾಗೇ ಎಚ್.ಸಿ. ಶ್ರೀಕಂಠಯ್ಯ ಎಂಬ ಮುದಿ ಪತಿವ್ರತೆಯೂ ಬಿಜೆಪಿ ಹೊಕ್ಕಿದ್ದಾರೆ.
ಅಶೋಕ್ ಇವರ ಪಾಲಿಗೆ ಐರನ್ ಲೆಗ್ಗಾ, ಶನಿಮಹಾತ್ಮನಾ ಅಥವಾ ಭಸ್ಮಾಸುರನಾ ಎಂಬುದಕ್ಕೆ ಹೆಚ್ಚು ದಿನಕಾಯಬೇಕಿಲ್ಲ,
ಚುನಾವಣೆ ಕಳೆಯುವುದರೊಳಗೆ ಅಶೋಕ್ ಮಹಿಮೆ ಗೊತ್ತಾಗಲೇಬೇಕಲ್ಲವೆ? ■

ಬೆಕ್ಕಿಗೆ ಗಂಟೆ ಕಟ್ಟೋರ್‍ಯಾರು?



ಅಮೆರಿಕ ಅಧ್ಯಕ್ಷ ಬರಾಕ್ ಒಬಾಮಾ 'ಅಣ್ವಸ್ತ್ರ ಮುಕ್ತ ವಿಶ್ವ' ನಿರ್ಮಾಣಕ್ಕೆ ಮುಂದಾಗಿದ್ದಾರೆ. ಏಪ್ರಿಲ್ ಮೊದಲ ವಾರದಲ್ಲಿ ಅವರು ಚೆಕ್ ಗಣರಾಜ್ಯದಲ್ಲಿ ಮಾತನಾಡುತ್ತಾ ಅಣ್ವಸ್ತ್ರಗಳಿರದ ಪ್ರಪಂಚವನ್ನು ನಿರ್ಮಾಣ ಮಾಡುವುದಕ್ಕಾಗಿ ಒಂದು ರೋಡ್ ಮ್ಯಾಪ್ ಅನ್ನು ಜಗತ್ತಿನ ಮುಂದಿಟ್ಟಿದ್ದಾರೆ. ಅವರ ಈ **initiative** ತುಂಬಾ ಒಳ್ಳೆಯದೆ. ದ್ವಿತೀಯ ಮಹಾಯುದ್ಧದ ಅಂತ್ಯದ ವೇಳೆಗೆ ಜಪಾನ್‌ನ ಹಿರೋಶಿಮ ಮತ್ತು ನಾಗಸಾಕಿಗಳ ಮೇಲೆ ಮೊಟ್ಟ ಮೊದಲ ಬಾರಿಗೆ ಅಣುಬಾಂಬ್ ಸ್ಫೋಟಿಸಿ ಸಾವಿರಾರು ಜನರನ್ನು ಕ್ಷಣಾರ್ಧದಲ್ಲಿ ಭಸ್ಮ ಮಾಡುವ ಮೂಲಕ ಭೂಮಿಯ ಮೇಲೆ ನರಕ ಸೃಷ್ಟಿಸುವ ಅಣುಬಾಂಬ್ ಪರಂಪರೆಗೆ ನಾಂದಿ ಹಾಡಿದ್ದು ಇದೇ ಅಮೆರಿಕ. ಅಂದು ಮಾಡಿದ ತಪ್ಪನ್ನು ಈಗ ಅರ್ಧಶತಮಾನದ ನಂತರ ತಿದ್ದಿಕೊಳ್ಳುವುದಕ್ಕೆ ಅದೇ ದೇಶ ಮುಂದಾಗುತ್ತಿರುವುದು ಒಳ್ಳೆಯ ಬೆಳವಣಿಗೆಯೆ.


ಅಣ್ವಸ್ತ್ರ ಮುಕ್ತ ವಿಶ್ವ ನಿರ್ಮಾಣವಾಗಬೇಕು ಎಂಬುದು ವಿಶ್ವದ ಪ್ರತಿಯೊಬ್ಬರ ಆಶಯ. ಅಣ್ವಸ್ತ್ರಗಳು ಕ್ಷಣಾರ್ಧದಲ್ಲಿ ಲಕ್ಷಾಂತರ ಜನರನ್ನು ಸುಟ್ಟು ಬೂದಿ ಮಾಡಬಲ್ಲ ಅಪಾಯಕಾರಿ ಅಸ್ತ್ರಗಳಾಗಿವೆ. ಅವುಗಳನ್ನು ಪ್ರಯೋಗಿಸಿದ ಹತ್ತಾರು ವರ್ಷಗಳ ನಂತರವೂ ಯುರೇನಿಯಂ ಮತ್ತು ಥೋರಿಯಂ ಹೊರಸೂಸುವ ವಿಕಿರಣಗಳು ಹಲವಾರು ಪೀಳಿಗೆಗಳನ್ನು ಬಾಧಿಸುತ್ತಲೇ ಇರುತ್ತವೆ. ಈಗ ಈ ಅಣ್ವಸ್ತ್ರಗಳು ಯಾವುದೋ ಒಂದು ದೇಶದ ಬಳಿ ಮಾತ್ರ ಇವೆ ಎಂದೇನೂ ಇಲ್ಲ. ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ರಶಿಯ, ಚೀನ, ಭಾರತ, ಪಾಕಿಸ್ತಾನ, ಉತ್ತರ ಕೊರಿಯ ದೇಶಗಳು ಬಹಿರಂಗವಾಗಿ ಅಣ್ವಸ್ತ್ರಗಳನ್ನು ಅಭಿವೃದ್ಧಿಪಡಿಸಿದ್ದರೆ ಇಸ್ರೇಲ್, ಇರಾನ್, ಸಿರಿಯಾಗಳಂಥ ಇನ್ನಿತರ ದೇಶಗಳು ಅವುಗಳನ್ನು ರಹಸ್ಯವಾಗಿ ಅಭಿವೃದ್ಧಿ ಪಡಿಸಿವೆ. ಒಂದು ದೇಶ ಏನಾದರೂ ಅಣ್ವಸ್ತ್ರ ಪ್ರಯೋಗ ಪ್ರಾರಂಭಿಸಿದರೆ ಉಳಿದ ದೇಶಗಳೇನೂ ಸುಮ್ಮನೇ ಕುಳಿತುಕೊಳ್ಳುವುದಿಲ್ಲ. ವಿಶ್ವದ ಹತ್ತಾರು ದೇಶಗಳಲ್ಲಿ ಈ ಅಪಾಯಕಾರಿ ಅಸ್ತ್ರಗಳು ಸ್ಫೋಟಗೊಂಡು ಇಡೀ ಭೂಮಂಡಲವೇ ಸುಟ್ಟು ಭಸ್ಮವಾಗುತ್ತದೆ. ಅಣ್ವಸ್ತ್ರಗಳು ಕೇವಲ ಒಂದು ದೇಶಕ್ಕೆ ಮಾತ್ರವಲ್ಲ ಭೂಮಿಯ ಮೇಲಿನ ಇಡೀ ಮನುಕುಲಕ್ಕೆ ಅಪಾಯಕಾರಿ ಎಂಬುದರಲ್ಲಿ ಪ್ರಾಯಶಃ ಯಾರಿಗೂ ಅನುಮಾನವಿಲ್ಲ. ಈ ಹಿನ್ನೆಲೆಯಲ್ಲಿ ಅಣ್ವಸ್ತ್ರ ಮುಕ್ತ ವಿಶ್ವ ನಿರ್ಮಾಣವಾಗುವುದು ಇಂದಿನ ಅಗತ್ಯ ಮಾತ್ರವಲ್ಲ, ಮನುಕುಲದ ಅಸ್ತಿತ್ವ ಮುಂದುವರೆಯಬೇಕಾದರೆ ಅದು ಅನಿವಾರ್ಯ ಕೂಡ.

ಇಂಥ ಒಂದು ಚಾರಿತ್ರಿಕ ಕೆಲಸ ಎಲ್ಲಿಂದ ಪ್ರಾರಂಭವಾಗಬೇಕು? ಯಾರು ಪ್ರಾರಂಭಿಸಬೇಕು? ಈ ಪ್ರಶ್ನೆಗಳಿಗೆ ಪ್ರಾಯಶಃ ಒಬಾಮಾ ಬಳಿ ಉತ್ತರಗಳಿಲ್ಲ. ಮೊನ್ನೆ ಒಬಾಮಾ ಅಣ್ವಸ್ತ್ರ ಮುಕ್ತ ವಿಶ್ವ ನಿರ್ಮಾಣಕ್ಕೆ ರೋಡ್ ಮ್ಯಾಪ್ ಮಂಡಿಸಿ ಮಾಡಿದ ಭಾಷಣದಲ್ಲೇ ಎಲ್ಲಿಯತನಕ ಇರಾನ್ ಅಣ್ವಸ್ತ್ರಗಳನ್ನು ನಿರ್ಮಿಸುತ್ತಿರುತ್ತೋ ಅಲ್ಲಿಯತನಕ ಅಮೆರಿಕ ಅಣ್ವಸ್ತ್ರ ರಕ್ಷಕ ಕ್ರಮಗಳನ್ನು ಕೈಗೊಳ್ಳುತ್ತಲೇ ಇರುತ್ತೆ ಎಂದಿದ್ದಾರೆ. ನಾಳೆ ಇರಾನ್ ಕೂಡ ಎಲ್ಲಿಯತನಕ ಅಮೆರಿಕದ ಬಳಿ ಅಣ್ವಸ್ತ್ರಗಳಿರುತ್ತವೆಯೋ ಅಲ್ಲಿಯತನಕ ತನ್ನನ್ನು ರಕ್ಷಿಸಿಕೊಳ್ಳುವುದಕ್ಕೆ ತಾನೂ ಅಣ್ವಸ್ತ್ರ ಹೊಂದುತ್ತೇನೆಂದು ಇದೇ ರೀತಿಯ ವಾದವನ್ನು ಮುಂದಿಡಬಹುದು. ಅಣ್ವಸ್ತ್ರ ಹೊಂದಿದ ಪ್ರತಿಯೊಂದು ದೇಶವೂ ಮತ್ತೊಂದು ಅಣ್ವಸ್ತ್ರ ಹೊಂದಿದ ದೇಶದಿಂದ ತನ್ನನ್ನು ರಕ್ಷಿಸಿಕೊಳ್ಳುವುದಕ್ಕೆ ಅಣ್ವಸ್ತ್ರ ಹೊಂದಿದೆ ಎಂಬ ಸಮರ್ಥನೆ ಯಾವಾಗಲೂ ಇದ್ದೇ ಇರುತ್ತದೆ. ಈ ಹಿನ್ನೆಲೆಯಲ್ಲಿ 'ಅಣ್ವಸ್ತ್ರ ಮುಕ್ತ ವಿಶ್ವ ನಿರ್ಮಾಣದ ಕೆಲಸ ಎಲ್ಲಿಂದ ಪ್ರಾರಂಭಿಸಬೇಕು, ಯಾರು ಪ್ರಾರಂಭಿಸಬೇಕು' ಎಂಬ ಪ್ರಶ್ನೆಗಳು ಮಹತ್ವ ಪಡೆದುಕೊಳ್ಳುತ್ತವೆ.

ವಿಶ್ವದಲ್ಲಿ ಅತೀ ಹೆಚ್ಚು ಅಣ್ವಸ್ತ್ರಗಳನ್ನು ಹೊಂದಿರುವ ದೇಶಗಳೆಂದರೆ ಅಮೆರಿಕ ಮತ್ತು ರಶಿಯ. ಅಮೆರಿಕದ ಬಳಿ 2200 ನ್ಯೂಕ್ಲಿಯರ್ ವಾರ್‌ಹೆಡ್‌ಗಳಿದ್ದರೆ ರಶಿಯಾದ ಬಳಿ 2800 ಇವೆ. ಉಳಿದಂತೆ ಫ್ರಾನ್ಸ್ ಬಳಿ 300, ಇಂಗ್ಲೆಂಡ್ ಮತ್ತು ಚೀನ ಬಳಿ ತಲಾ 180, ಇಸ್ರೇಲ್ ಬಳಿ 80, ಭಾರತ ಮತ್ತು ಪಾಕ್ ಬಳಿ ತಲಾ 60, ಉತ್ತರ ಕೊರಿಯದ ಬಳಿ 10 ವಾರ್‌ಹೆಡ್‌ಗಳಿವೆ.

ಅಣ್ವಸ್ತ್ರ ಮುಕ್ತ ವಿಶ್ವ ನಿರ್ಮಾಣದ ದಾರಿಯಲ್ಲಿ ಮೊದಲ ಹೆಜ್ಜೆಯಾಗಿ ಅಣ್ವಸ್ತ್ರಗಳು, ಅಣ್ವಸ್ತ್ರ ತಯಾರಿಸುವ ತಂತ್ರಜ್ಞಾನ ಬೇರೆ ದೇಶಗಳಿಗೂ ವಿಸ್ತರಿಸದಂತೆ ತಡೆಯುವ 1968ರ **Nuclear Nonproliferation Treaty** (ಅಣ್ವಸ್ತ್ರ ಪ್ರಸರಣ ವಿರೋಧಿ ಒಪ್ಪಂದ) ಎಂಬ ಒಪ್ಪಂದಕ್ಕೆ ಅಮೆರಿಕ, ಇಂಗ್ಲೆಂಡ್, ಫ್ರಾನ್ಸ್, ರಶಿಯ, ಚೀನಗಳು ಸಹಿ ಹಾಕಿವೆ. ಆದರೆ ಇಸ್ರೇಲ್, ಪಾಕಿಸ್ತಾನ, ಭಾರತ, ಉತ್ತರ ಕೊರಿಯಾಗಳು ಸಹಿ ಹಾಕುವುದಕ್ಕೆ ಸಿದ್ಧವಿಲ್ಲ. ಅದಕ್ಕೆ ತಮ್ಮದೇ ಆದ ತಾರ್ಕಿಕ ಕಾರಣಗಳೂ ಇವೆ.

ಸಾರಾಂಶದಲ್ಲಿ ಹೇಳುವುದಾದರೆ ಅಣ್ವಸ್ತ್ರ ಮುಕ್ತ ವಿಶ್ವ ನಿರ್ಮಾಣವಾಗುವುದು ಎಲ್ಲರಿಗೂ ಬೇಕು. ಆದರೆ, ಅದನ್ನು ಪ್ರಾರಂಭಿಸುವುದು ಯಾರು? 'ಬೆಕ್ಕಿಗೆ ಗಂಟೆ ಕಟ್ಟೋರ್‍ಯಾರು' ಎಂಬಂತೆ ಎಲ್ಲರೂ ಬಯಸುತ್ತಾರೆ, ಮಾತನಾಡುತ್ತಾರೆಯೇ ಹೊರತು ಅದನ್ನು ಆಗು ಮಾಡುವುದಕ್ಕೆ ಯಾರೊಬ್ಬರೂ ಮುಂದಾಗುವುದಿಲ್ಲ. ಅದು ಒಬಾಮಾ ವಿಚಾರದಲ್ಲೂ ಸತ್ಯ. ಅಣ್ವಸ್ತ್ರ ಮುಕ್ತ ವಿಶ್ವ ನಿರ್ಮಾಣವಾಗಬೇಕೆಂದರೆ ಮೊದಲು ಆ ಕೆಲಸ ಅಮೆರಿಕ ಮತ್ತು ರಶಿಯಾದಿಂದಲೇ ಪ್ರಾರಂಭಗೊಳ್ಳಬೇಕು. ಮಾತಿನಲ್ಲಲ್ಲ, ಕ್ರಿಯೆಯಲ್ಲಿ. ಆಗ ಮಾತ್ರವೇ ಒಬಾಮಾಗೂ, ಮೆಡ್ವದೇವ್‌ಗೂ ಅಣ್ವಸ್ತ್ರ ಮುಕ್ತರಾಗಲು ಇನ್ನಿತರ ರಾಷ್ಟ್ರಗಳನ್ನು ಒತ್ತಾಯಿಸುವುದಕ್ಕೆ ನೈತಿಕ ಹಕ್ಕಿರುತ್ತದೆ. ■



ನಿಲ್ಲದ ಕಂದಮಾಲ್ ಗೋಳು


ಹಿಂದುತ್ವ ಭಯೋತ್ಪಾದಕರು ಒರಿಸ್ಸಾದ ಕಂದಮಾಲ್‌ನಲ್ಲಿ ಹೊತ್ತಿಸಿದ ಬೆಂಕಿ ಇಂದಿಗೂ ಕ್ರಿಶ್ಚಿಯನ್ ಸಮುದಾಯವನ್ನು ಜೀವಂತವಾಗಿ ಸುಡುತ್ತಿದೆ. ಗಾಯದ ಮೇಲೆ ಬರೆ ಎಳೆದಂತೆ ಈಗ ನವೀನ್ ಪಟ್ನಾಯಕ್ ನೇತೃತ್ವದ ಒರಿಸ್ಸಾ ಸರ್ಕಾರ ಹಿಂಸೆಯ ಬಲಿಪಶುಗಳಿಗೆ ಯಾವುದೇ ಪುನರ್ವಸತಿಯನ್ನು ಕಲ್ಪಿಸದೇ ನಿರಾಶ್ರಿತ ಶಿಬಿರಗಳನ್ನು ಮುಚ್ಚುವುದಕ್ಕೆ ಪ್ರಾರಂಭಿಸಿದೆ.


ನಿಮಗೆ ನೆನಪಿರಬಹುದು 2008ರ ಆಗಸ್ಟ್ ತಿಂಗಳಲ್ಲಿ ಸ್ವಾಮಿ ಲಕ್ಷ್ಮಣಾನಂದ ಸರಸ್ವತಿಯನ್ನು ಕೊಂದಿದ್ದು ತಾವೇ ಎಂದು ಮಾವೋವಾದಿಗಳು ಪದೇ ಪದೇ ಹೇಳಿದರೂ ಸಂಘಪರಿವಾರದ ರಾಕ್ಷಸರು ಆ ಕೊಲೆಯ ಅಪರಾಧವನ್ನು ಅಮಾಯಕ ಕ್ರಿಶ್ಚಿಯನ್ ಸಮುದಾಯದ ಮೇಲೆ ಹೊರಿಸಿ ವ್ಯವಸ್ಥಿತವಾಗಿ ದಾಳಿ ನಡೆಸಿದರು. ಕಂಡಕಂಡಲ್ಲಿ ಕ್ರಿಶ್ಚಿಯನ್ನರನ್ನು ಕೊಲ್ಲುವುದು, ನನ್‌ಗಳನ್ನು ರೇಪ್ ಮಾಡುವುದು, ಚರ್ಚುಗಳಿಗೆ ಬೆಂಕಿಯಿಡುವುದು, ಕ್ರಿಶ್ಚಿಯನ್‌ರ ಮನೆಮಠಗಳನ್ನು ಧ್ವಂಸಗೊಳಿಸುವುದು ನಿರಂತರವಾಗಿ ನಡೆದೇ ಇತ್ತು. ಈ ಮಾರಣಹೋಮದಲ್ಲಿ 140ಕ್ಕೂ ಹೆಚ್ಚು ಚರ್ಚುಗಳು ಸಂಪೂರ್ಣವಾಗಿ ಧ್ವಂಸವಾದವಲ್ಲದೇ 40ಕ್ಕೂ ಹೆಚ್ಚು ಅಮಾಯಕ ಕ್ರಿಶ್ಚಿಯನ್ನರು ಪ್ರಾಣ ಕಳೆದುಕೊಂಡರು. ಸಾವಿರಾರು ಸಂಖ್ಯೆಯಲ್ಲಿ ಕ್ರಿಶ್ಚಿಯನ್ನರ ಮನೆಮಠಗಳು ಸುಟ್ಟು ಭಸ್ಮವಾದ್ದರಿಂದ ಸುಮಾರು 22,000 ಜನ ನಿರಾಶ್ರಿತರಾದರು.

ಇಡೀ ದೇಶದಾದ್ಯಂತ ಈ ಮಾರಣಹೋಮದ ವಿರುದ್ಧ ಪ್ರತಿಭಟನೆಗಳು ಭುಗಿಲೆದ್ದ ಕಾರಣ ಅನಿವಾರ್ಯವಾಗಿ ನವೀನ್ ಪಟ್ನಾಯಕ್ ನೇತೃತ್ವದ ಒರಿಸ್ಸಾ ಸರ್ಕಾರ ಕೊನೆಗೂ ಕಂದಮಾಲ್‌ಗೆ ಬೆಂಕಿಯಿಟ್ಟವರನ್ನು ಶಿಕ್ಷಿಸುವುದಾಗಿಯೂ, ಘಟನೆಯಲ್ಲಿ ಮನೆಮಠ ಕಳೆದುಕೊಂಡ ನಿರಾಶ್ರಿತರಿಗೆ ಪರಿಹಾರ, ಪುನರ್ವಸತಿ ಕಲ್ಪಿಸುವುದಾಗಿಯೂ ಭರವಸೆ ಕೊಟ್ಟಿತು.

ಈ ದುರ್ಘಟನೆ ನಡೆದು ಈಗ ಎಂಟು ತಿಂಗಳಾಗಿದೆ. ಕಂದಮಾಲ್‌ಗೆ ಬೆಂಕಿಯಿಟ್ಟ 783 ಸಂಘಪರಿವಾರದ ಭಯೋತ್ಪಾದಕರ ಮೇಲೆ ಕೇಸು ದಾಖಲಿಸಲಾಗಿದೆಯೇ ಹೊರತು ಯಾರಿಗೂ ಇಲ್ಲಿಯತನಕ ಶಿಕ್ಷೆಯಾಗಿಲ್ಲ. ಇತ್ತ ಮನೆಮಠ ಕಳೆದುಕೊಂಡು ಬೀದಿಪಾಲಾಗಿರುವ ನಿರಾಶ್ರಿತ ಕುಟುಂಬಗಳಿಗೆ ಯಾವುದೇ ಪರಿಹಾರವಾಗಲೀ, ಪುನರ್ವಸತಿಯಾಗಲೀ ದೊರಕಿಲ್ಲ. ಅವರೆಲ್ಲಾ ಹಂದಿಗೂಡುಗಳಂತಿರುವ ನಿರಾಶ್ರಿತರ ಶಿಬಿರಗಳಲ್ಲೇ ಇಂದಿಗೂ ವಾಸಿಸಬೇಕಾಗಿದೆ. ಇಂತಹ ಘೋರ ಪರಿಸ್ಥಿತಿಯಲ್ಲಿ ನಿರಾಶ್ರಿತ ಶಿಬಿರಗಳನ್ನು ಮುಚ್ಚುವುದಕ್ಕೆ ಸರ್ಕಾರ ಮುಂದಾಗಿದೆ. ಈಗಾಗಲೇ ಕೆಲವು ಶಿಬಿರಗಳನ್ನು ಮುಚ್ಚಿಯೂ ಆಗಿದೆ. ಹಾಗಾದರೆ ಅವರೆಲ್ಲಾ ಎಲ್ಲಿಗೆ ಹೋಗಬೇಕು? ತಮ್ಮ ತಮ್ಮ ಹಳ್ಳಿಗಳಿಗೆ ಮರಳಿದರೆ ತಂಗುವುದಕ್ಕೆ ತಲೆಯ ಮೇಲೊಂದು ಸೂರಿಲ್ಲ, ಮಾಡುವುದಕ್ಕೆ ಕೆಲಸವಿಲ್ಲ. ಅವರು ಬದುಕುವುದಾದರೂ ಹೇಗೆ?

ಇದೇ ಏಪ್ರಿಲ್ 16 ಮತ್ತು 23ರಂದು ಒರಿಸ್ಸಾದಲ್ಲಿ ಲೋಕಸಭಾ ಚುನಾವಣೆಗಳು ನಡೆಯಲಿವೆ. ಮೊನ್ನೆ ಮೊನ್ನೆಯತನಕ ಬಿಜೆಪಿಯೊಂದಿಗೆ ಮೈತ್ರಿಯಲ್ಲಿದ್ದ ನವೀನ್ ಪಟ್ನಾಯಕ್ ಈಗ ಅದರೊಂದಿಗೆ ಮೈತ್ರಿ ಕಡಿದುಕೊಂಡು ಸೆಕ್ಯೂಲರ್ ಆಗಿ ಪೋಜು ನೀಡುತ್ತಿದ್ದಾರೆ. ವಾಸ್ತವದಲ್ಲಿ ನವೀನ್ ಪಟ್ನಾಯಕ್ ಅವರ ಸಕ್ರಿಯ ಬೆಂಬಲದೊಂದಿಗೇನೇ ಸಂಘಪರಿವಾರ ಮತ್ತು ಬಿಜೆಪಿ ಕಂದಮಾಲ್‌ಗೆ ಬೆಂಕಿಯಿಟ್ಟದ್ದನ್ನು ಜನ ಮರೆತಿಲ್ಲ. ಈಗ ಪುನರ್ವಸತಿ ಮತ್ತು ಪರಿಹಾರ ನೀಡದೇ ನಿರಾಶ್ರಿತ ಶಿಬಿರಗಳಿಂದಲೂ ಜನರನ್ನು ಹೊರದಬ್ಬುತ್ತಿರುವ ಪಟ್ನಾಯಕ್ ಬರುವ ಚುನಾವಣೆಯಲ್ಲಿ ಅದರ ಬೆಲೆ ತೆರುವುದರಲ್ಲಿ ಅನುಮಾನವಿಲ್ಲ. ■






▸▸ಕುಮಾರ್ ಬುರಡಿಕಟ್ಟಿ

ರ್‍ಯಾಗಿಂಗ್ ಭೂತ

ಮೊನ್ನೆ ಮಾರ್ಚ್ 7ರಂದು ಹಿಮಾಚಲ ಪ್ರದೇಶದ ಡಾ. ರಾಜೇಂದ್ರ ಪ್ರಸಾದ್ ಮೆಡಿಕಲ್ ಕಾಲೇಜಿನ 19 ವರ್ಷ ವಯಸ್ಸಿನ ವಿದ್ಯಾರ್ಥಿ ಅಮನ್ ಕಚ್ರೂನನ್ನು ನಾಲ್ಕು ಜನ ಹಿರಿಯ ವಿದ್ಯಾರ್ಥಿಗಳು ಭೀಕರವಾಗಿ ರ್‍ಯಾಗಿಂಗ್ ಮಾಡಿದ್ದರಿಂದ ಅತ್ತ ಆತ್ಮಹತ್ಯೆ ಮಾಡಿಕೊಂಡು ಪ್ರಾಣ ತೆತ್ತಿದ.




ಅಮನ್ ಕಚ್ರೂ

ಮಾರ್ಚ್ 13ರಂದು ಆಂಧ್ರ ಪ್ರದೇಶದ ಗುಂಟೂರು ಜಿಲ್ಲೆಯ ಬಾಪ್ಟಾಲದಲ್ಲಿರುವ ಸರ್ಕಾರಿ ಕೃಷಿ ತಾಂತ್ರಿಕ ಕಾಲೇಜಿನಲ್ಲಿ ಹಿರಿಯ ವಿದ್ಯಾರ್ಥಿಗಳು ರ್‍ಯಾಗಿಂಗ್ ಹೆಸರಿನಲ್ಲಿ ತ್ರಿವೇಣಿ ಎಂಬ ಪ್ರಥಮ ವರ್ಷದ ವಿದ್ಯಾರ್ಥಿನಿಯಿಂದ ಹಲವಾರು ಬಾರಿ ಬೆತ್ತಲೆಯಾಗಿ ಡಾನ್ಸ್ ಮಾಡಿಸಿದರು. ಈ ಮಾನಸಿಕ, ದೈಹಿಕ ಅವಮಾನ ಮತ್ತು ಚಿತ್ರಹಿಂಸೆಗಳನ್ನು ತಾಳಲಾರದೇ ಆಕೆ ಆತ್ಮಹತ್ಯೆಗೆ ಪ್ರಯತ್ನಿಸಿದಳು. ದುರಂತ ಎಂದರೆ ರ್‍ಯಾಗಿಂಗ್ ಮಾಡಿದವರನ್ನು ಒದ್ದು ಒಳಗೆ ಹಾಕುವ ಬದಲು, ಕಾಲೇಜಿನಲ್ಲಿ ರ್‍ಯಾಗಿಂಗ್‌ಗೆ ಅವಕಾಶ ಕೊಟ್ಟ ಪ್ರಿನ್ಸಿಪಾಲರ ವಿರುದ್ಧ ಕ್ರಮ ಕೈಗೊಳ್ಳುವ ಬದಲು ಪೊಲೀಸರು ತ್ರಿವೇಣಿಯ ಮೇಲೆಯೇ ಆತ್ಮಹತ್ಯೆ ಪ್ರಯತ್ನದ ಕೇಸು ದಾಖಲಿಸಿದರು. ಇದಕ್ಕೂ ಮೊದಲು 2008ರ ಡಿಸೆಂಬರ್‌ನಲ್ಲಿ ಹೈದರಾಬಾದಿನ ಉಸ್ಮಾನಿಯ ವಿಶ್ವವಿದ್ಯಾಲಯದ ಹರಿಕಾ ಎಂಬ 18 ವರ್ಷ ವಯಸ್ಸಿನ ವಿದ್ಯಾರ್ಥಿನಿ ರ್‍ಯಾಗಿಂಗ್‌ನಿಂದ ಮಾನಸಿಕ ಮತ್ತು ದೈಹಿಕ ಹಲ್ಲೆಗೊಳಗಾಗಿ ಆತ್ಮಹತ್ಯೆ ಮಾಡಿಕೊಂಡಿದ್ದಳು.



ತ್ರಿವೇಣಿ

ರ್‍ಯಾಗಿಂಗ್‌ನ ಭೀಕರತೆ ವಿದ್ಯಾರ್ಥಿಗಳ, ಪೋಷಕರ ಮನಸ್ಸಿನಲ್ಲಿನ್ನೂ ಹಸಿ ಹಸಿಯಾಗಿರುವಾಗಲೇ ಮೊನ್ನೆ ತಮಿಳುನಾಡಿನ ಕೊಯಮತ್ತೂರಿನಲ್ಲಿ ಮಲಯಾಳಿ ಕಾದಂಬರಿಕಾರ ಸುನೀಲ್ ಪರಮೇಶ್ವರನ್ ಅವರ ಪುತ್ರ ಅಖಿಲ್ ದೇವ್ ಎಂಬ ವಿದ್ಯಾರ್ಥಿಯ ಮುಖಕ್ಕೆ ಹಿರಿಯ ವಿದ್ಯಾರ್ಥಿಗಳು ರ್‍ಯಾಗಿಂಗ್ ಹೆಸರಿನಲ್ಲಿ ಬೂಟುಗಾಲಿನಿಂದ ಹೊಡೆದು, ಬಡಿದು ಆತನನ್ನು ಅರೆಕುರುಡನನ್ನಾಗಿ ಮಾಡಿದ್ದಾರೆ.



ಇವು ಇತ್ತೀಚೆಗೆ ಮಾಧ್ಯಮಗಳಲ್ಲಿ ವರದಿಯಾದ ಕೆಲವು ಉದಾಹರಣೆಗಳಷ್ಟೆ. ಮಾಧ್ಯಮಗಳ ಗಮನಕ್ಕೆ ಬಾರದ, ಕಾಲೇಜು- ಯೂನಿವರ್ಸಿಟಿ ಕ್ಯಾಂಪಸ್ಸುಗಳಲ್ಲೇ ಮರೆಯಾಗುವ ರ್‍ಯಾಗಿಂಗ್ ಕ್ರೌರ್ಯಗಳು ಇನ್ನೆಷ್ಟಿವೆಯೊ?

ಶೈಕ್ಷಣಿಕ ವರ್ಷ ಆರಂಭವಾಗುತ್ತಿದ್ದಂತೆಯೇ ರ್‍ಯಾಗಿಂಗ್ ಎಂಬ ಪೆಡಂಭೂತ ಹಿರಿಯ ವಿದ್ಯಾರ್ಥಿಗಳ ಮೈಮೇಲೇರಿ ಬಿಡುತ್ತದೆ. ತಾವು ಜೂನಿಯರ್ ವಿದ್ಯಾರ್ಥಿಗಳಾಗಿದ್ದಾಗ ತಮ್ಮ ಸೀನಿಯರ್ ವಿದ್ಯಾರ್ಥಿಗಳಿಂದ ಅನುಭವಿಸಿದ ರ್‍ಯಾಗಿಂಗ್ ಕ್ರೌರ್ಯ ಮತ್ತು ಅವಮಾನಗಳನ್ನು ಬಡ್ಡಿ ಸಮೇತವಾಗಿ ತಮ್ಮ ಜೂನಿಯರ್ ವಿದ್ಯಾರ್ಥಿಗಳ ಮೇಲೆ ತೀರಿಸಿಕೊಳ್ಳುವ ವಿಕೃತಿ ವಿದ್ಯಾರ್ಥಿಗಳ ಮನಸ್ಸನ್ನಾವರಿಸಿರುತ್ತದೆ. ಪರಿಣಾಮವಾಗಿ ಈ ರ್‍ಯಾಗಿಂಗ್ ಚಕ್ರ ಮುನ್ನಡೆಯುತ್ತಲೇ ಇದೆ. ದೇಶದಾದ್ಯಂತ ಸಾವಿರಾರು ವಿದ್ಯಾರ್ಥಿಗಳು ಈ ಪೆಡಂಭೂತಕ್ಕೆ ಬಲಿಪಶುಗಳಾಗುತ್ತಲೇ ಇದ್ದಾರೆ.

ಮಾಧ್ಯಮಗಳ ವರದಿಯನ್ನಾಧರಿಸಿಯೇ ಹೇಳುವುದಾದರೆ, ಕಳೆದ ಏಳು ವರ್ಷಗಳಲ್ಲಿ ಸುಮಾರು ಮೂವತ್ತೈದು ವಿದ್ಯಾರ್ಥಿಗಳು ರ್‍ಯಾಗಿಂಗ್ ಪಿಡುಗಿಗೆ ಬಲಿಯಾಗಿ ಪ್ರಾಣ ತೆತ್ತಿದ್ದಾರೆ. 2007 ಒಂದೇ ವರ್ಷದಲ್ಲಿ ಏಳು ಜನ ವಿದ್ಯಾರ್ಥಿಗಳು ಇದಕ್ಕೆ ಬಲಿಯಾಗಿದ್ದರು.

ಕಾಲೇಜುಗಳಲ್ಲಿ ರ್‍ಯಾಗಿಂಗ್ ಪಿಡುಗನ್ನು ತಡೆಯುವುದಕ್ಕಾಗಿ ಸರ್ಕಾರಗಳು ಹತ್ತಾರು ನೀತಿ, ನಿಯಮ, ಕಾನೂನುಗಳನ್ನು ಜಾರಿ ಮಾಡಿವೆಯಾದರೂ ಅವುಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವಲ್ಲಿ ವಿಫಲವಾಗಿವೆ. ರ್‍ಯಾಗಿಂಗ್ ಸಮಸ್ಯೆಗೆ ಶಾಶ್ವತ ಪರಿಹಾರ ಹುಡುಕುವ ನಿಟ್ಟಿನಲ್ಲಿ 2006ರಲ್ಲಿ ಸುಪ್ರೀಮ್ ಕೋರ್ಟು ಮಾಜಿ ಸಿಬಿಐ ನಿರ್ದೇಶಕರಾಗಿದ್ದ ಆರ್.ಕೆ.ರಾಘವನ್ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಿತ್ತು. ದೇಶದಾದ್ಯಂತ ಬಹುತೇಕ ರ್‍ಯಾಗಿಂಗ್ ಪ್ರಕರಣಗಳನ್ನು ಅಭ್ಯಸಿಸಿದ ಈ ಸಮಿತಿ ಮೇ 7, 2007ರಂದು 50 ಶಿಫಾರಸ್ಸುಗಳನ್ನೊಳಗೊಂಡ ತನ್ನ ಅಂತಿಮ ವರದಿಯನ್ನು ಸಲ್ಲಿಸಿತು. ಅವುಗಳಲ್ಲಿ ಬಹುತೇಕ ಶಿಫಾರಸ್ಸುಗಳನ್ನು ಅಂಗೀಕರಿಸಿದ ಸುಪ್ರೀಂಕೋರ್ಟು ಮೇ 16, 2007ರಂದು 'ಶೈಕ್ಷಣಿಕ ಸಂಸ್ಥೆಗಳಲ್ಲಿ ರ್‍ಯಾಗಿಂಗ್ ಮುಕ್ತ ವಾತಾವರಣ ನಿರ್ಮಿಸುವುದು ಆಯಾ ಸಂಸ್ಥೆಗಳ ಮ್ಯಾನೇಜ್‌ಮೆಂಟಿನ ಜವಾಬ್ದಾರಿ, ಒಂದು ವೇಳೆ ರ್‍ಯಾಗಿಂಗ್ ನಡೆದರೆ ಅದಕ್ಕೆ ಮ್ಯಾನೇಜ್‌ಮೆಂಟೇ ಜವಾಬ್ದಾರಿ' ಎನ್ನುವ ಮಹತ್ವಪೂರ್ಣ ಮಧ್ಯಂತರ ಆದೇಶವನ್ನು ಕೊಟ್ಟಿತು. ಆದರೆ ದುರಂತ ಎಂದರೆ ಸುಪ್ರೀಮ್ ಕೋರ್ಟಿನ ಆದೇಶ ಹೊರಬಿದ್ದ ಮೇಲೂ ಹನ್ನೆರಡು ವಿದ್ಯಾರ್ಥಿಗಳು ರ್‍ಯಾಗಿಂಗ್‌ಗೆ ಬಲಿಯಾಗಿ ಅಸುನೀಗಿದ್ದಾರೆ; ಆರು ವಿದ್ಯಾರ್ಥಿಗಳು ಆತ್ಮಹತ್ಯೆಗೆ ಪ್ರಯತ್ನಿಸಿದ್ದಾರೆ.

ಕಾನೂನು, ನೀತಿ, ನಿಯಮಗಳು ರ್‍ಯಾಗಿಂಗ್ ತಡೆಯುವಲ್ಲಿ ತಮ್ಮದೇ ಆದ ಪಾತ್ರ ನಿರ್ವಹಿಸುತ್ತವಾದರೂ ಅದೇ ಪರಿಹಾರವಲ್ಲ. ನಮ್ಮಲ್ಲಿ ದಲಿತ ದೌರ್ಜನ್ಯದ ವಿರುದ್ಧದ ಕಾನೂನುಗಳು ರೂಪಗೊಂಡು ಅದೆಷ್ಟೋ ದಶಕಗಳಾಗಿದ್ದರೂ ದಲಿತರ ಮೇಲಿನ ದೌರ್ಜನ್ಯಗಳು ನಿರಂತರವಾಗಿ ನಡೆಯುತ್ತಲೇ ಇವೆ; ದೌರ್ಜನ್ಯಕೋರರು ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಲೇ ಇದ್ದಾರೆ. ವರದಕ್ಷಿಣೆ ಪದ್ಧತಿಯ ತಡೆಗಾಗಿಯೂ ಕಾನೂನುಗಳಾಗಿ ಹಲವಾರು ವರ್ಷಗಳು ಸಂದಿವೆ. ಆದರೂ ವರದಕ್ಷಿಣೆ ಸಾವುಗಳು ಸಂಭವಿಸುತ್ತಲೇ ಇವೆ; ಕೊಲೆಗಡುಕರು ಶಿಕ್ಷೆಯಿಂದ ತಪ್ಪಿಸಿಕೊಳ್ಳುತ್ತಲೇ ಇದ್ದಾರೆ. ಅದೇ ರೀತಿ ರ್‍ಯಾಗಿಂಗ್ ಕೂಡ.

ಎಲ್ಲಿಯತನಕ ಸಮಸ್ಯೆಯನ್ನು ಆಮೂಲಾಗ್ರವಾಗಿ ಬಗೆಹರಿಸಬೇಕೆಂಬ ರಾಜಕೀಯ ಇಚ್ಛೆ ಮೂಡುವುದಿಲ್ಲವೋ ಅಲ್ಲಿಯತನಕ ಸಮಸ್ಯೆಗಳು ಸಮಸ್ಯೆಗಳಾಗಿಯೇ ಮುಂದುವರೆಯುತ್ತವೆ. ■


ದಾವಣಗೆರೆ: 80 ಲಕ್ಷ ನುಂಗಿಯೂ ಬಚಾವಾದ ಸಿದ್ದೇಶಿ

ತಾನು ಮಾಡಿರುವ ಹರಾಮಿ ಕೆಲಸಕ್ಕೆ ಚುನಾವಣಾ ಕಣದಿಂದಲೇ ಎಸೆಯಲ್ಪಡಬೇಕಿದ್ದ ದಾವಣಗೆರೆ ಬಜೆಪಿ ಅಭ್ಯರ್ಥಿ ಹಾಲಿ ಸಂಸದ ಸಿದ್ದೇಶಿ ತನ್ನ ಚಾಣಾಕ್ಷತನದಿಂದ ಚುನಾವಣಾ ಅಧಿಕಾರಿ ಎನ್. ಮಂಜುನಾಥ್‌ರನ್ನು ಯಾಮಾರಿಸಿಯೋ, ಬುಟ್ಟಿಗೆ ಹಾಕಿಕೊಂಡೋ ಬಚಾವಾಗಿ ಬಿಟ್ಟಿದ್ದಾನೆ.

ಕಳೆದ 11 ರಂಧು ಸಿದ್ದೇಶಿ ನಾಮಪತ್ರ ಸಲ್ಲಿಸಿದ ದಿನ, ಡಿ.ಸಿ. ಕಚೇರಿಯಲ್ಲಿ ನಾಮಪತ್ರ ಪರಿಶೀಲನಾ ಕಾರ್ಯಕ್ಕೂ ಮುಂಚೆ ಪಕ್ಷೇತರ ಅಭ್ಯರ್ಥಿ ಮಾರುತಿ ಪರ ಜೆಡಿಯು ಜಿಲ್ಲಾಧ್ಯಕ್ಷ ಎಂ.ಜಿ. ತಿಪ್ಪೇಸ್ವಾಮಿ ಹಾಗೂ ಬಿಎಸ್ಪಿ ಅಭ್ಯರ್ಥಿ ಡಾ. ಎಚ್.ಆರ್. ಖಾನ್ ಪರ ಏಜೆಂಟಾಗಿದ್ದ ಆಲ್ಲೂರು ನಿಂಗರಾಜ ಅವರುಗಳು ಬಜೆಪಿ ಅಭ್ಯರ್ಥಿ ಸಿದ್ದೇಶಿ ವಿರುದ್ಧ ತಕರಾರು ಅರ್ಜಿ ಸಲ್ಲಿಸಿದ್ದರು.

77.50 ಲಕ್ಷ ನುಂಗಿದ್ದ ಸಿದ್ದೇಶಿ

ಪ್ರತಿಯೊಂದು ಲೋಕಸಭಾ ಕ್ಷೇತ್ರದ ಅಭಿವೃದ್ಧಿ ಕೆಲಸಗಳಿಗೆಂದು ಕೇಂದ್ರ ಸರ್ಕಾರದಿಂದ ಸಂಸದರ ಸ್ಥಳೀಯ ಕ್ಷೇತ್ರಾಭಿವೃದ್ಧಿ ಯೋಜನೆ (MPLAD) ಯಡಿ ವರ್ಷಂಪ್ರತಿ ಬಿಡುಗಡೆಯಾಗಿದ್ದ ಎರಡು ಕೋಟಿ ರೂ.ಗಳಲ್ಲಿ 77.50 ಲಕ್ಷ ರೂ.ಗಳನ್ನು ಸಿದ್ದೇಶಿ ತಾನೇ ನಡೆಸುತ್ತಿರುವ ಜಿ.ಎಂ.ಐಟಿ ಸಂಸ್ಥೆಯ ಮೂಲಕ ಪೂರಾ ನುಂಗಿ ಹಾಕಿದ್ದಾನೆ. ಇದು ರೆಪ್ರೆಸೆಂಟೇಶನ್ ಆಕ್ಟ್ ಕಲಂ 9(A)ಯ ಉಲ್ಲಂಘನೆಯಾಗಿರುವುದರಿಂದ ಸಿದ್ದೇಶಿಯ ಅಭ್ಯರ್ಥಿತನವನ್ನು ರದ್ದುಗೊಳಿಸಿ, ಸರ್ಕಾರದ ಅನುದಾನವನ್ನು ದುರುಪಯೋಗ ಮಾಡಿರುವ ಹಿನ್ನೆಲೆಯಲ್ಲಿ ಸಿದ್ದೇಶಿಯ ಕೃತ್ಯಗಳನ್ನು ತನಿಖೆ ನಡೆಸಿ, ಕಾನೂನುಕ್ರಮ ಕೈಗೊಳ್ಳಬೇಕು ಎಂದು ತಕರಾರು ಮಾಡಿದವರು ದೂರಿದ್ದರು. ಜಿಲ್ಲಾಧಿಕಾರಿ ಕಂ ಚುನಾವಣಾಧಿಕಾರಿ ಎಸ್. ಮಂಜುನಾಥ್ ಆ ತಕ್ಷಣಕ್ಕೆ ನಾಮಪತ್ರವನ್ನು ತಡೆಹಿಡಿದಿದ್ದರು. ಆದರೆ ಎರಡು ದಿನಗಳ ಬಳಿಕ ಸಿದ್ದೇಶಿ ಮೇಲಿನ ಆರೋಪಗಳನ್ನು ಅಸಿಂಧುಗೊಳಿಸಿ ಅವನಿಗೆ ಕ್ಲೀನ್ ಚಿಟ್ ನೀಡಿ ನಾಮಪತ್ರವನ್ನು ಸ್ವೀಕರಿಸಿದ್ದಾರೆ.



ಸಿದ್ದೇಶಿ

ತನ್ನದೇ ಸಂಸ್ಥೆಗೆ ಸರ್ಕಾರದ ದುಡ್ಡು

2007-2008, ಹಾಗೂ 2008-09 ರ ಸಾಲಿನಲ್ಲಿ ಎಂಪಿಎಲ್‌ಎಡಿ ಅನುದಾನದಲ್ಲಿ ಬಂದ 77,50,000 ರೂ.ಗಳನ್ನು ಜಿಲ್ಲಾಧಿಕಾರಿಗಳ ಮೂಲಕ ತಾನೇ ಅಧ್ಯಕ್ಷನಾಗಿರುವ GMIT ಯ 47 ಕೆಲಸಗಳಿಗೆ ಮಂಜೂರು ಮಾಡಿಸಿಕೊಂಡಿದ್ದಾನೆ. ಆಗ ಇದ್ದ ಜಿಲ್ಲಾಧಿಕಾರಿಗಳಾಗಿದ್ದ ದ್ಯಾಬೇರಿ ಹಾಗೂ ನಂತರದಲ್ಲಿ ಅಮರನಾರಾಯಣ. ಬಿಡುಗಡೆ ಮಾಡಿರುವ ಹಣದಲ್ಲಿ SOG ಕಾಲೋನಿ ಬಳಿಯ ಬಸ್ ನಿಲ್ದಾಣದ ಕೆಲಸವೊಂದನ್ನು ಬಿಟ್ಟರೆ ಮಿಕ್ಕ 46 ಕೆಲಸಗಳೂ ಪೂರ್ಣಗೊಂಡಿವೆ.

ಇಲ್ಲಿ ತಮಾಷೆ ಏನೆಂದರೆ ಈ GMIT ತಾಂತ್ರಿಕ ಮಹಾವಿದ್ಯಾಲಯ (GMIT) ವನ್ನು ನಡೆಸುತ್ತಿರುವುದು ಶ್ರೀಶೈಲ ಎಜುಕೇಶನಲ್ ಟ್ರಸ್ಟ್. ಈ ಟ್ರಸ್ಟಿನ ಅಧ್ಯಕ್ಷ ಸಂಸದ ಸಿದ್ದೇಶ್ವರ. ಎಂಪಿಎಲ್‌ಎಡಿನ ಹಣವನ್ನು ಮಂಜೂರು ಮಾಡುವಾಗ ಸಿದ್ದೇಶಿಯು ಆಗಿನ ಜಿಲ್ಲಾಧಿಕಾರಿ ದ್ಯಾಬೇರಿ ಮೂಲಕ ಈ GMIT ಯನ್ನು ಒಂದು ಸರ್ಕಾರೇತರ ಸಂಸ್ಥೆ ಎನ್‌ಜಿಓ ಎಂದು ಪರಿಗಣಿಸಿ ಅದರ ಪ್ರಾಂಶುಪಾಲ ಸಂಗಮೇಶ್ ಜಿ. ಹಿರೇಮಠನನ್ನೇ ಈ MPLAD ಯೋಜನೆಯ ಅನುಷ್ಠಾನಾಧಿಕಾರಿಯಾನ್ನಾಗಿ ನೇಮಿಸಿಬಿಟ್ಟಿದ್ದ. ಇದರಲ್ಲಿ 26 ಬಸ್ ಶೆಲ್ಟರ್ ಒಳಗೊಂಡಂತೆ ಹಲವು ಸಿವಿಲ್ ಕೆಲಸಗಳಿಗೆ ತಾನೇ ಖುದ್ದಾಗಿ ಯೋಜನೆಗಳನ್ನು ತಯಾರಿಸಿ, ಎಷ್ಟು ನುಂಗಬಹುದೋ ಅಷ್ಟನ್ನು ನುಂಗಿ ನೀರು ಕುಡಿದಿದ್ದಾನೆ.

ಹೀಗೆ ತಾನೇ ಅಧ್ಯಕ್ಷನಾಗಿ ರುವ ಸಂಸ್ಥೆಯೊಂದಕ್ಕೆ ಸರ್ಕಾರಿ ಹಣವನ್ನು ಮಂಜೂರು ಮಾಡಿಸಿಕೊಂಡ ಸಿದ್ದೇಶಿ ಮೊನ್ನೆ "ಯಾವುದೇ ಅಭಿವೃದ್ಧಿ ಕೆಲಸಕ್ಕೆ ಸಂಸದನಾಗಿ ಡಿ.ಸಿ.ಗೆ ಲೆಟರ್ ಕೊಡೋದು ನನ್ ಕೆಲಸ. ಕಾನೂನು ಬದ್ಧವಾಗಿ ಕೆಲಸ ಮಾಡಿಸಿ ಚೆಕ್ ನೀಡುವುದು ಡಿ.ಸಿ. ಕೆಲಸ" ಎಂದು ತಾನು ಮಹಾ ಸಾಚಾ ಎಂಬಂತೆ ಪೋಸು ಕೊಟ್ಟಿದ್ದಾನೆ. ಅಂಗೈಯಲ್ಲೇ ಕಾಣುವ ಇವನ ಈ ಭ್ರಷ್ಟಾಚಾರವನ್ನು ಕನ್ನಡಿ ಇಟ್ಟು ನೋಡುವಷ್ಟು ದಡ್ಡರೇ ದಾವಣಗೆರೆಯ ಮತದಾರರು?

ಅಷ್ಟಕ್ಕೂ ಪೋಷಕರ ಜೇಬಿಗೆ ಕತ್ತರಿಹಾಕಿ ಲಾಭ ಮಾಡುವುದನ್ನೇ ಧ್ಯೇಯವಾಗಿಸಿಕೊಂಡ ಶಿಕ್ಷಣ ಸಂಸ್ಥೆಯೊಂದಕ್ಕೆ ಜನಸಾಮಾನ್ಯರ ಒಳಿತಿಗಾಗಿ ಮಂಜೂರಾಗುವ ಹಣವನ್ನು ಮಂಜೂರು ಮಾಡಿಸಿಕೊಂಡಿದ್ದು ಜನದ್ರೋಹದ ಕೆಲಸವಲ್ಲದೇ ಇನ್ನೇನು?

ಸಿದ್ದೇಶಿ ಬಚಾವಾಗಿದ್ದು ಹೇಗೆ

• ಏಪ್ರಿಲ್ 11 ರಂದು ತಿಪ್ಪೇಸ್ವಾಮಿಯವರು ತಕರಾರು ಸಲ್ಲಿಸಿದ ದಿನ ಭ್ರಷ್ಟ ಸಿದ್ದೇಶಿಯ ನಾಮಪತ್ರ ವಜಾಗೊಳ್ಳುತ್ತದೆ ಎಂದೇ ಎಲ್ಲರೂ ಭಾವಿಸಿದ್ದರು. ಏಕೆಂದರೆ ಜನಪ್ರತಿನಿಧಿ ಕಾಯ್ದೆಯ ಕಲಂ 9 ಎ ಪ್ರಕಾರ ಒಬ್ಬ ವ್ಯಕ್ತಿಯು ಸರ್ಕಾರರೊಂದಿಗೆ ಸರಕು ಪೂರೈಕೆ ಅಥವಾ ಇನ್ನಿತರ ಸರ್ಕಾರದ ಕಾರ್ಯಯೋಜನೆಗಳನ್ನು ಜಾರಿ ಮಾಡುವ ವ್ಯವಹಾರಗಳಿಗೆ ಒಪ್ಪಂದ ಮಾಡಿಕೊಂಡಿದ್ದ ಪಕ್ಷದಲ್ಲಿ ಆತನ ಪ್ರಾತಿನಿಧ್ಯವು ಅನರ್ಹಗೊಳ್ಳುತ್ತದೆ. ಸುಪ್ರೀಂ ಕೋರ್ಟು



ಕೋನಪ್ಪ... ಸೇವಾರಾಮ್ ಪ್ರಕರಣದಲ್ಲಿ ನೀಡಿರುವ ತೀರ್ಪಿನ ಪ್ರಕಾರ ಈ ಕಾಯ್ದೆಯಡಿ ಪಾಲುದಾರಿಕೆ ಸಂಸ್ಥೆ ಪಾಲುದಾರ ಅಥವಾ ಹಿಂದೂ ಅವಿಭಕ್ತ ಕುಟುಂಬದ ಸದಸ್ಯರು ಅಭ್ಯರ್ಥಿಯಾಗಲು ಅನರ್ಹರಾಗುತ್ತಾರೆ. ಕುಟುಂಬದ ಟ್ರಸ್ಟಿ ಕೂಡಾ ಅನರ್ಹರಾಗುತ್ತಾರೆ. ಇಲ್ಲಿ ಕಣ್ಣಿಗೆ ರಾಚುವಂತೆ ಸಿದ್ದೇಶಿ ಎಂಪಿಯಾಗಿದ್ದುಕೊಂಡೇ ತಾನೇ ಅಧ್ಯಕ್ಷನಾಗಿರುವ ಸಂಸ್ಥೆಯ ಮೂಲಕವೇ ಸರ್ಕಾರದೊಂದಿಗೆ ವ್ಯವಹಾರ ನಡೆಸಿದ್ದಾನೆ. ಕಾನೂನು ಪ್ರಕಾರ ಅವನು ತಪ್ಪಿತಸ್ಥನಾಗಿರಬೇಕಿತ್ತು; ಆದರೆ ಹಾಗೆ ಯಡ್ಡಿಯ ರಾಜ್ಯಭಾರದಲ್ಲಿ ಆಗಲೇ ಇಲ್ಲ. ಮುಖ್ಯಮಂತ್ರಿಯ ಅಧಿಕಾರ ಬಲವನ್ನೂ, ತನ್ನ ಹಣಬಲವನ್ನೂ ಸರಿಯಾಗಿಯೇ ಬಳಸಿಕೊಂಡ ಸಿದ್ದೇಶಿ ಕುತಂತ್ರದ ಮೂಲಕ ತನ್ನ ಸೀಟು ಉಳಿಸಿಕೊಂಡಿದ್ದಾನೆ.

ತನಗೂ ಸಂಸ್ಥೆಗೂ ಸಂಬಂಧ ಇಲ್ಲ ಎಂದ

ತನ್ನ ಅಭ್ಯರ್ಥಿತನಕ್ಕೇ ಕುತ್ತು ಬಂದೊಡನೆಯೇ GMITಯ ಆಡಳಿತ ಮಂಡಳಿಯನ್ನು ಕರೆಸಿಕೊಂಡ ಸಿದ್ದೇಶಿ ಗ್ರಾಂಡ್ ಪ್ಲಾನ್ ಒಂದನ್ನು ಮಾಡಿದ್ದಾನೆ. ಅದರ ಪ್ರಕಾರ ತಾನು GMITಯ ಆಜೀವ ಸದಸ್ಯತ್ವಕ್ಕೆ ದಿ. 16.3.2009 ರಂದು ರಾಜೀನಾಮೆ ಸಲ್ಲಿಸಿದ್ದೇನೆಂದೂ ಅದನ್ನು 23.3.2009 ರಂದು ಇತರ ಟ್ರಸ್ಟಿಗಳೆಲ್ಲರೂ ಸ್ವೀಕರಿಸಿದ್ದಾರೆಂದೂ ದಾಖಲೆಗಳನ್ನು ಸಿದ್ಧಪಡಿಸಲು ಹೇಳಿದ್ದಾನೆ. ಎಲ್ಲರೂ ತಲೆ ಅಲ್ಲಾಡಿಸಿದ್ದಾರೆ. ಎರಡನೆಯದಾಗಿ ಎಂಪಿಎಲ್‌ಎಡಿ ಹಣವನ್ನು GMITಗೆ ಮಂಜೂರು ಮಾಡಿಸಿದ್ದು ಅದರ ಪ್ರಿನ್ಸಿಪಾಲರೇ ಹೊರತು ತಾನೇ ವ್ಯವಹಾರದಲ್ಲಿ ಪಾಲ್ಗೊಂಡಿಲ್ಲ ಎಂದು ವಾದಿಸಿದ್ದಾನೆ. ಹೇಗಿದೆ ನೋಡಿ ಸಿದ್ದೇಶಿಯ ಬುದ್ಧಿವಂತಿಕೆ? ಇದಕ್ಕೆ ತಕ್ಕ ದಾಖಲೆಗಳನ್ನು ಜಿಲ್ಲಾಧಿಕಾರಿ ಮಂಜುನಾಥ್ ಎದುರಿಗಿಡಲಾಗಿದೆ. ಎರಡೂ ಕಡೆಯ ವಾದಗಳನ್ನು ಪರಿಶೀಲಿಸಿದ ನಂತರ ಈ ಚುನಾವಣಾಧಿಕಾರಿ "ಇಲ್ಲಿ ಸ್ವತಃ ಸಿದ್ದೇಶ್ವರ ಕಾಂಟ್ರ್ಯಾಕ್ಟ್‌ಗೆ ಸಹಿ ಮಾಡಿಲ್ಲ, ಒಂದು ವೇಳೆ ಮಾಡಿದ್ದರೆ ಅನರ್ಹರಾಗುತ್ತಿದ್ದರು. ಈ ಪ್ರಕರಣದಲ್ಲಿ ಕಾಲೇಜಿನ ಪ್ರಾಚಾರ್ಯರಿಗೆ ವರ್ಕ್ ಆರ್ಡರ್ ನೀಡಲಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಸಿದ್ದೇಶ್ವರ ಅನರ್ಹವಾಗುವ ಪ್ರಶ್ನೆಯೇ ಉದ್ಭವಿಸದು ಎಂದು ತೀರ್ಪು ನೀಡಲಾಗಿದೆ" ಎಂದಿದ್ದಾರೆ.


ಭೀಮಸಮುದ್ರದಲ್ಲಿ ಅಡಿಕೆ ವ್ಯವಹಾರವನ್ನು, ಗಣಿ ಉದ್ದಿಮೆಯನ್ನು ನಡೆಸುತ್ತಾ ಕೋಟಿಗಟ್ಟಲೇ ಕೊಳ್ಳೆ ಹೊಡೆಯುತ್ತಿರುವ ಸಿದ್ದೇಶಿಯು ತನ್ನ ಮತ್ತು ತನ್ನ ಹೆಂಡತಿಯ ಹೆಸರಲ್ಲಿ ಅಧಿಕೃತವಾಗಿ ಘೋಷಿಸಿಕೊಂಡಿರುವ ಆಸ್ತಿಯೇ ಐವತ್ತು ಕೋಟಿಗೂ ಹೆಚ್ಚು. ಇಂತಾ ಕೋಟ್ಯಾಧಿಪತಿಯಾಗಿದ್ದರೂ ಜನಸಾಮಾನ್ಯರ ಉಪಯೋಗಕ್ಕೆ, ಕ್ಷೇತ್ರದ ಅಭಿವೃದ್ಧಿಗೆ ವಿನಿಯೋಗವಾಗಬೇಕಿದ್ದ ಸರ್ಕಾರದ ಹಣವನ್ನು ತನ್ನ ಸಂಸ್ಥೆಗೆ ಉಪಯೋಗಿಸಿಕೊಂಡಿರುವ ಈ ಸಿದ್ದೇಶಿಯ ಧನದಾಹವನ್ನು ನೋಡಿ ಜನರು ಹೌಹಾರಿದ್ದಾರೆ. ಸಿದ್ದೇಶಿ ಕುಟುಂಬ ಸಂಪಾದಿಸಿರುವ ಕೋಟಿಗಳ ಹಿಂದೆ ಇಂತಹ ಇನ್ನೆಷ್ಟು ದಗಲ್ಬಾಜಿ ಕೆಲಸಗಳು ನಡೆದಿರಲಿಕ್ಕಿಲ್ಲ ಎಂದೂ ತಲೆಕೆಡಿಸಿಕೊಂಡಿದ್ದಾರೆ.

ಇಡೀ ಕೇಸಿನಲ್ಲಿ ಜಿಲ್ಲಾ ಚುನಾವಣಾಧಿಕಾರಿಯೇ ಬುಕ್ ಆಗಿರುವುದರ ಬಗ್ಗೆ ದಾವಣಗೆರೆಯ ಪ್ರಜ್ಞಾವಂತರೆಲ್ಲ ಉರಿದು ಬಿದ್ದಿದ್ದಾರೆ. ಕಾಂಗ್ರೆಸ್‌ನ ಉಗ್ರಪ್ಪ ಉಗ್ರರಾಗಿಯೇ ಅಧಿಕಾರಿಯನ್ನು ತರಾಟೆಗೆ ತೆಗೆದುಕೊಂಡಿದ್ದಾರೆ. ಆದರಿಂದ ಇದೀಗ ಸಿದ್ದೇಶಿ ಯಾವ ತೊಂದರೆ ಇಲ್ಲದೆ ಚುನಾವಣೆಗೆ ಸ್ಪರ್ಧಿಸಬಹುದು, ಗೆಲ್ಲಬಹುದು, ಗೆದ್ದು ಇಂತದ್ದೇ ಮತ್ತಷ್ಟು ವಂಚನೆಗಳನ್ನು ಎಸಗುತ್ತಾ ದಾವಣಗೆರೆಯ ಜನರಿಗೆ ಟೋಪಿ ಹಾಕಲೂಬಹುದು.

ಆದರೆ ದಾವಣಗೆರೆಯ ಮತದಾರ ಅಷ್ಟು 'ದಡ್ಡ' ಅಂತ ಸಿದ್ದೇಶಿ ತಿಳಕೊಂಡಿದ್ದರೆ ಅದವನ ಮೂರ್ಖತನವಷ್ಟೇ. ಸಿದ್ದೇಶಿಯ ಇಂಥ ಹರಾಮಿ ಕೆಲಸಗಳನ್ನೆಲ್ಲಾ ಇಷ್ಟು ದಿನ ಸಹಿಸಿಕೊಂಡ ಜನ ಈಗಾಗಲೇ ಕಾಂಗ್ರೆಸ್ ಅಭ್ಯರ್ಥಿ ಎಸ್. ಮಲ್ಲಿಕಾರ್ಜುನರ ಗೆಲುವಿಗೆ ಕಾಯುತ್ತಿರುವುದಕ್ಕೆ ಸ್ವತಃ ಬಜೆಪಿಯ ಸಿದ್ದೇಶಿ ವಿರೋಧಿಗಳೇ ಸಾಕ್ಷಿಯಾಗಿದ್ದಾರೆ. ■

ಗುಲ್ಬರ್ಗಾ: ಬೆವರುತ್ತಿರುವ ಬೆಳಮಗಿ, ಮುನ್ನಡೆಯಲ್ಲಿ ಖರ್ಗೆ

ಗುಲ್ಬರ್ಗಾ ಕ್ಷೇತ್ರದಲ್ಲಿ ಜಾತಿವಾರು ಓಟುಗಳು ನಿಜಕ್ಕೂ ಈ ಬಾರಿ ಪರಿಣಾಮ ಬೀರುವುದೇ ನಿಜವಾದರೆ ಕಾಂಗ್ರೆಸ್‌ನ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ದೆಹಲಿಗೆ ಹೋಗುವುದು ಗ್ಯಾರಂಟಿ. ಮತ್ತೊಂದೆಡೆ ಬಜೆಪಿಯ ರೇವೂ ನಾಯಕ ಬೆಳಮಗಿ ಎಂದಿನಂತೆ ತಮ್ಮ ಪಶು ಸಂಗೋಪನಾ ಇಲಾಖೆ ಕೆಲಸ ಮಾಡಿಕೊಂಡು ಹಾಯಾಗಿರಬಹುದು.




ರೇವುನಾಯಕ್

ಖರ್ಗೆ ಹಾಗೂ ಬೆಳಮಗಿ ನಡುವೆ ವ್ಯಕ್ತಿತ್ವ, ಗುಣ ಸ್ವಭಾವಗಳಲ್ಲಿ ಅಂತ ದೊಡ್ಡ ದೋಷಗಳೇನೂ ಜನರಿಗೆ ಕಾಣುತ್ತಿಲ್ಲ, ಆದರೆ ಆಯಾ ಪಕ್ಷಗಳ ಸಿದ್ಧಾಂತ ಹಿನ್ನೆಲೆಗಳನ್ನು ನೋಡಿದಾಗ ಇಲ್ಲಿ ಬಜೆಪಿಗೆ ಕೊಂಚ ಕಷ್ಟವಿದೆ. ಎಂಟು ವಿಧಾನಸಭಾ ಕ್ಷೇತ್ರಗಳುಳ್ಳ ಗುಲ್ಬರ್ಗಾ ಸಂಸತ್ ಕ್ಷೇತ್ರದಲ್ಲಿ ಕಾಂಗ್ರೆಸ್ 5 ಬಜೆಪಿಯ ಮೂವರು ಶಾಸಕರಿದ್ದಾರೆ. ಗುಲ್ಬರ್ಗಾ ಉತ್ತರದ ಶಾಸಕ ಕಮರುಲ್ ಇಸ್ಲಾಂ, ಅಫಜಲಪುರದ ಮಾಲೀಕಯ್ಯ, ಸೇಡಂನ ಶರಣಬಸವ ಪಾಟೀಲ ಹಾಗೂ ಗುರುಮಿಟಕಲ್‌ನ ಬಾಬೂರಾವ್ ಚಿಂಚನಸೂರ್‌ರವರು ಖರ್ಗೆ ಜೊತೆ ಪಿಲ್ಲರ್‌ಗಳಂತೆ ನಿಂತು ಕೆಲಸ ಮಾಡುತ್ತಿದ್ದಾರೆ. ಇನ್ನುಳಿದ ಚಿತ್ತಾಪುರದಲ್ಲಿ ಸ್ವತಃ ಖರ್ಗೆಯೇ ಗೆದ್ದು ಬಂದಿದ್ದಾರೆ.

ಅತ್ತ ಬಜೆಪಿ ಪಾಳೆಯದಲ್ಲಿ ಗುಲ್ಬರ್ಗಾ ದಕ್ಷಿಣ ಶಾಸಕ ಚಂದ್ರಶೇಖರ ರೇವೂರ ಹಾಗೂ ಜೇವರ್ಗಿಯ ನರಿಬೋಳ ಇದ್ದಾರಾದರೂ ಬಲಾಬಲ ಪರೀಕ್ಷೆಯಲ್ಲಿ ಬಜೆಪಿ ಮೇಲ್ನೋಟಕ್ಕೆ ದುರ್ಬಲವಾಗಿ ಕಾಣುತ್ತಿದೆ. ಈ ನರಿಬೋಳ ಕೇವಲ 98 ಓಟಿನಿಂದ ಧರಂಸಿಂಗ್‌ರನ್ನು ಸೋಲಿಸಿದ್ದರೆಂಬುದು ಬಜೆಪಿಯ ಕಷ್ಟಗಳಿಗೆ ಸಾಕ್ಷಿಯಾಗಿದೆ.

ಇನ್ನು ಜಾತಿ ಸಮೀಕರಣಕ್ಕೆ ಬಂದರೆ ಮೂರುವರೆ ಲಕ್ಷದಷ್ಟಿರುವ ಲಿಂಗಾಯತರ ಪೈಕಿ ಬಜೆಪಿ ಪರ ಒಲವಿರುವವರು ಕೊಂಚ ಹೆಚ್ಚಿರಬಹುದು. ಕಾಂಗ್ರೆಸ್‌ನಲ್ಲೂ ಚಿತ್ತಾಪೂರ, ಸೇಡಂ ಮುಂತಾದೆಡೆ ಪ್ರಮುಖ ಲಿಂಗಾಯತ ಲೀಡರ್‌ಗಳಿದ್ದಾರೆ. ಅಷ್ಟೇ ಅಲ್ಲ, ದಲಿತ, ಮುಸ್ಲಿಂ, ಕುರುಬ ಹಾಗೂ ಲಂಬಾಣಿ ಮತದಾರರ ಸಂಖ್ಯೆ ಲಿಂಗಾಯತರಿಗಿಂತ ಮೂರು ಪಟ್ಟು ಅಂದರೆ ಹೆಚ್ಚುಕಡಿಮೆ ಒಂಭತ್ತು ಲಕ್ಷದಷ್ಟಿದೆ. ಈ ಪೈಕಿ ಮೂರು ಲಕ್ಷದಷ್ಟಿರುವ ಮುಸ್ಲಿಮರು ಕಾಂಗ್ರೆಸ್ ಜೊತೆ ನಿಲ್ಲುತ್ತಾರೆ. ಮೇಲಾಗಿ ಗುಲ್ಬರ್ಗಾ ಉತ್ತರ ಕ್ಷೇತ್ರದ ಶಾಸಕ ಖಮರುಲ್ ಪ್ರಭಾವ ಖರ್ಗೆಗೆ ಲಾಭ ತರಲಿದೆ. ಇನ್ನು ಲಿಂಗಾಯತರು ಬಜೆಪಿಯತ್ತ ಹೋದರೆ ಸಹಜವಾಗಿಯೇ ಅದಕ್ಕೆ ಪ್ರತ್ಯುತ್ತರವಾಗಿ ಅವರ ವಿರೋಧಿಗಳಾದ ಮೂರು ಲಕ್ಷದಷ್ಟಿರುವ ಪರಿಶಿಷ್ಟ ಜಾತಿಯವರ ಮತಗಳ ಪೈಕಿ ಹೆಚ್ಚಿನಾಂಶ ಖರ್ಗೆಯತ್ತ ಹರಿದು ಬರಲಿವೆ.



ಖರ್ಗೆ

ಸಿದ್ದರಾಮಯ್ಯ ಕಾಂಗ್ರೆಸ್‌ನಲ್ಲಿರುವ ಕಾರಣದಿಂದ ಎರಡು ಲಕ್ಷದಷ್ಟಿರುವ ಕುರುಬ ಮತದಾರರ ಪೈಕಿ ಬಹುತೇಕರು ಕಾಂಗ್ರೆಸ್‌ನತ್ತ ತಿರುಗಲಿದ್ದಾರೆ.

ಈ ಸಲದ ಅತೀ ಮುಖ್ಯ ರಣತಂತ್ರ ಜೆಡಿಎಸ್‌ನವರದ್ದು. ಬಾಬು ಹೊನ್ನಾನಾಯಕ್ ಎಂಬ ಲಂಬಾಣಿ ನಾಯಕರನ್ನು ಇಲ್ಲಿ ದೇವೇಗೌಡರು ಅಖಾಡಕ್ಕಿಳಿಸಿದ್ದಾರೆ. ಬಜೆಪಿಯ ರೇವೂ ಬೆಳಮಗಿ ಕೂಡ ಲಂಬಾಣಿಯವರೇ ಆಗಿದ್ದು ಒಂದೂವರೆ ಲಕ್ಷದಷ್ಟಿರುವ ಲಂಬಾಣಿ ಮತಗಳು ಸಾಲಿಡ್ಡಾಗಿ ಬೆಳಮಗಿಗೆ ಸಿಗದಂತೆ ವಿಭಜನೆಯಾಗಲಿವೆ. ಇದು ಖರ್ಗೆಗಿರುವ ಪ್ಲಸ್ ಪಾಯಿಂಟ್.


ಬಜೆಪಿಯ ಬಗ್ಗೆ ಉತ್ತರ ಕರ್ನಾಟಕದ ಪರಿಶಿಷ್ಟರಿಗೆ ಒಂಥರಾ ಅಸಹನೆ ಬೆಳೆಯುತ್ತಿದೆ. ಮೀಸಲು ಕ್ಷೇತ್ರಗಳಲ್ಲೆಲ್ಲಾ ಬಜೆಪಿಗಳು ಕೇವಲ ಲಂಬಾಣಿ ಜನಾಂಗದವರನ್ನೇ ಶಾಸಕರಾಗಿ, ಲೀಡರ್‌ಗಳಾಗಿ ಬೆಳೆಸುತ್ತಿರುವುದು ಅವರ ಸಿಟ್ಟಿಗೆ ಪ್ರಮುಖ ಕಾರಣ. ಗುಲ್ಬರ್ಗಾ ಕೂಡ ಇದಕ್ಕೆ ಹೊರತಾಗಿಲ್ಲ. ಇನ್ನು ಮೇಲಾಗಿ ಈ ಬಾರಿ ಖರ್ಗೆ ಗೆದ್ದರೆ ಕೇಂದ್ರದಲ್ಲಿ ಸಚಿವರಾಗುವ ಸಾಧ್ಯತೆಯಂತೂ ಇದೆ. ಆದರೆ ರೇವೂ ಅಕಸ್ಮಾತ್ ಗೆದ್ದರೆ ಇಲ್ಲಿ ಸಚಿವ ಸ್ಥಾನ ಕಳೆದುಕೊಳ್ಳುವ ಜೊತೆಗೆ ಕೇವಲ ಸಂಸದರಾಗಷ್ಟೇ ಉಳಿಯಬೇಕು. ಹೇಗೂ ಕೇಂದ್ರದಲ್ಲಿ ಬಜೆಪಿ ಸರ್ಕಾರ ರಚಿಸುವುದಿಲ್ಲ ಎಂಬುದೀಗ ಖಚಿತವಾಗಿದೆಯಷ್ಟೇ. ಅಲ್ಲದೆ ರೇವೂ ಸೋತರೆ ಈಗಿರುವ ಸಚಿವ ಸ್ಥಾನಕ್ಕಂತೂ ತೊಂದರೆಯಿಲ್ಲ... ಎಂಬೆಲ್ಲಾ ಊಹಾಪೋಹಗಳು ಕೇಳಿಬರುತ್ತಿವೆ.

ಇವೆಲ್ಲಾ ವಾಸ್ತವಾಂಶಗಳು ಬೆಳಮಗಿ ಬೆವರುವಂತೆ ಮಾಡುತ್ತಿವೆ.

ಗುಲ್ಬರ್ಗಾದಲ್ಲಿ ಖರ್ಗೆ ಮೇಲುಗೈ ಸಾಧಿಸಿರುವುದು ಈಗಾಗಲೇ ಕಾಣುತ್ತಿದೆ. ●

ಮಂಗಳೂರು: ಗೆಲುವಿನ ಭರವಸೆಯಲ್ಲಿ ಪೂಜಾರಿ

ಕಳೆದ ಮೂರು ಚುನಾವಣೆಗಳಲ್ಲಿ ಸತತ ಸೋಲುಂಡು ಸೋಲಿನ ಸರದಾರ ಎಂದೇ ಅಪಖ್ಯಾತಿ ಗಳಿಸಿದ್ದ ಜನಾರ್ದನ ಪೂಜಾರಿ ಈ ಬಾರಿ ಮಂಗಳೂರು ಲೋಕಸಭಾ ಕ್ಷೇತ್ರದಿಂದ ಗೆಲ್ಲುವ ಮುನ್ಸೂಚನೆಯನ್ನು ನೀಡುತ್ತಿದ್ದಾರೆ. ಇವರ ಗೆಲುವಿಗೆ ಮುಖ್ಯಕಾರಣ, ಇತ್ತೀಚೆಗೆ ಕರಾವಳಿಯಲ್ಲಿ ಭಜರಂಗದಳದವರ ಅಟ್ಟಹಾಸ, ಶ್ರೀರಾಮ ಸೇನೆಯವರ ಮಂಗಾಟ ಮತ್ತು ಚೆಡ್ಡಿಗಳ ಚೀರಾಟ ಮಂಗಳೂರಿನ ಬಿಜೆಪಿಯ 'ಭದ್ರಕೋಟೆ'ಯಲ್ಲಿ ದೊಡ್ಡ ಮಟ್ಟದ ಬಿರುಕು ಮೂಡಿಸಿರುವುದು!




ಈ ಬಾರಿ ಇವೆಲ್ಲ ಬಿಜೆಪಿಗೆ ಮುಳುವಾಗಲಿವೆ, ಮಂಗಳೂರಿನ ಪ್ರಜ್ಞಾವಂತ ಮತದಾರರು ಬಿಜೆಪಿಗೆ ಪಾಠ ಕಲಿಸಲಿದ್ದಾರೆ ಎಂದರಿತೇ ಬಿಜೆಪಿಯ ರಾಜ್ಯಾಧ್ಯಕ್ಷ ಹುಲ್ಮುಖಿ ಸದಾನಂದ ಗೌಡ ಇಲ್ಲಿಂದ ಪೇರಿ ಕಿತ್ತದ್ದು!!

ಆದರಲ್ಲೂ ತನ್ನ ವಿರುದ್ಧ ತನ್ನ ರಾಜಕೀಯ ಗುರು ರಾಮ ಭಟ್ಟರು ಬಂಡಾಯದ ಬಾವುಟ ಹಾರಿಸಿದ್ದನ್ನು ಕಂಡು ಕಂಗಾಲಾದ ಸದಾನಂದ ಗೌಡ ತನ್ನ ಸ್ವಕ್ಷೇತ್ರ ಮಂಗಳೂರನ್ನು ಬಿಟ್ಟು ಪಕ್ಕದ ಮನೆಯಾದ ಉಡುಪಿಗೆ ಪಲಾಯನ ಮಾಡುತ್ತಿದ್ದರೆ? ತನಗೆ ಒಕ್ಕಲಿಗರ ವೋಟುಗಳು ಸಿಗಲಿ ಎಂದು ಡಿ.ಬಿ.ಚಂದ್ರೇಗೌಡನಿಗೆ ಆಹ್ವಾನದ ಕೆಂಪು ಕಂಬಳಿ ಹಾಸುತ್ತಿದ್ದರೆ?? ತಾನು ಬಚಾವಾದರೆ ಸಾಕು ಎಂದು ತನ್ನ ಶಿಷ್ಯ ನಳಿನ್ ಕುಮಾರ್ ಕಟೀಲ್‌ನನ್ನು ಬಿಡ್ಡಾಕ್ಕೆ ತಳ್ಳುತ್ತಿದ್ದರೆ???

ಚರ್ಚ್‌ಗಳ ಮೇಲೆ ದಾಳಿ, ಪಬ್‌ನಲ್ಲಿ ಯುವತಿಯರ ಮೇಲಿನ ಹಲ್ಲೆ, ಹಿಂದೂ ಪ್ರವಾಸಿಗರ ಮೇಲೆ ನಡೆಸಿದ ದರೋಡೆ, ರಸ್ತೆ ಬೀದಿಗಳಲ್ಲಿ ಹಿಂದೂ ಹುಡುಗಿಯರ ಜೊತೆ ಮುಸ್ಲಿಂ ಹುಡುಗರು ಮಾತನಾಡಬಾರದೆಂಬ ಕೇಸರಿ ಪಡೆಯ ಫತ್ವಾ.... ಇವೆಲ್ಲವೂ ಇವತ್ತು ಅಲ್ಪಸಂಖ್ಯಾತರು ಮಾತ್ರ ಚೆಡ್ಡಿ ಬಿಜೆಪಿಗಳ ವಿರುದ್ಧ ತಿರುಗಿ ಬೀಳುವಂತೆ ಮಾಡಿಲ್ಲ; ಜೊತೆಜೊತೆಗೆ ಪ್ರಜ್ಞಾವಂತರು, ಸುಶಿಕ್ಷಿತರು, ಮಧ್ಯಮ ವರ್ಗದ ಯುವಕಯುವತಿಯರು ಕೂಡ ಬಿಜೆಪಿ ವಿರುದ್ಧ ಕ್ರೋಢೀಕರಣಗೊಳ್ಳುವಂತೆ ಮಾಡಿವೆ.

ಹಲ್ಮುಖಿ ಗೌಡನ ಪಲಾಯನ

ಕ್ಷೇತ್ರ ಮರುವಿಂಗಡಣೆಯಿಂದಾಗಿ ಕೊಡಗು ಜಿಲ್ಲೆಯ ಮೂರು ಅಸೆಂಬ್ಲಿ ಕ್ಷೇತ್ರಗಳಾದ ಸೋಮವಾರಪೇಟೆ, ವಿರಾಜಪೇಟೆ ಮತ್ತು ಮಡಿಕೇರಿ ಈಗ ಮಂಗಳೂರಿನಿಂದ ಬೇರ್ಪಟ್ಟು ಮೈಸೂರು ಲೋಕಸಭಾ ಕ್ಷೇತ್ರಕ್ಕೆ ಸೇರ್ಪಡೆಯಾಗಿದೆ. ಈ ಮೂರೂ ಕ್ಷೇತ್ರಗಳಲ್ಲಿ ಬಿಜೆಪಿ ಪ್ರಾಬಲ್ಯವನ್ನು ಹೊಂದಿತ್ತು, ಆ ಕ್ಷೇತ್ರಗಳು ಕೈಬಿಟ್ಟು ಹೋದ ಕಾರಣದಿಂದಾಗಿ ಸದಾನಂದ ಗೌಡರು ಪಕ್ಕದ ಕ್ಷೇತ್ರಕ್ಕೆ ಹೋದರು ಎಂಬ ವಾದವನ್ನು ಬಿಜೆಪಿಗಳು ಮುಂದಿಡುತ್ತಿದ್ದಾರೆ. ಆದರೆ ಮಂಗಳೂರು ಲೋಕಸಭಾ ಕ್ಷೇತ್ರಕ್ಕೆ ಸೇರುವ ಎಂಟು ಅಸೆಂಬ್ಲಿ ಕ್ಷೇತ್ರಗಳಲ್ಲಿ ನಾಲ್ಕು ಬಿಜೆಪಿ ಮತ್ತು ನಾಲ್ಕು ಕಾಂಗ್ರೆಸ್ ಗೆದ್ದು ಸಮಬಲವನ್ನು ಹೊಂದಿವೆ. ಅಂದರೆ ಇಲ್ಲಿ ಇಬ್ಬರಿಗೂ ಗೆಲ್ಲುವ ಸಮಾನ ಅವಕಾಶವಿದೆ. ಇದೊಂದು ರೀತಿಯಲ್ಲಿ ಟ್ವೆಂಟಿ ಟ್ವೆಂಟಿ ಮ್ಯಾಚ್ ಎಂದು ಪರಿಗಣಿಸಿ ಆಡುವ ಬದಲಾಗಿ ಸದಾನಂದ ಗೌಡರು ಪಕ್ಕದ ಕ್ರೀಡಾಂಗಣಕ್ಕೆ ಪಲಾಯನ ಮಾಡಿದ್ದು ಬಿಜೆಪಿ ಕಾರ್ಯಕರ್ತರ ಮುನಿಸಿಗೆ ಕಾರಣವಾಗಿದೆ.




ಕೃಷ್ಣಪಾಲೇಮಾರ್

ವಾಸ್ತವವಾಗಿ ಸದಾನಂದ ಗೌಡರಿಗೆ ಹೆದರಿಕೆ ಹುಟ್ಟಿಸಿದ್ದು ಈ ಅಂಕಿ ಅಂಶಗಳಲ್ಲ, ಬದಲಾಗಿ ಕರಾವಳಿಯಲ್ಲಿ ಇತ್ತೀಚೆಗೆ ಭಜರಂಗದಳ ಮತ್ತು ಶ್ರೀರಾಮಸೇನೆಗಳ ಹಾರಾಟ ಮತ್ತು ಆರ್ಭಟದಿಂದ ಬಿಜೆಪಿಯನ್ನು ಸೈಲೆಂಟಾಗಿ ಬೆಂಬಲಿಸುತ್ತಿದ್ದ ಮಧ್ಯಮ ವರ್ಗದಲ್ಲಿ ಈಗ ಬೇಸರ ಮೂಡಿದೆ. ಮಾತ್ರವಲ್ಲ, ಮಾರಲ್ ಪೊಲೀಸಿಂಗ್ ಹೆಸರಿನಲ್ಲಿ ಚೆಡ್ಡಿಗಳು ಎಸಗುತ್ತಿರುವ ಅನ್ಯಾಯ, ಆಗಂತುಕ ಚಟುವಟಿಕೆಗಳು ಸ್ವತಃ ಪಕ್ಷದ ಕಾರ್ಯಕರ್ತರಲ್ಲೂ ಭಿನ್ನಾಭಿಪ್ರಾಯವನ್ನು ಮೂಡಿಸಿದೆ. ಇದೆಲ್ಲ ಗೌಡರ ದಿಗಿಲಿಗೆ ಕಾರಣವಾಗಿವೆ.

ಇದೆಲ್ಲದರ ಜೊತೆಜೊತೆಗೆ ನೂರಾರು ವರ್ಷಗಳಿಂದ ಸಹೋದರರಂತೆ ಬದುಕುತ್ತಿದ್ದ ಹಿಂದೂ ಮತ್ತು ಕ್ರಿಶ್ಚಿಯನ್ನರ ನಡುವೆ ಈ ವಾನರ ಸೇನೆಗಳು ಒಡಕು ಮೂಡಿಸಿರುವುದು ಬಿಜೆಪಿ ಪಾಲಿಗೆ ದೊಡ್ಡ ಪೆಟ್ಟಾಗಿದೆ. ಚರ್ಚ್‌ಗಳ ಮೇಲಿನ ದಾಳಿಯಿಂದಾಗಿ ಕಂಗೆಟ್ಟಿರುವ ಇಡೀ ಕ್ರಿಶ್ಚಿಯನ್ ಸಮುದಾಯವೇ ಈ ಬಾರಿ ಬಿಜೆಪಿಗೆ ಪಾಠ ಕಲಿಸಬೇಕೆಂದು ಪಣ ತೊಟ್ಟುನಿಂತಿದೆ. ಆದ್ದರಿಂದ ಈ ಚುನಾವಣೆಯಲ್ಲಿ ಕ್ರಿಶ್ಚಿಯನ್ ಸಮುದಾಯದ ಒಂದೇ ಒಂದು ಮತವೂ ಬಿಜೆಪಿ ಅಭ್ಯರ್ಥಿಗೆ ಬೀಳುವುದಿಲ್ಲ ಎಂಬುದು ಖಚಿತ.

ಮತ್ತೊಂದೆಡೆ ಕರಾವಳಿ ಪ್ರದೇಶದಲ್ಲಿ ಹಿಂದೂಗಳಷ್ಟೇ ಪ್ರಬಲರಾಗಿರುವ ಅಲ್ಪಸಂಖ್ಯಾತ ಮುಸ್ಲಿ ಮತಬಾಂಧವರೂ ಬಿಜೆಪಿ ಮತ್ತು ಭಜರಂಗದಳದ ಅಟ್ಟಹಾಸಕ್ಕೆ ಗುರಿಯಾಗಿ ಅಪಾರ ನೋವು ಮತ್ತು ನಷ್ಟವನ್ನು ಅನುಭವಿಸಿದ್ದಾರೆ. ಆದ್ದರಿಂದ ಆ ಸಮುದಾಯ ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿಗೆ ಸಮಾಧಿ ಕಟ್ಟುವ ನಿರ್ಣಯವನ್ನು ಕೈಗೊಂಡಿದೆ.

ಈ ಎಲ್ಲ ಕಾರಣಗಳು ಕಾಂಗ್ರೆಸ್ ಪಕ್ಷದ ಅಭ್ಯರ್ಥಿ ಜನಾರ್ದನ ಪೂಜಾರಿ ಅವರಿಗೆ ಪೂರಕವಾದ ವಾತಾವರಣವನ್ನು ಸೃಷ್ಟಿಸಿವೆ. ಪೂಜಾರಿಯವರ ಒಂದು ಅಡ್ವಾಂಟೇಜ್ ಎಂದರೆ 'ಈ ಮನುಷ್ಯ ಭ್ರಷ್ಟನಲ್ಲ' ಎಂಬ ಅಭಿಪ್ರಾಯ ಜನರಲ್ಲಿ ಮನೆಮಾಡಿರುವುದು. ಜೊತೆಗೆ ಕಳೆದ ಮೂರು ಬಾರಿ ಪೂಜಾರಿ ಸೋಲು ಕಂಡಿರುವುದರಿಂದ ಈಗ ಅವರ ಬಗ್ಗೆ ಒಂದು ರೀತಿಯ ಅನುಕಂಪದ ಅಲೆಯೂ ಕರಾವಳಿಯುದ್ದಕ್ಕೂ ಬೀಸುತ್ತಿದೆ.




ನಳಿನಕುಮಾರ್

ಪೂಜಾರಿಯವರು ಎಂತಹ ನಾಯಕ ಎಂದರೆ ಅವರು ಈ ಹಿಂದೆ ಸೋತಿದ್ದಾಗಲೂ ಅವರೆಂದೂ ಮಂಗಳೂರಿನತ್ತ ಬೆನ್ನುಮಾಡಿ ಕುಳಿತವರಲ್ಲ, ಬದಲಿಗೆ ಸದಾ ಜನರೊಂದಿಗಿದ್ದವರು, ಅವರ ಬೇಕುಬೇಡಗಳಿಗೆ ಸ್ಪಂದಿಸಿದವರು. ಗೋಕರ್ಣನಾಥೇಶ್ವರ ದೇವಸ್ಥಾನ, ಬಿಲ್ಲವ ಸಂಘ ಮತ್ತು ಮಂಗಳೂರು ದಸರಾ ಮೊದಲಾದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಿ ಎಲ್ಲ ಮತ ಬಾಂಧವರೊಂದಿಗೆ ಸದಾ ಸಂಪರ್ಕ ಸಾಧಿಸಿಕೊಂಡು ಬಂದವರು. ಹೀಗಾಗಿ ಪೂಜಾರಿ ಬರಿ ಬಿಲ್ಲವ ಸಮುದಾಯದ ನಾಯಕನಾಗಿ ಮಾತ್ರ ಬಿಂಬಿತವಾಗದೇ 'ಕುಡ್ಲದ ಮಗೆ' (ಮಂಗಳೂರಿನ ಮಗ) ಎಂದು ಎಲ್ಲ ಧರ್ಮದವರ ಪ್ರೀತಿಗೆ ಪಾತ್ರರಾಗಿರುವವರು.

ಕಾಂಗ್ರೆಸ್ ಕಾರ್ಯತಂತ್ರ


ಹಾಗಂತ ಜನಾರ್ದನ ಪೂಜಾರಿಗೆ ಆ ಕ್ಷೇತ್ರದಲ್ಲಿ ರಾಜಕೀಯ ವಿರೋಧಿಗಳೇ ಇಲ್ಲವೆಂದಲ್ಲ, ಪೂಜಾರಿ ಮತ್ತು ವೀರಪ್ಪ ಮೊಯ್ಲಿ ನಡುವಿನ ಹಾವು-ಮುಂಗುಸಿಯಾಟ ಮಂಗಳೂರು ಕ್ಷೇತ್ರದಲ್ಲಿ ಜಗತ್ ಪ್ರಸಿದ್ಧವಾಗಿದೆ. ಕಾಂಗ್ರೆಸ್ ನಾಯಕರು ಸಮಯ ಸಿಕ್ಕಾಗಲೆಲ್ಲ ಪೂಜಾರಿ ಬಗ್ಗೆ ಮೊಯ್ಲಿ ಕಿವಿ ಊದುತ್ತಿರುತ್ತಾರೆ. ಹಾಗೆಯೇ ಪೂಜಾರಿ 'ಆ ಕಾರ್ಕಳದವ' (ಮೊಯ್ಲಿಯನ್ನು ಪೂಜಾರಿ ಸಂಭೋದಿಸುವುದೇ ಹೀಗೆ!) ಏನು ಹೇಳುತ್ತಾನೆ? ಎಂದು ಕಾರ್ಯಕರ್ತರಲ್ಲಿ ಪ್ರಶ್ನಿಸುವುದುಂಟು.



ಮೊಯ್ಲಿ

ಆದರೆ ಈ ಬಾರಿಯ ಚುನಾವಣೆಯಲ್ಲಿ ಇಂತಹ ವೈಮನಸ್ಸನ್ನು ದೂರವಿಟ್ಟು ಪಕ್ಷದ ಪರವಾಗಿ ಕೆಲಸ ಮಾಡಬೇಕೆಂದು ಹೈಕಮಾಂಡ್ ವಿಶೇಷವಾಗಿ ಆದೇಶ ನೀಡಿದೆ. ಈ ಕಾರಣದಿಂದಲೇ ಸೋನಿಯಾ ಗಾಂಧಿಯವರ 'ಕಿಚನ್ ಕ್ಯಾಬಿನೆಟ್' ಸದಸ್ಯ ಆಸ್ಕರ್ ಫರ್ನಾಂಡಿಸ್ ಮಂಗಳೂರಿನಲ್ಲಿ ಹಲವಾರು ಸುತ್ತಿನ ಮಾತುಕತೆ ನಡೆಸಿ ಪಕ್ಷದ ಆಂತರಿಕ ಭಿನ್ನಾಭಿಪ್ರಾಯಗಳನ್ನು ಶಮನಗೊಳಿಸಿದ್ದಾರೆ. ಜೊತೆಗೆ ವೀರಪ್ಪ ಮೊಯ್ಲಿ ಅವರಿಗೆ ಚಿಕ್ಕಬಳ್ಳಾಪುರದಲ್ಲಿ ಟಿಕೆಟ್ ನೀಡಿ ಅವರ ಬೆಂಬಲಿಗರನ್ನು ಸಮಾಧಾನಗೊಳಿಸಲಾಗಿದೆ.


ಮಂಗಳೂರು ಕ್ಷೇತ್ರಕ್ಕೆ ಹೊಸದಾಗಿ ಸೇರ್ಪಡೆಯಾಗಿರುವ ಬೆಳ್ತಂಗಡಿ ಮತ್ತು ಮೂಡಬಿದ್ರೆ ಅಸೆಂಬ್ಲಿ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಶಾಸಕರೇ ಜಯಗಳಿಸಿರುವುದರಿಂದ ಕಾಂಗ್ರೆಸ್‌ಗೆ ಇನ್ನಷ್ಟು ಹುರುಪು ತಂದಿದೆ. ಅದರಲ್ಲೂ ಬೆಳ್ತಂಗಡಿಯಲ್ಲಿ ಜನಾರ್ದನ ಪೂಜಾರಿಯ ಸ್ವಜಾತಿ ಬಂಧು ವಸಂತ ಬಂಗೇರಾ ರಾತ್ರಿ ಹಗಲು ಪೂಜಾರಿಯ ಜಯಕ್ಕಾಗಿ ಶ್ರಮಿಸುತ್ತಿದ್ದಾರೆ. ಮೂಡುಬಿದ್ರೆ ಕ್ಷೇತ್ರದಿಂದ ವೀರಪ್ಪ ಮೊಯ್ಲಿಯ ಬಲಗೈ ಬಂಟ ಶಾಸಕ ಅಭಯ್ ಚಂದ್ರ ಜೈನ್ ಪೂಜಾರಿಯ ಜಯಕ್ಕಾಗಿ ಶ್ರಮಿಸದಿದ್ದರೆ ತನಗೆ ಉಳಿಗಾಲವಿಲ್ಲ ಎಂಬುದನ್ನರಿತು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ. ಮೊಯ್ಲಿಯ ಪಟ್ಟದ ಶಿಷ್ಯ ಬಂಟ್ವಾಳದ ಶಾಸಕ ರಮಾನಾಥ ರೈ ಕೂಡ ಈಗ ಪೂಜಾರಿ ಪಾಳಯದಲ್ಲಿ ಅಪಾರವಾದ ಶ್ರಮದಾನ ಮಾಡುತ್ತಾ ಹೈಕಮಾಂಡ್ ರಾಯಭಾರಿ ಆಸ್ಕರ್ ಫರ್ನಾಂಡಿಸ್‌ರ ಮೆಚ್ಚುಗೆ ಪಡೆಯುವ ಯತ್ನದಲ್ಲಿದ್ದಾರೆ.



ಜನಾರ್ದನ ಪೂಜಾರಿ

ಮೀಸಲು ಕ್ಷೇತ್ರವಾದ ಸುಳ್ಯವೊಂದೇ ಸದ್ಯ ಬಿಜೆಪಿ ತೆಕ್ಕೆಯಲ್ಲಿರುವುದು. ಇಲ್ಲಿ ಬಿಜೆಪಿಯ ಶಾಸಕ ಅಂಗಾರ ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ಪಕ್ಷದ ಪರ ಬಿರುಸಿನ ಪ್ರಚಾರದಲ್ಲಿ ಮಗ್ನರಾಗಿದ್ದಾರೆ. ಇದು ಸದಾನಂದ ಗೌಡರ ಹುಟ್ಟೂರಾಗಿರುವುದರಿಂದ ಮತ್ತು ಕುರುಂಜಿ ವೆಂಕಟರಮಣ ಗೌಡರಂತಹ ಖ್ಯಾತ ಶಿಕ್ಷಣ ತಜ್ಞ ಕೂಡ ತೆರೆಮರೆಯಲ್ಲಿ ಬಿಜೆಪಿ ಪರ ಕೆಲಸ ಮಾಡುತ್ತಿರುವುದು ಚೆಡ್ಡಿಗಳಿಗೆ ಸ್ವಲ್ಪಮಟ್ಟಿಗೆ ನೆರವಾಗಬಹುದು.

ಸುರತ್ಕಲ್‌ನಲ್ಲಿ ವಿಚಿತ್ರವಾದ ವಾತಾವರಣವಿದೆ. ಇಲ್ಲಿಯ ಬಿಜೆಪಿ ಶಾಸಕ ಕೃಷ್ಣ ಪಾಲೇಮಾರ್ ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದು ಮಂಗಳೂರಿನಿಂದ ಬಿಜೆಪಿಯ ಅಭ್ಯರ್ಥಿಯನ್ನು ಗೆಲ್ಲಿಸುವ ಜವಾಬ್ದಾರಿ ಹೊತ್ತಿದ್ದಾರೆ. ಆದರೆ ಮೂಲತಃ ರಿಯಲ್ ಎಸ್ಟೇಟ್ ಉದ್ಯಮಿಯಾದ ಕೃಷ್ಣ ಪಾಲೇಮಾರ್ ಇತರೆ ಚೆಡ್ಡಿಗಳಂತೆ ಹಿಂದೂತ್ವವಾದಿಯಲ್ಲ, ತಮ್ಮ ಕ್ಷೇತ್ರದ ಎಲ್ಲ ಮತೀಯರೊಂದಿಗೆ ಸಾಮರಸ್ಯ ಮತ್ತು ಸೌಹಾರ್ದಯುತ ಸಂಬಂಧವನ್ನು ಕಾಪಾಡಿಕೊಂಡು ಬಂದಿರುವ ಪಾಲೇಮಾರ್‌ಗೆ ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಜನ ಓಟು ಹಾಕಿದ್ದು ಅವರ ವ್ಯಕ್ತಿತ್ವಕ್ಕೇ ವಿನಃ ಬಿಜೆಪಿಯ ಹಿಂದೂತ್ವದ ಸಿದ್ಧಾಂತಕ್ಕಲ್ಲ. ಹೀಗಾಗಿ ಅಸೆಂಬ್ಲಿ ಚುನಾವಣೆಯಲ್ಲಿ ಪಾಲೇಮಾರ್ ಅವರಿಗೆ ಓಟು ಹಾಕಿದ್ದ ಮತದಾರರೆಲ್ಲಾ ಈಗ ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಯ ಅಭ್ಯರ್ಥಿಗೇ ಮತ್ತೆ ಮತ ಹಾಕುತ್ತಾರೆಂಬುದು ಅಕ್ಷರಶಃ ಸುಳ್ಳು. ಈ ಕಾರಣಕ್ಕಾಗಿ ಜಿಲ್ಲಾ ಉಸ್ತುವಾರಿ ಸಚಿವರ ಕ್ಷೇತ್ರದಲ್ಲೇ ಬಿಜೆಪಿಯ ಕಮಲಕ್ಕಿಂತ ಕಾಂಗ್ರೆಸ ಹಸ್ತಕ್ಕೆ ಹೆಚ್ಚು ಮತಗಳು ಸಿಗಲಿವೆ.



ರಮಾನಾಥ್ ರೈ

ಕಳೆದ ಬಾರಿ ಉಳ್ಳಾಲ ಉಪಚುನಾವಣೆಯಲ್ಲಿ ಕಾಂಗ್ರೆಸ್‌ನ್ನು ಸೋಲಿಸಬೇಕೆಂದು ಬಿಜೆಪಿ ಶತಪ್ರಯತ್ನ ಮಾಡಿತ್ತು. ಆದರೆ ಅಲ್ಲಿ ಮತ್ತೆ ಕಾಂಗ್ರೆಸ್ ಜಯಭೇರಿ ಬಾರಿಸಿತ್ತು. ಉಳ್ಳಾಲದಲ್ಲಿ ಅಲ್ಪಸಂಖ್ಯಾತ ಮುಸ್ಲಿಮರು ಹೆಚ್ಚು ಸಂಖ್ಯೆಯಲ್ಲಿದ್ದಾರೆ. ಅದ್ದರಿಂದ ಇಲ್ಲಿ ಬಿಜೆಪಿಯವರ ಆಟ ನಡೆಯುವುದಿಲ್ಲ.

ಗುರುವಿನ ಬೆದರಿಕೆ

ಸದಾನಂದ ಗೌಡರ ಸ್ವಕ್ಷೇತ್ರವಾದ ಪುತ್ತೂರು ಅಸೆಂಬ್ಲಿ ಕ್ಷೇತ್ರದಲ್ಲೇ ಅವರ ಪ್ರತಿಷ್ಠೆ ಕಳೆಗುಂದಿದೆ. ಕಳೆದ ಅಸೆಂಬ್ಲಿ ಚುನಾವಣೆಯಲ್ಲಿ ಸದಾನಂದ ಗೌಡರ ರಾಜಕೀಯ ಗುರು ರಾಮಭಟ್ಟರು ತಮ್ಮ ಶಿಷ್ಯನ ರಾಜಕೀಯ ವೈಖರಿ ಕಂಡು ಕೆಂಡಮಂಡಲವಾಗಿದ್ದರು, ಗೌಡರ ವಿರುದ್ಧ ಬಂಡಾಯವೆದ್ದಿದ್ದರು. ಬಿಜೆಪಿಯ ಅಧಿಕೃತ ಅಭ್ಯರ್ಥಿ ವಿರುದ್ಧ ಪುತ್ತೂರಿನಲ್ಲಿ ಬಂಡಾಯದ ಅಭ್ಯರ್ಥಿಯಾಗಿ ಶಕುಂತಲಾ ಶೆಟ್ಟಿಯವರನ್ನು ಕಣಕ್ಕೆ ಇಳಿಸಿದ್ದರು. ಶಕುಂತಲಾ ಅವರು ಅಂದು ಸೋತರೂ ಸುಮಾರು 26 ಸಾವಿರ ಮತಗಳನ್ನು ಪಡೆದಿದ್ದರು. ಇದನ್ನು ಕಂಡು ಕಂಗಾಲಾಗಿದ್ದ ಸದಾನಂದ ಗೌಡ ತಮ್ಮ ಗುರು ರಾಮಭಟ್ಟರ ಜೊತೆ ಸಂಧಾನ ಮಾಡಲು ಶತಪ್ರಯತ್ನ ಮಾಡಿದ್ದರೂ ವಿಫಲರಾಗಿದ್ದರು.

ಈಗ ಸ್ವತಃ ರಾಮಭಟ್ಟರೇ ತಮ್ಮ ಇಳೀ ವಯಸ್ಸಿನಲ್ಲಿ ಸ್ವಾಭಿಮಾನ ವೇದಿಕೆ ಎಂಬ ಸಂಘಟನೆಯ ಹೆಸರಲ್ಲಿ ಸ್ವತಂತ್ರ ಅಭ್ಯರ್ಥಿಯಾಗಿ ಸ್ಪರ್ಧಿಸುತ್ತಿದ್ದಾರೆ. ಬ್ರಾಹ್ಮಣ ಸಮುದಾಯಕ್ಕೆ ಸೇರಿದ ರಾಮಭಟ್ಟರು ಬಿಜೆಪಿಯ ಹಳೇ ರೂಪವಾದ ಜನಸಂಘದ ಕಾಲದಿಂದಲೂ ಪಕ್ಷಕ್ಕಾಗಿ ದುಡಿದ ಪ್ರಾಮಾಣಿಕ ವ್ಯಕ್ತಿ ಎಂಬ ಗೌರವ ಹೊಂದಿರುವುದರಿಂದ ಹಳೇ ಕಾಲದವರೆಲ್ಲಾ ಅವರಿಗೆ ಸಾಥ್ ನೀಡಲಿದ್ದಾರೆ. ಆ ಮೂಲಕ ಬಿಜೆಪಿಯ ಸಾಂಪ್ರದಾಯಿಕ ಮತಗಳು ಹರಿದುಹೋಗಲಿವೆ. ಇದು ಖಂಡಿತವಾಗಿಯೂ ಬಿಜೆಪಿ ಪಾಲಿಗೆ ಶಾಪವಾಗಿದ್ದು ಕಾಂಗ್ರೆಸ್‌ಗೆ ಲಾಭ ತಂದುಕೊಡಲಿದೆ.

ಬಿಜೆಪಿಯ ಭದ್ರಕೋಟೆಯೆಂದೇ ಬಿಂಬಿತವಾಗಿರುವ ಮಂಗಳೂರು ಅಸೆಂಬ್ಲಿ ಕ್ಷೇತ್ರದ ವೈಶಿಷ್ಟ್ಯವೆಂದರೆ, ಇಲ್ಲಿ ಹಿಂದೂ ಮತದಾರರಷ್ಟೇ ಸಂಖ್ಯೆಯಲ್ಲಿ ಅಲ್ಪಸಂಖ್ಯಾತ ಮುಸ್ಲಿಂ ಮತ್ತು ಕ್ರೈಸ್ತ ಬಾಂಧವರೂ ಇದ್ದಾರೆ. ಸದ್ಯದ ಶಾಸಕ ಬಿಜೆಪಿಯ ಯೋಗೇಶ್ ಭಟ್ ವೈಯಕ್ತಿಕ ವರ್ಚಸ್ಸಿನಿಂದ ಗೆದ್ದು ಬಂದವರು. ಉಗ್ರವಾದ ಭಾಷಣ ಅಥವಾ ಉಗ್ರಪ್ರತಾಪ ಬೀರುವುದು ಇವರ ಜಾಯಮಾನವಲ್ಲ. ಹೀಗಾಗಿ ಕಳೆದ ಬಾರಿ ಯೋಗೇಶ್ ಭಟ್ಟರಿಗೆ ವೋಟು ಹಾಕಿದವರು ಈ ಬಾರಿ ಬಿಜೆಪಿಗೆ ಕೈಕೊಡುವುದು ಗ್ಯಾರಂಟಿ. ನಿರುದ್ಯೋಗಿ ಸಂಘಪರಿವಾರಿಗಳ ಅಟ್ಟಹಾಸದಿಂದ ಬೇಸತ್ತಿರುವ ಮಂಗಳೂರಿನ ಹಿಂದೂ ಧರ್ಮದ ಯುವಕ-ಯುವತಿಯರು ಮತ್ತು ಅಲ್ಪಸಂಖ್ಯಾತ ಕ್ರೈಸ್ತರು ಮತ್ತು ಮುಸ್ಲಿಮರು ಈ ಬಾರಿ 'ಕೈ' ಹಿಡಿಯಲು ತುದಿಗಾಲಲ್ಲಿ ನಿಂತಿರುವುದೂ ಬಿಜೆಪಿಗೆ ಶಾಪವಾಗಲಿದೆ.

ಇನ್ನು ಬಿಜೆಪಿಯ ಅಭ್ಯರ್ಥಿಯಾದ ನಳಿನ್ ಕುಮಾರ್ ಕಟೀಲ್ ಕಟ್ಟರ್ ಹಿಂದೂತ್ವವಾದಿ. ಮೂಲತಃ ಆರೆಸ್ಸೆಸ್ಸಿನ ಸದಸ್ಯ, ಸಂಘಪರಿವಾರ, ಭಜರಂಗದಳ ಮತ್ತು ಶ್ರೀರಾಮಸೇನೆಯ ಪುಂಡರೊಂದಿಗೆ ಗಳಸ್ಯಕಂಠಸ್ಯ ಸಂಬಂಧ ಹೊಂದಿರುವಾತ. ಬಂಟ ಸಮುದಾಯಕ್ಕೆ ಸೇರಿದ ನಳಿನ್ ಕುಮಾರ್ ಕಟೀಲ್ ಎಂಬ ಚೆಡ್ಡಿಯ ಹಿಂದೆ ಇವತ್ತು ಕೆಲ ಪುಂಡರು ಇದ್ದು ಅವರೆಲ್ಲ ಆತನ ಪರವಾಗಿ ಕ್ಷೇತ್ರದುದ್ದಕ್ಕೂ ಪ್ರಚಾರದಲ್ಲಿ ತೊಡಗಿದ್ದಾರೆ. ಮೇಲುನೋಟಕ್ಕೆ ಇದು ಕಟೀಲನ ಪ್ಲಸ್ ಪಾಯಿಂಟ್ ತರಹ ಕಂಡುಬಂದರೂ ಅವರೆಲ್ಲ ಮತಯಾಚನೆಗೆ ಹೋದೆಡೆಯಲ್ಲೆಲ್ಲ ಜನರಿಂದ ವಾಚಾಮಗೋಚರ ಉಗಿಸಿಕೊಳ್ಳುತ್ತಿರುವುದು ವಾಸ್ತವ!

ಮಂಗಳೂರು ಕ್ಷೇತ್ರದಲ್ಲಿ ಇವತ್ತು ಬಿಜೆಪಿಯ ಅಬ್ಬರ ಜೋರಾಗಿದ್ದರೂ ಕಾಂಗ್ರೆಸ್ ಪರವಾದ ಅಲೆಯೊಂದು ಕರಾವಳಿಯುದ್ದಕ್ಕೂ ತಣ್ಣಗೆ ಬೀಸುತ್ತಿರುವುದು ಸುಳ್ಳಲ್ಲ. ಜೊತೆಗೆ ಜಾತಿವಾರು ಲೆಕ್ಕಾಚಾರ ಕೂಡ ಪೂಜಾರಿಯವರ ಪರವಾಗಿವೆ. ಇಲ್ಲಿ ಪೂಜಾರಿಯವರ ಸ್ವಜಾತಿಯ ಬಿಲ್ಲವ ಮತದಾರರು ಮೂರು ಲಕ್ಷದಷ್ಟಿದ್ದು ಅಲ್ಪಸಂಖ್ಯಾತರ ಎರಡು ಲಕ್ಷದಷ್ಟು ಮತಗಳಿವೆ. ಇವೆಲ್ಲ ಪೂಜಾರಿಯವರ ಮಡಿಲಿಗೇ ಬೀಳಲಿವೆ.

ದೇವೇಗೌಡರ ಜನತಾದಳ ಕೂಡ ಕರಾವಳಿಯಲ್ಲಿ ಬಿಜೆಪಿಯನ್ನು ಬುಡಸಮೇತ ನಿರ್ನಾಮ ಮಾಡುವ ಉದ್ದೇಶದಿಂದ ಯಾವುದೇ ಅಭ್ಯರ್ಥಿಯನ್ನು ಕಣಕ್ಕಿಳಿಸದಿರುವುದು ಪೂಜಾರಿ ಅವರ ಗೆಲುವಿಗೆ ಪೂರಕವಾಗಿದೆ.

ಈ ಎಲ್ಲ ಕಾರಣಗಳಿಗೆ ಬಿಜೆಪಿಯವರ ಅಬ್ಬರದ ನಡುವೆಯೂ ಕಾಂಗ್ರೆಸ್ ಜನಾರ್ದನ ಪೂಜಾರಿ ಗೆಲುವಿನ ನಗೆಯನ್ನು ಬೀರುತ್ತಿದ್ದಾರೆ.

● ಸದಾಶಿವ ಶೆಣೈ



ಸಿದ್ದು ಏಟಿಗೆ ಬಿಜೆಪಿ ಸುಸ್ತು

ಈ ಬಾರಿಯ ಚುನಾವಣೆಯಲ್ಲಿ ಬಜೆಪಿ ವಿರುದ್ಧ ಕಾಂಗ್ರೆಸ್ ಮೇಲುಗೈ ಸಾಧಿಸುವ ಟ್ರೆಂಡ್ ಕಾಣಿಸುತ್ತಿದೆ. ಅದಕ್ಕೆ ಬಜೆಪಿಗಳ ದುರಾಡಳಿತ, ಭ್ರಷ್ಟಾಚಾರ, ದೊಂಬಿ ಗಲಾಂಸೆಯ ರಾಜಕೀಯಗಳು ಪ್ರಮುಖ ಕಾರಣ.

ಇವೆಲ್ಲಾ ಬಜೆಪಿಗಳ ಸ್ವಯಂಕೃತ ಅಪರಾಧಗಳು.

ಆದರೆ ಇದೆಲ್ಲಕ್ಕಿಂತ ಮುಖ್ಯವಾಗಿ ಬಜೆಪಿಗಳಿಗೆ ಗಾಬರಿ ಉಂಟು ಮಾಡುತ್ತಿರುವುದು ಕಾಂಗ್ರೆಸ್ ನಾಯಕ ಸಿದ್ದರಾಮಯ್ಯ!

ರಾಜ್ಯದ 28 ಲೋಕಸಭಾ ಕ್ಷೇತ್ರಗಳ ಪೈಕಿ ಕನಿಷ್ಠ 15 ರಲ್ಲಿ ಕುರುಬರ ಹಾಗೂ ಹಿಂದುಳಿದ ವರ್ಗಗಳ ಮತದಾರರು ನಿರ್ಣಾಯಕವಾಗಿದ್ದಾರೆ. ಹಾಗೂ ಇವರೆಲ್ಲರಿಗೂ ಇರುವ ಏಕೈಕ ಪ್ರಶ್ನಾತೀತ ಲೀಡರ್ ಎಂದರೆ ಅದು ಸಿದ್ದರಾಮಯ್ಯ ಮಾತ್ರ. ಅಂತ ಸಿದ್ದು ಈಗ ಬಿರುಗಾಳಿಯಂತೆ ರಾಜ್ಯ ಸುತ್ತುತ್ತಿದ್ದಾರೆ.

ಅಹಿಂದ ವರ್ಗಗಳ ನಾಯಕ ಸಿದ್ದರಾಮಯ್ಯ ಹಾಲಿ ರಾಜ್ಯ ಕಾಂಗ್ರೆಸ್‌ನ ಏಕೈಕ ಮಾಸ್ ಲೀಡರ್, Crowd Puller ಹಾಗೂ ಪ್ರಚಂಡ ಭಾಷಣಕಾರರಾಗಿದ್ದಾರೆ. ಕಳೆದ 15 ದಿನಗಳಿಂದ ಉತ್ತರ ಕರ್ನಾಟಕದಲ್ಲಿ ಸತತ ಟೂರ್‌ನಲ್ಲಿರುವ ಸಿದ್ದರಾಮಯ್ಯನವರ ಪ್ರಚಾರ ಸಭೆಗಳಿಗೆ ಜನ ಕಿಕ್ಕಿರಿದು ಸೇರುತ್ತಿದ್ದಾರೆ. ಈ ಬೆಳವಣಿಗೆಯನ್ನು ಬಜೆಪಿ ನಿರೀಕ್ಷಿಸಿರಲಿಲ್ಲ. ಬಜೆಪಿಯ ರಾಜ್ಯ ನಾಯಕರಾದಿಯಾಗಿ ತುಂಡುಪುಂಡು ಲೀಡರ್‌ಗಳೂ ಕೂಡ ನಮಗೆ 24 ಸೀಟು ಗ್ಯಾರಂಟಿ ಎನ್ನುತ್ತಾ ತಮ್ಮ ಬೆನ್ನನ್ನು ತಾವೇ ಚಪ್ಪರಿಸಿಕೊಳ್ಳುತ್ತಾ ಓಡಾಡುತ್ತಿದ್ದರಲ್ಲ, ಈಗ ಅದೇ ಬಜೆಪಿ ಬೆನ್ನಿಗೆ ಸಿದ್ದು ಗುದ್ದಲು ಶುರು ಮಾಡಿದ್ದಾರೆ. ಈ ಏಟಿಗೆ ಬಜೆಪಿಗಳ RSS ಚೆಡ್ಡಿ ಕಳಚಿ ಬೀಳುತ್ತಿದೆ.

'ನಾನು ಕೇವಲ ಕುರುಬ ಜನಾಂಗದ ನಾಯಕನಲ್ಲ, ಎಲ್ಲಾ ಹಿಂದುಳಿದ ವರ್ಗಗಳ ನಾಯಕ' ಎಂದು ಸಿದ್ದು ಪ್ರತಿಪಾದಿಸುತ್ತಾರಾದರೂ, ಅದು ನಿಜ ಆಗಿದೆಯಾದರೂ ಕುರುಬ ಜನಾಂಗಕ್ಕೆ ಮಾತ್ರ ಸಿದ್ದರಾಮಯ್ಯನವರ ಮಾತು ವೇದವಾಕ್ಯವಿದ್ದಂತೆ.

ಮುಂಬೈ ಕರ್ನಾಟಕದ ಬೆಳಗಾವಿ, ಚಿಕ್ಕೋಡಿ, ಬಿಜಾಪುರ, ಹಾವೇರಿ, ಧಾರವಾಡ, ಬಾಗಲಕೋಟೆ ಕ್ಷೇತ್ರಗಳಲ್ಲಿ ಸರಾಸರಿ 2 ರಿಂದ 3 ಲಕ್ಷದಷ್ಟು ಅಹಿಂದ ಮತಗಳಿವೆ. ಸಿದ್ದು ಯಾವಾಗ ಇಲ್ಲಿಗೆ ಪ್ರತ್ಯಕ್ಷರಾದರೋ ಆಯಾ ಕ್ಷೇತ್ರಗಳ ಜಾತಿ ಸಮೀಕರಣವೇ ಏರುಪೇರಾಗಿ ಹೋಗಿದೆ. ಬಜೆಪಿಗಳ ದುಡ್ಡು, ಅಬ್ಬರದ ಪ್ರಚಾರಗಳು ಒಳಗಿಂದೊಳಗೇ ಕುಸಿದು ಬೀಳುತ್ತಿದೆ.

ಉದಾಹರಣೆಗೆ ಬೆಳಗಾಂ ಕ್ಷೇತ್ರದಲ್ಲಿ ಮೂರು ಲಕ್ಷದಷ್ಟು ಕುರುಬರಿದ್ದಾರೆ. ಸಿದ್ದು ಒಮ್ಮೆ ಇಲ್ಲಿ ಬಂದುಹೋದ ನಂತರ ಕಾಂಗ್ರೆಸ್ ಅಭ್ಯರ್ಥಿ ಅಮರಸಿಂಗ್ ಪಾಟೀಲ್‌ಗೆ ಆನೆಬಲ ಬಂದಂತಾಗಿ ಹೋಗಿದೆ. ಇದುವರೆಗೂ ಆತ್ಮವಿಶ್ವಾಸದಿಂದಿದ್ದ ಬಜೆಪಿಯ ಸುರೇಶ್ ಅಂಗಡಿ ಇದ್ದಕ್ಕಿದ್ದಂತೆ ಮೂಲೆಗುಂಪಾಗಿ ಕಾಂಗ್ರೆಸ ಅಮರ್‌ಸಿಂಗ್ ಪಾಟೀಲ ಹಾಗೂ ಜೆಡಿಎಸ್‌ನ ಎ.ಬಿ. ಪಾಟೀಲರ ನಡುವೆ ನೇರ ಸ್ಪರ್ಧೆ ಉದ್ಭವವಾಗಿದೆ.

ಅದೇ ರೀತಿ ಚಿಕ್ಕೋಡಿಯಲ್ಲೂ ಹತ್ತಿರತ್ತಿರ ಒಂದು ಲಕ್ಷ ನಲವತ್ತು ಸಾವಿರದಷ್ಟಿರುವ ಕುರುಬರು ಸಿದ್ದು ಕಾರಣದಿಂದ ಕಾಂಗ್ರೆಸ್‌ನ ಪ್ರಕಾಶ್ ಹುಕ್ಕೇರಿ ಜೊತೆ ನಿಂತಿದ್ದಾರೆ. ಇಲ್ಲಿ ಬಜೆಪಿಯ ಬಣಜಿಗ ಅಭ್ಯರ್ಥಿ ರಮೇಶ್ ಕತ್ತಿಗೆ ಸಿದ್ದರಾಮಯ್ಯನವರ ಶಕ್ತಿ ಪರಿಚಯವಾಗಿ ಸಂಕಟ ಅನುಭವಿಸುತ್ತಿದ್ದಾರೆ. ಈ ಕ್ಷೇತ್ರದ ನಿಪ್ಪಾಣಿ ಪ್ರಾಂತ್ಯದ ಶ್ರೀಮಂತ ಕುರುಬರೆಲ್ಲಾ ಎಷ್ಟು ಜೋಶ್‌ನಲ್ಲಿದ್ದಾರೆಂದರೆ ತಾವೇ ಸ್ವಂತ ದುಡ್ಡು ಖರ್ಚು ಮಾಡುತ್ತಾ ಕಾಂಗ್ರೆಸ್‌ಗಾಗಿ ಕೆಲಸ ಮಾಡುತ್ತಿದ್ದಾರೆ.

ಇತ್ತ ಬಿಜಾಪುರದಲ್ಲೂ ಒಂದೂ ಮುಕ್ಕಾಲು ಲಕ್ಷ ಕುರುಬ ಮತದಾರರಿಗೆ ಸಿದ್ದರಾಮಯ್ಯನವರೇ ನಾಯಕ. ಹಾಗಾಗಿ ಕಾಂಗ್ರೆಸ್‌ನ ಪ್ರಕಾಶ್ ರಾಠೋಡ್‌ಗೆ ಬಜೆಪಿಯ ರಮೇಶ್ ಜಿಗಜಿಣಗಿ ವಿರುದ್ಧ ಸೆಣಸಾಡಲು ಸಿದ್ದು ಒಮ್ಮೆ ಬಂದು ಹೋಗಿರುವುದು ಹಾರ್ಲಿಕ್ಸ್ ಕುಡಿಸಿದಂತಾಗಿದೆ.

ಮತ್ತೊಂದೆಡೆ ಹೈದರಾಬಾದ್ ಕರ್ನಾಟಕದ ಬೀದರ್, ಗುಲ್ಬರ್ಗಾ, ರಾಯಚೂರು, ಕೊಪ್ಪಳಗಳಲ್ಲೂ ಸಿದ್ದರಾಮಯ್ಯ ಪ್ರಭಾವ ಕೆಲಸ ಮಾಡುತ್ತಿದೆ. ಸಿದ್ದು ಸಭೆಗಳಿಗೆ ಭಾರಿ ಜನ ಸೇರುತ್ತಿದ್ದಾರೆ. ಧರಂಸಿಂಗ್, ಖರ್ಗೆಗಳಿಗೆ ಕಾಂಗ್ರೆಸ್‌ನ ಅಸಲಿ ಮತಗಳು ಜೊತೆಗೆ ಮುಸ್ಲಿಮರು ಹಾಗೂ ಅಹಿಂದ ಮತಬ್ಯಾಂಕ್ ಗ್ಯಾರಂಟಿಯಾಗುತ್ತಿದೆ.

ರಾಜ್ಯ ಕೆಪಿಸಿಸಿಯು ಸಿದ್ದರಾಮಯ್ಯನವರಿಗೆ 15 ದಿನಗಳ ಅವಿಶ್ರಾಂತ ಟೂರ್ ಕಾರ್ಯಕ್ರಮ ಸಿದ್ಧ ಮಾಡಿದೆ. ಕುರಿತೇಟು ಕೊಡುವಂತೆ ಎಲ್ಲೆಲ್ಲಿ ಕುರುಬರು ಹಾಗೂ ಅಹಿಂದ ಮತದಾರರ ಸಂಖ್ಯೆ ಜಾಸ್ತಿ ಇದೆಯೋ ಅಲ್ಲಿಗೆ ಗುರಿ ಇಟ್ಟಂತೆ ಸಿದ್ದರಾಮಯ್ಯ ಎಂಬ ಮಿಸೈಲ್ ಅನ್ನು ಬಜೆಪಿ ಕೋಟೆಯೊಳಕ್ಕೆ ಉಡಾಯಿಸುತ್ತಾ ಬಜೆಪಿಗಳ ಬುಡವನ್ನೇ ಚಿಂದಿ ಮಾಡುತ್ತಿದೆ.

ಇತ್ತ ದಕ್ಷಿಣ ಕರ್ನಾಟಕದ ಚಾಮರಾಜನಗರ, ಮೈಸೂರು, ಮಂಡ್ಯ, ಬೆಂಗಳೂರು, ತುಮಕೂರು, ಕೋಲಾರ, ಚಿತ್ರದುರ್ಗ ಹಾಗೂ ದಾವಣಗೆರೆಯಲ್ಲೂ ಸಿದ್ದರಾಮಯ್ಯ factor ಕಾಂಗ್ರೆಸ್‌ಗೆ ಲಾಭ ತಂದುಕೊಡುತ್ತಿದೆ. ಇಲ್ಲೆಲ್ಲಾ ಸರಾಸರಿ ಒಂದೂವರೆ ಲಕ್ಷದಿಂದ ಮೂರು ಲಕ್ಷದವರೆಗೂ ಅಹಿಂದ ಮತದಾರರಿದ್ದಾರೆ. ರಾಜ್ಯ ಕಾಂಗ್ರೆಸ್‌ನಲ್ಲೀಗ ಅತೀ ಬೇಡಿಕೆಯಿರುವ ನಾಯಕ ಸಿದ್ದರಾಮಯ್ಯ ಆಗಿರುವುದು ಆಶ್ಚರ್ಯವಾದರೂ ಸತ್ಯ. ಬಜೆಪಿಗಳ ಕೋಮುವಾದ, ಬ್ರಾಹ್ಮಣ ಬುದ್ಧಿಯನ್ನೂ ಝಾಡಿಸಲು ಸಿದ್ದುಗೆ ಮಾತ್ರ ಸಾಧ್ಯ. ಇದೇ ಮೊದಲ ಬಾರಿಗೆ ಸಿದ್ದು ಶಕ್ತಿ ಸಾಮರ್ಥ್ಯಗಳನ್ನು ಸರಿಯಾಗಿ ಅಂದಾಜಿಸಿರುವ ಕಾಂಗ್ರೆಸ್ ಅವರ ಓಡಾಟಕ್ಕೆ ಪ್ರತ್ಯೇಕ ಹೆಲಿಕಾಪ್ಟರ್ ನೀಡಿ ಬಜೆಪಿಗೆ ಜ್ವರ ತರಿಸುತ್ತಿದೆ. ಹಾಗೆ ನೋಡಿದರೆ ಬಜೆಪಿಯಲ್ಲಿ ಈಶ್ವರಪ್ಪನೆಂಬ ಕುರುಬ ನಾಯಕನಿದ್ದರೂ ಸಿದ್ದು ಎದುರು ಅವರ ಪ್ರಭಾವ ನಗಣ್ಯ. ಸಿದ್ದು ಬಜೆಪಿಗೆ ಉಂಟುಮಾಡಬಹುದಾದ ಡ್ಯಾಮೇಜ್ ಅನ್ನು ಅಂದಾಜಿಸಿರುವ ಬಜೆಪಿಗಳು ಕಂಗಾಲಾಗಿ ಈಗ ಹೊಸ ಅಪಪ್ರಚಾರ ಚಾಲೂ ಮಾಡಿದ್ದಾರೆ. ದಲಿತ ಜನಾಂಗದ ಖರ್ಗೆಯವರಿಗಿದ್ದ ವಿರೋಧ ಪಕ್ಷದ ನಾಯಕನ ಸ್ಥಾನವನ್ನು ಸಿದ್ದರಾಮಯ್ಯ ಸ್ವಾರ್ಥಕ್ಕಾಗಿ ಕಬಳಿಸಲು ಹೊರಟಿದ್ದಾರೆ ಎಂದು ವ್ಯಂಗ್ಯ ಮಾಡಲಾಗುತ್ತಿದೆ. ಜೆಡಿಎಸ್‌ನ ಕುಮಾರಸ್ವಾಮಿ ಕೂಡ ಇವೇ ಮಾತಾಡುತ್ತಿದ್ದಾರೆ. ಆದರೆ ಸಿದ್ದು ಕಾರಣದಿಂದ ಖರ್ಗೆ ಏನು ಬೀದಿಗೆ ಬೀಳುತ್ತಿಲ್ಲ, ಗುಲ್ಬರ್ಗಾದಿಂದ ಗೆದ್ದು ಕೇಂದ್ರ ಸಚಿವರಾಗಲಿದ್ದಾರೆ ಖರ್ಗೆ...


ಆದರೆ ಇದೇ ಜೆಡಿಎಸ್ ಹಾಗೂ ಬಜೆಪಿಗಳು ಯಾವ ದಲಿತ ನಾಯಕರಿಗೂ ಸೂಕ್ತ ಸ್ಥಾನಮಾನ ನೀಡಿಲ್ಲ ಎಂಬುದರತ್ತ ಸಿದ್ದು ಹಿಂಬಾಲಕರು ಬೆಟ್ಟು ಮಾಡಿ ತೋರಿಸುತ್ತಿದ್ದಾರೆ. ಜೆಡಿಎಸ್‌ನವರಿಗೆ ನಿಜಕ್ಕೂ ದಲಿತ ಪರ ಕಾಳಜಿ ಇದ್ದಿದ್ದರೆ ಡಿ. ಮಂಜುನಾಥರನ್ನು ಯಾಕೆ ಮುಖ್ಯಮಂತ್ರಿ ಮಾಡಲಿಲ್ಲ, ಬಜೆಪಿಗಳು ಬಂಗಾರೂ ಲಕ್ಷ್ಮಣ್‌ರನ್ನೇಕೆ ಪಾರ್ಟಿ ಬಿಟ್ಟು ಓಡಿಸಿದರು ಎಂದು ಪ್ರಶ್ನಿಸುತ್ತಿದ್ದಾರೆ.

ಚುನಾವಣೆ ಎಂದ ಮೇಲೆ ಇವೆಲ್ಲಾ ಇದ್ದಿದ್ದೆ. ಇದರಾಚೆಗಿನ ವಿಚಾರ ಏನೆಂದರೆ ಮೇ 16 ರಂದು ಪ್ರಕಟವಾಗಲಿರುವ ಚುನಾವಣಾ ಫಲಿತಾಂಶದಲ್ಲಿ ಕೆಲವು ಅನಿರೀಕ್ಷಿತ ಬೆಳವಣಿಗೆಗಳು ಸಂಭವಿಸಿರುತ್ತದೆ.

ಬಜೆಪಿ ಕಳೆದ ಬಾರಿಯ 18ಕ್ಕಿಂತ ಕಡಿಮೆ ಸ್ಥಾನ ಗೆಲ್ಲಲಿದೆ. ಕಾಂಗ್ರೆಸ್ ಹಿಂದಿನ 8ಕ್ಕಿಂತ ಹೆಚ್ಚು ಕಡೆ ಗೆಲುವು ಸಾಧಿಸಲಿದೆ.

ಇದರಲ್ಲಿ ಅಹಿಂದ ನಾಯಕ ಸಿದ್ದರಾಮಯ್ಯನವರ factor ಪ್ರಮುಖ ಕಾರಣವಾಗಲಿದೆ. ■

ಮೈಸೂರು: ದಿಲ್ಲಿಗೆ ಹಾರೀತೆ ಹಳ್ಳಿಹಕ್ಕಿ ವಿಶ್ವನಾಥ್?




ವಿಶ್ವನಾಥ್


ಕ್ಷೇತ್ರ ಮರು ವಿಂಗಡಣೆಯಿಂದಾಗಿ ಸ್ವರೂಪವನ್ನೇ ಬದಲಿಸಿಕೊಂಡಿರುವ ಮೈಸೂರು ಲೋಕಸಭಾ ಕ್ಷೇತ್ರವು ಕಾಂಗ್ರೆಸ್ ಅಭ್ಯರ್ಥಿ ಹಳ್ಳಿಹಕ್ಕಿ ಎಚ್. ವಿಶ್ವನಾಥ್ ಹಾಗೂ ಬಜೆಪಿಯ ಸಿ.ಎಚ್. ವಿಜಯಶಂಕರ್ ನಡುವಿನ ನೇರ ಜಿದ್ದಾಜಿದ್ದಿಗೆ ಸಾಕ್ಷಿಯಾಗಿದೆ. ಉಸ್ತುವಾರಿ ಸಚಿವೆ ಶೋಭಾ ಕರಂದ್ಲಾಜೆ ಹಾಗೂ ಸಿದ್ದರಾಜು ಇಲ್ಲಿ ನಡೆಸುತ್ತಿರುವ ಅಂದಾದುಂದಿ ಕೆಲಸಗಳಿಗೆ ಬಜೆಪಿ ಪೂರಾ ಸೊರಗಿ ನಿಂತಿದೆ. ಬಜೆಪಿ, ಕಾಂಗ್ರೆಸ್ ನಡುವೆ ಕುರುಬರ ಮತಗಳು ಇಬ್ಭಾಗವಾಗಿ ಒಕ್ಕಲಿಗರ ಮತಗಳಿಂದಲೇ ತಾನು ಗೆದ್ದು ಬಿಡುವೆ ಎಂಬ ಲೆಕ್ಕಾಚಾರದಲ್ಲಿಯೇ ಮುಳುಗಿರುವ ಜೆಡಿಎಸ್ ಅಭ್ಯರ್ಥಿ ಜೀವಿಜಯನ ರೈಲುಗಾಡಿ ಹಳಿತಪ್ಪುವ ಸಾಧ್ಯತೆಗಳೇ ಹೆಚ್ಚು. ಕೊನೆಗಳಿಗೆಯಲ್ಲಿ ಕಾಂಗ್ರೆಸ್ ಪಾಳಯದಲ್ಲಿ ಕೊಂಚ ಹುರುಪು ಬಂದಿದ್ದೇ ಆದಲ್ಲಿ ಹಳ್ಳಿಹಕ್ಕಿ ದಿಲ್ಲಿಗೆ ಹಾರಲು ತಯ್ಯಾರ್.

ಬಿಜೆಪಿಯಲ್ಲಿ ಎಲ್ಲವೂ ಸರಿಯಿಲ್ಲ

ಹಿಂದಿನ ಸಂಸದ ಶ್ರೀಕಂಠದತ್ತ ಒಡೆಯರ್ ಜನರೇ ಹೋಗಲೀ ಮಾಧ್ಯಮದವರ ಕಣ್ಣಿಗೂ ಬೀಳದೇ ಕುಳಿತಿರುತ್ತಿದ್ದುದರ ಪರಿಣಾಮವಾಗಿ, ಆ ಅಸಮಾಧಾನದಿಂದಲೇ ಬಜೆಪಿಯ ವಿಜಯಶಂಕರ್ ಗೆದ್ದು ಬಂದಿದ್ದರು. ಆತನೇನೋ ಸಭ್ಯಸ್ಥನಾಗಿದ್ದು ಒಂದು ಹಂತಕ್ಕೆ ಸಮರ್ಪಕವಾಗಿಯೇ ಕೆಲಸ ಮಾಡುತ್ತಿದ್ದ. ಕ್ಷೇತ್ರದ ಹಲವು ಅಭಿವೃದ್ಧಿ ಕೆಲಸಗಳಿಗೂ ಶ್ರಮಿಸಿದ್ದ. ಆದರೆ ಯಡ್ಡಿ ಸರ್ಕಾರ ಆರಂಭವಾದೊಡನೆ ಶುರುವಾಯ್ತು ನೋಡಿ ಶೋಭಾ ಕರಂದ್ಲಾಜೆಯ ದರ್ಬಾರು. ಆಕೆ ಜಿಲ್ಲೆಯ ಉಸ್ತುವಾರಿ ವಹಿಸಿಕೊಂಡಿದ್ದೇ, ಸಿದ್ದರಾಜುನನ್ನು ಎಂಎಲ್‌ಸಿ ಮಾಡಿಕೊಂಡು ಇನ್ನಿಲ್ಲದ ಆಟವಾಡತೊಡಗಿದಳು. ವಿಜಯಶಂಕರನ್ನೊಳಗೊಂಡಂತೆ, ರಾಮದಾಸ್, ಶಂಕರಲಿಂಗೇಗೌಡ ಯಾರನ್ನು ಕ್ಯಾರೇ ಎನ್ನಲಿಲ್ಲ, ಎಲ್ಲರನ್ನೂ ಕಡೆಗಣಿಸಿ ತಾನೇ ವಿಜೃಂಭಿಸಲಾರಂಭಿಸಿದ ಪರಿಣಾಮವಾಗಿ ಇಂದು ವಿಜಯಶಂಕರ್ ಮಂಕಾಗಿದ್ದಾರೆ. ಪಕ್ಷದಲ್ಲಿ ಸೂಕ್ತ ಮನ್ನಣೆ ಸಿಗದ ಕಾರಣಕ್ಕಾಗಿ ರಾಮದಾಸ್, ಜಿ.ಟಿ. ದೇವೇಗೌಡ ತಟಸ್ಥವಾಗುಳಿದಿದ್ದಾರೆ. ಶಂಕರಲಿಂಗೇಗೌಡ ಕೂಡಾ ಒಲ್ಲದ ಮನಸ್ಸಿನಿಂದಲೇ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡಿದ್ದಾರೆ. ಸದ್ಯ ಮೈಸೂರಿನಲ್ಲಿ ಬಜೆಪಿಯು ಕೋಟಿಕೋಟಿ ದುಡ್ಡು ಹಂಚುವ ಮೂಲಕ ಸದ್ದು ಮಾಡುತ್ತಿರುವುದನ್ನು ಬಿಟ್ಟರೆ ಯಾವ ಜನಬೆಂಬಲವೂ ಬಜೆಪಿಗಿಲ್ಲ.



ವಿಜಯಾಶಂಕರ್



ಜೀವಿಜಯಾ

ಹಾಗೆ ನೋಡಿದರೆ ಮೈಸೂರು ಕ್ಷೇತ್ರದಲ್ಲಿ ಅಹಿಂದ ವರ್ಗಗಳದ್ದೇ ಪ್ರಾಬಲ್ಯ. ಇಲ್ಲಿ ಒಕ್ಕಲಿಗ, ಲಿಂಗಾಯತ, ಮುಸ್ಲಿಂ, ಕುರುಬ ಮತಗಳು ಸಮಬಲದಲ್ಲಿವೆ. ದಲಿತರ ಮತಗಳು ಎಲ್ಲಕ್ಕಿಂತ ಹೆಚ್ಚಿವೆ. ಕಡಿಮೆ ಸಂಖ್ಯೆಯಲ್ಲಿರುವ ಬ್ರಾಹ್ಮಣ, ಲಿಂಗಾಯತರು ಕಮಲವನ್ನೇ ಮುಡಿಯುತ್ತಾರಾದರೂ, ಅಧಿಕಸಂಖ್ಯೆಯ ಹಿಂದುಳಿದ, ದಲಿತರಲ್ಲಿ ಹೆಚ್ಚುಮಂದಿ 'ಕೈ' ಹಿಡಿಯುವ ನಿಟ್ಟನಲ್ಲಿದ್ದಾರೆ. ಅದು ಸಿದ್ದರಾಮಯ್ಯ ಎಫೆಕ್ಟ್!


ಆದರೂ ಈಗ ಕಾಂಗ್ರೆಸ್ ಪಾಳಯದಲ್ಲಿ ಸಮಸ್ಯೆಯಾಗಿರುವುದು ಕಾಂಚಾಣದ್ದೇ. ಅತ್ತ ಬಜೆಪಿ ವಾರ್ಡಿಗೊಂದು ಲಕ್ಷ, ಗ್ರಾಮ ಪಂಚಾಯತಿಗೊಂದು ಲಕ್ಷದಂತೆ ದುಡ್ಡು ಚೆಲ್ಲುತ್ತಿರುವಾಗ ಕಾಂಗ್ರೆಸ್‌ನೊಳಗೆ ಆ ಪರಿಯ ದುಡ್ಡು ಹರಿಯದಿರುವುದರಿಂದ ಕಾರ್ಯಕರ್ತರು ಅಷ್ಟು ಉತ್ಸಾಹ ತೋರುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ತನ್ನ ಜಾತಿಯಾಚೆಗೂ ಎಲ್ಲಾ ಜನವರ್ಗಗಳನ್ನೂ ಸಮಚಿತ್ತದಿಂದಲೇ ಕಾಣುವ ಹಳ್ಳಿಹಕ್ಕಿಯ ವ್ಯಕ್ತಿತ್ವ ಹಾಗೂ ಅವರು ಸಚಿವರಾಗಿದ್ದಾಗ ನೆರವೇರಿಸಿದ ಕೆಲಸ ಕಾರ್ಯಗಳೇ ಅವರ ನೆರವಿಗೆ ಬರಬೇಕಷ್ಟೇ.

ಜೆಡಿಎಸ್ ಜೀವಿಜಯ ಕಷ್ಟಕಷ್ಟ

ಕೇವಲ ಜಾತಿ ಲೆಕ್ಕಾಚಾರದಿಂದ ಹೊರ ಕ್ಷೇತ್ರದ ಜೀವಿಜಯನಿಗೆ ಟಿಕೆಟ್ ನೀಡಿರುವ ದೇವೇಗೌಡರ ಆಟ ಮೈಸೂರು ಕ್ಷೇತ್ರದಲ್ಲಿ ನಡೆಯುವುದು ಸಾಧ್ಯವಿಲ್ಲ, ವಾಸ್ತವದಲ್ಲಿ ಈ ಆಸಾಮಿ ಯಾರೆಂಬುದೇ ಸಾಮಾನ್ಯ ಜನರಿಗೆ ಗೊತ್ತಿಲ್ಲದಿರುವಾಗ ಓಟು ಹೇಗೆ ಹಾಕಬೇಕು. ಮೊದಲಿಂದಲೂ ಎಲ್ಲೂ ನೆಲೆನಿಲ್ಲದೆ ಅಲ್ಲಿಂದ ಇಲ್ಲಿಗೆ ಹಾರುತ್ತಲೇ ಬಂದ ಜೀವಿಜಯ 2004 ರಲ್ಲಿ ಕಾಂಗ್ರೆಸ್‌ನಲ್ಲೇ ಇದ್ದವರು. 2008 ರಲ್ಲಿ ಕಾಂಗ್ರೆಸ್ ತೊರೆದು ಜೆಡಿಎಸ್ ಸೇರಿ ಕೊಡಗಿನಲ್ಲಿ ನೆಲೆಕಂಡುಕೊಂಡವರು. ಆದರೆ ಕೊಡಗಿನಲ್ಲಾದಂತೆ ಮೈಸೂರಿನಲ್ಲಿ ಒಕ್ಕಲಿಗರೆಲ್ಲಾ ಜೀವಿಜಯನ ಹಿಂದೆ ಹೋಗಿಬಿಡುತ್ತಾರೆ ಎಂಬಂತೆಯೂ ಇಲ್ಲ. ಯಾಕೆಂದರೆ ಸಿದ್ದರಾಮಯ್ಯ ಮತ್ತು ಎಚ್. ವಿಶ್ವನಾಥ್ ಎಂದೂ ಒಕ್ಕಲಿಗರನ್ನು ದೂರ ಮಾಡಿಕೊಂಡವರೇ ಅಲ್ಲ. ಹಾಗಾಗಿ ಜೀವಿಜಯ ಫಲಿತಾಂಶ ಬಂದಮೇಲೂ ಜನರಿಗೆ 'ಅಪರಿಚಿತ ಆಗಂತುಕ'ನಾಗಿಯೇ ಉಳಿದುಬಿಡುತ್ತಾನಾ, ಅಂತ.


ಮಣಿವಣ್ಣನ್ ಬೂಟಾಟಿಕೆ

ರಸ್ತೆಯಲ್ಲಿ ಹೋಗುವ ಬೈಕು, ಕಾರು, ಬಸ್ಸು ಕೊನೆಗೆ ರೈಲುಬೋಗಿಗಳನ್ನೂ ಬಿಡದೆ 'ತಪಾಸಣೆ' ನಡೆಸಿ ಭಯಾನಕ ದಕ್ಷತೆ ಮೆರೆಯುತ್ತಿರುವ ಮಣಿವಣ್ಣನ್ ಮಾಡುತ್ತಿರುವುದು ಬೆಕ್ಕು ಕಣ್ಣುಮುಚ್ಚಿ ಹಾಲು ಕುಡಿಯುತ್ತಿರುವಂತಿದೆ. ಯಾಕೆಂದರೆ ಮಣಿವಣ್ಣನ್ ಜಾರಿ ಮಾಡುತ್ತಿರುವ ಚುನಾವಣಾ ನೀತಿಸಂಹಿತೆಗೆ ಪರಮಭ್ರಷ್ಟ ಬಜೆಪಿ ಒಳಪಡುತ್ತಲೇ ಇಲ್ಲ. ಹಾಡುಹಗಲೇ ಲಕ್ಷಲಕ್ಷ ಹಣ, ಹೆಂಡ ಎಲ್ಲವನ್ನೂ ದಿಲ್‌ದಾರಾಗಿ ಬಜೆಪಿ ಮಂದಿ ಹಂಚತೊಡಗಿದ್ದರೂ ಸಹ ಈ ಚುನಾವಣಾಧಿಕಾರಿ ಕಂಡರೂ ಕಾಣದಿರುವ ನಾಟಕವಾಡುತ್ತಿದ್ದಾನೆ. ಮಣಿವಣ್ಣನ್ ಕೆಳಗಿನ ಚುನಾವಣಾಧಿಕಾರಿಗಳಾಗಿ ಯಾರು ಯಾರು ನೇಮಕಗೊಂಡಿದ್ದಾರೆ ಗೊತ್ತೆ? ನಂ. 1 ರಾಮು ಈತ ಬಜೆಪಿ ಎಂಎಲ್‌ಸಿ ಸಿದ್ದರಾಜುವಿನ ದೋಸ್ತು. ನಂ. 2 ನಾಗರಾಜು ಈತ ಸಿ.ಎಂ. ಯಡ್ಡಿಯ ಸಂಬಂಧಿ. ನಂ. 3 ರಂಗನಾಥ್ ಇವನು ಸಚಿವೆ ಶೋಭಾ ಕರಂದ್ಲಾಜೆಯ ಪರ್ಸನಲ್ ಅಸಿಸ್ಟೆಂಟ್. ಈಗ ಹೇಳಿ ಮೈಸೂರಿನಲ್ಲಿ ಅದ್ಯಾವ ಪಾಟ ಫ್ರೀ ಅಂಡ್ ಫೇರ್ ಎಲೆಕ್ಷನ್ ನಡೆಯಲು ಸಾಧ್ಯ? ■



ಮಣಿವಣ್ಣನ್

ಉತ್ತರ ಕನ್ನಡ: ಅಮಲೇರಿದ ಅನಂತ ಬಿರುಗಾಳಿ ಮಾರ್ಗರೆಟ್


ಅನಂತಕುಮಾರ್ ಹೆಗಡೆ



ಮಾರ್ಗರೆಟ್ ಆಳ್ವಾ

ಉತ್ತರ ಕನ್ನಡ ಲೋಕಸಭಾ ಕ್ಷೇತ್ರದಲ್ಲಿ ಸದ್ಯದ ಪರಿಸ್ಥಿತಿ ಹೇಗಿದೆಯೆಂದರೆ ಕಾಂಗ್ರೆಸ್ ಅಭ್ಯರ್ಥಿ ಮಾರ್ಗರೆಟ್ ಆಳ್ವ ಈಗಾಗಲೇ ಸಂಸತ್ ಭವನದ ಬಾಗಿಲು ತಟ್ಟುತ್ತಿದ್ದಾರೆ. ಆದರೆ ಹಾಲಿ ಸಂಸದ ಬಜೆಪಿಯ ಅಭ್ಯರ್ಥಿ ಅನಂತಕುಮಾರ್ ಹೆಗಡೆ ತನ್ನ ಮನೆಯಲ್ಲೇ ಕುಕ್ಕರು ಬಡಿಯಲು ಸಿದ್ಧರಾಗುತ್ತಿದ್ದಾರೆ. ಇದಕ್ಕೆ ಕಾರಣಗಳಿವೆ.

ಒಂದೆಡೆ ಚಡ್ಡಿ ಹೆಗಡೆಯ ಭ್ರಷ್ಟತೆ, ವಿಕೃತ ಬುದ್ಧಿ ಮತ್ತು ಕೋಮು ದ್ವೇಷವನ್ನು ಕಂಡು ಜನ ರೋಸಿಹೋಗಿದ್ದಾರೆ. ಇನ್ನೊಂದೆಡೆ ಹಿಂದೊಮ್ಮೆ ಈ ಕ್ಷೇತ್ರದಿಂದಲೇ ಆಯ್ಕೆಯಾಗಿದ್ದ ಆಳ್ವ ಮಾಡಿದ್ದ ಜನಪರ ಕೆಲಸಗಳು, ನಂತರವೂ ಉಳಿಸಿಕೊಂಡ ಕಾಳಜಿಗಳು ಜನರ ನೆನಪಿನಲ್ಲಿ ಉಳಿದಿದೆ. ಈಗ ಸ್ವಯಂಕೃತಾಪರಾಧದಿಂದ ಹೆಗಡೆ ಸೋಲಿನ ಅಂಚಿನಲ್ಲಿ ನಿಂತಿದ್ದರೆ ಆಳ್ವ ಹಿಂದೆ ಮಾಡಿದ್ದ ಕೆಲಸಗಳೇ ಈಗ ಅವರಿಗೆ ಶ್ರೀರಕ್ಷೆಯಾಗಿವೆ.

ಕಳೆದ ಚುನಾವಣೆಯಲ್ಲಿ ಹಿಂದುಳಿದವರ ಓಟಿನಿಂದಲೇ ಗೆದ್ದಿದ್ದರೂ ಅವರಿಗಾಗಿ ಕಿಲುಬು ಕಾಸಿನಷ್ಟೂ ಕೆಲಸ ಮಾಡಲಿಲ್ಲ ಈ ಹೆಗಡೆ ಎಂಬ 'ಮಾಣಿ'. ದಿವಂಗತ ಚಿತ್ತರಂಜನ್‌ರ ಹತ್ಯೆಯ ಅನುಕಂಪದ ಅಲೆಯನ್ನೇ ಬಂಡವಾಳ ಮಾಡಿಕೊಂಡು ಸಂಸದನಾದ ಅನಂತಕುಮಾರ್ ಹೆಗಡೆ ಪರಮಪುಂಡನಾದ, ಅಪ್ಪಟ ಸ್ವಾರ್ಥಿಯಾದ, ವಿಕೃತ ಕಮ್ಯೂನಲ್ ಆದ. ತನ್ನನ್ನು ಬೆಂಬಲಿಸಿದವರನ್ನೇ ದೂರ ಮಾಡಿ ತನ್ನ ಆಸ್ತಿ ಅಂತಸ್ತು ಹೆಚ್ಚಿಸಿಕೊಳ್ಳುವುದರಲ್ಲೇ ಕಾಲಕಳೆದ. ಇನ್ನು ಎಂ.ಪಿ. ಫಂಡನ್ನು ತನಗೆ ಬೇಕಾದವರಿಗೆ ಮಾತ್ರ ಹೇಗೆಂದರೆ ಹಾಗೆ ಹಂಚಿದ. ಸಿರ್ಸಿಯ ಮತ್ತಿಘಟ್ಟದಲ್ಲಿ ಭಾರೀ ಬಂಗಲೆ, ತೋಟಮಾಡಿಕೊಂಡ ಹೆಗಡೆ ಗಣಿ ಅದಿರು ಮಾಫಿಯಾವನ್ನು ಬೆಳೆಸಿದ.

ಇಡೀ ಉತ್ತರ ಕನ್ನಡ ಜಿಲ್ಲೆ ಇಂದು ಹತ್ತು ಹಲವು ಸಮಸ್ಯೆಗಳ ಗೂಡಾಗಿದೆ. ಹಳ್ಳಿ ಪ್ರದೇಶಗಳಿಗೆ ಸರಿಯಾದ ರಸ್ತೆಗಳಿಲ್ಲ, ಶರಾವತಿ, ಕೈಗಾ, ಕಾಳಿ ವಿದ್ಯುತ್ ಯೋಜನೆಗಳಿದ್ದಾಗ್ಯೂ ಅದೆಷ್ಟೋ ಜನರು ಕತ್ತಲೆಯಲ್ಲೇ ದಿನದೂಡುತ್ತಿದ್ದಾರೆ. ಕಬ್ಬಿಣದ ಅದಿರಿನ ಗಣಿಗಾರಿಕೆ, ಸಾಗಾಟದ ಹಾವಳಿಯಿಂದಾಗಿ ಜಿಲ್ಲೆಯಲ್ಲಿ ಹಲವಾರು ಬಗೆಯ ಸಂಕಷ್ಟಗಳನ್ನು ಜನ ಎದುರಿಸುತ್ತಿದ್ದಾರೆ. ಇಲ್ಲಿನ ಹಾಲಕ್ಕಿ ಒಕ್ಕಲಿಗರು, ಸಿದ್ದಿ ಕುಣುಬಿ, ಗೌಳಿಗರು ಮುಂತಾದ ಗಿರಿಜನರ ಬದುಕು ಅಧೋಗತಿಯಲ್ಲಿದೆ. ಹಲವು ಯೋಜನೆಗಳ ನಿರಾಶ್ರಿತರಿಗೆ ಪರಿಹಾರ ಸಿಕ್ಕಿಲ್ಲ.


ಆರ್.ವಿ. ದೇಶಪಾಂಡೆ

ಈ ಎಲ್ಲಾ ಸಮಸ್ಯೆಗಳಿಗೆ ಒಬ್ಬ ಲೋಕಸಭಾ ಸದಸ್ಯನಾಗಿ ಏನು ಮಾಡಬಹುದಿತ್ತೋ ಅದರಲ್ಲಿ ತೃಣಮಾತ್ರವೂ ಮಾಡದ ಹೆಗಡೆ ಸಂಸತ್ತಿನಲ್ಲಿ ಐದು ವರ್ಷ ಕಳೆದರೂ ಒಮ್ಮೆಯೂ ತನ್ನ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಬಾಯನ್ನೇ ಬಿಡಲಿಲ್ಲ. ಒಂದೇ ಒಂದು ಪ್ರಶ್ನೆಯನ್ನೂ ಕೇಳಲಿಲ್ಲ. ಸಂಸತ್ತಿನಲ್ಲಿ ಅಷ್ಟು ಸೈಲೆಂಟಾಗಿದ್ದ ಹೆಗಡೆ ಈಗ ಮಾತ್ರ ಬಾಯಿ ತೆರೆದು ಚುನಾವಣಾ ಪ್ರಚಾರದ ಸಮಯದಲ್ಲಿ ಇತ್ತೀಚೆಗೆ "ನನಗೆ ಹಿಂದೂಗಳ ಮತಗಳೇ ಸಾಕು" ಎಂದು ಘೋಷಿಸಿ ಎಲ್ಲರಿಂದ ಚೀ, ಥೂ ಎಂದು ಉಗಿಸಿಕೊಂಡಿದ್ದಾನೆ.

ಬಿರುಗಾಳಿ ಆಳ್ವ

ತನ್ನ ಸಾಮರ್ಥ್ಯವನ್ನೆಲ್ಲಾ ಉಪಯೋಗಿಸಿ ಕಾಂಗ್ರೆಸ್ ಹೈಕಮಾಂಡಿನ ಮೇಲೆ ಪ್ರಭಾವ ಬೀರಿ ಟಿಕೆಟ್ ಗಿಟ್ಟಿಸಿಕೊಂಡ ಆಳ್ವ ಇವತ್ತು ಕ್ಷೇತ್ರದಾದ್ಯಂತ ಬಿರುಗಾಳಿಯಂತೆ ಓಡಾಡುತ್ತಿದ್ದಾರೆ. ಇದು ಅವರ ವಿರೋಧಿಗಳನ್ನು ದಂಗುಬಡಿಸಿದ್ದರೆ, ಎಮ್ಮೆ ಚರ್ಮದ ಕಾಂಗ್ರೆಸಿಗರೂ ಮೈ ಕೊಡವಿ ಏಳುವಂತೆ ಮಾಡಿದೆ.

ಅಧಿಕಾರದಲ್ಲಿದ್ದಾಗ ಹೆಗಡೆ ತರಹ ಜನ ವಿರೋಧಿ ಕೆಲಸಗಳಿಗೆಂದೂ ಮಾರ್ಗರೆಟ್ ಆಳ್ವ ಇಳಿದವರಲ್ಲ, ಕೇಂದ್ರದಲ್ಲಿ ಎನ್‌ಡಿಎ ಸರ್ಕಾರವೇ ಅಧಿಕಾರದಲ್ಲಿದ್ದಾಗ್ಯೂ ಆಳ್ವ ಅವರು ಸ್ವಂತ ಪ್ರಯತ್ನದಿಂದ ಜಿಲ್ಲೆಗೆ 10,500 ಕೋಟಿ ರೂ.ಗಳ ಅನುದಾನ ತಂದು ಹತ್ತು ಹಲವು ಅಭಿವೃದ್ಧಿ ಕಾರ್ಯಗಳನ್ನು ನೆರವೇರಿಸಿದ್ದನ್ನು ಮತದಾರರು ಮರೆತಿಲ್ಲ, ಉತ್ತರ ಕನ್ನಡವನ್ನೇ ನುಂಗಿ ನೀರು ಕುಡಿಯಲು ಬಂದ ತದಡಿ ಉಷ್ಣ ಸ್ಥಾವರ ಯೋಜನೆಯು ಅಲ್ಲಿಂದ ಕಾಲು ಕೀಳುವಂತಾಗಿದ್ದರಲ್ಲಿ ಇವರ ಭಗೀರಥ ಪ್ರಯತ್ನವೂ ಇದೆ.


ಉತ್ತಮ ಮಹಿಳಾ ನಾಯಕಿಯಾಗಿ ರಾಷ್ಟ್ರ, ಅಂತರರಾಷ್ಟ್ರ ಮಟ್ಟದಲ್ಲೂ ಹೆಸರು ಮಾಡಿದ್ದಾರೆ ಆಳ್ವ. ಜಿಲ್ಲೆಯ ಗಿರಿಜನ ಬುಡಕಟ್ಟು ಜನಾಂಗವಾದ ಸಿದ್ದಿ ಸಮುದಾಯಕ್ಕೆ ಪರಿಶಿಷ್ಟ ಪಂಗಡದ ಸ್ಥಾನಮಾನವನ್ನು ಕೊಡಿಸಿದ್ದೂ ಆಳ್ವ ಅವರೇ. ಅವರು ಇಲ್ಲಿಯತನಕ ಮಾಡಿರುವ ಇಂತಹ ಹಲವಾರು ಲೋಕಕಲ್ಯಾಣ ಕೆಲಸಗಳೇ ಇಂದು ಅವರ ಗೆಲುವಿಗೆ ನೆರವಾಗಲಿವೆ.


ಇನ್ನು ಬಜೆಪಿ ಅಭ್ಯರ್ಥಿ ಹೆಗಡೆಗೆ ಈ ಬಾರಿ ಒದೆ ಕೊಡಲು ಬಜೆಪಿಯಲ್ಲೇ ಬಹಳ ಮಂದಿ ತಯಾರಾಗಿದ್ದಾರೆ. ಸಾಧಾರಣ ಗ್ರಾಮ ಪಂಚಾಯತಿ ಸದಸ್ಯನಾಗಲೂ ಅರ್ಹತೆಯಿಲ್ಲದ ಕ್ರಿಮಿನಲ್ ಬುದ್ಧಿಯ ಹೆಗಡೆ ವಿರುದ್ಧ ಆತನಿಂದ ವಂಚನೆಗೆ, ದೌರ್ಜನ್ಯಕ್ಕೆ ಗುರಿಯಾಗಿರುವ ಬಜೆಪಿಯವರೇ ತಿರುಗಿಬಿದ್ದಿದ್ದಾರೆ. ಇದು ಆಳ್ವ ಅವರಿಗೆ ಪ್ಲಸ್ ಪಾಯಿಂಟ್ ಆಗಲಿದೆ.

ಕ್ಷೇತ್ರ ಮರುವಿಂಗಡನೆಯ ನಂತರ ಉತ್ತರ ಕನ್ನಡ ಹೊಸ ಕ್ಷೇತ್ರವಾಗಿ ಹೊಮ್ಮಿದೆ. ಇಲ್ಲಿನ ಎಂಟು ವಿಧಾನ ಸಭಾ ಕ್ಷೇತ್ರಗಳಲ್ಲಿ ಕಳೆದ ವಿಧಾನ ಸಭಾ ಚುನಾವಣೆಯಲ್ಲಿ ನಾಲ್ಕು ಬಜೆಪಿ ಪಾಲಾಗಿದ್ದರೆ, ಎರಡರಲ್ಲಿ ಜೆಡಿಎಸ್ ಗೆದ್ದು ಒಂದರಲ್ಲಿ ಮಾತ್ರ ಕಾಂಗ್ರೆಸ್ ಗೆದ್ದಿತ್ತು. ಆದರೆ ಈ ಸಲ ಪರಿಸ್ಥಿತಿ ಬದಲಾಗಿದ್ದು ಕ್ಷೇತ್ರದಾದ್ಯಂತ ಆಳ್ವ ಪರ ಹವಾ ಬೀಸುತ್ತಿದೆ.

ಈ ಸಲ ಇಲ್ಲಿನ ಕಾಂಗ್ರೆಸ್ ಸೀಟು ಆಕಾಂಕ್ಷಿಯಾಗಿದ್ದವರು ರಾಜ್ಯ ಕಾಂಗ್ರೆಸ್‌ನ ಅಧ್ಯಕ್ಷ ಆರ್.ವಿ.ದೇಶಪಾಂಡೆಯ ಪುತ್ರ ಪ್ರಶಾಂತ್

ನಾಗಮಾರಪಳ್ಳಿಗೆ ಟಾಂಗು ಕೊಡಲಿರುವ ಧರ್ಮಸಿಂಗ್!





ಪರಿಶಿಷ್ಟ ಜಾತಿಗೆ ಮೀಸಲು ಕ್ಷೇತ್ರವಾಗಿದ್ದ ಬೀದರ ಲೋಕಸಭಾ ಕ್ಷೇತ್ರವು ಪುನರ್ ವಿಂಗಡಣೆಯ ನಂತರ ಸಾಮಾನ್ಯ ಕ್ಷೇತ್ರವಾಗಿದೆ. ಈ ಹಿಂದೆ ದಿ. ರಾಮಚಂದ್ರವೀರಪ್ಪನವರ ವೈಯಕ್ತಿಕ ವರ್ಚಸ್ಸು ಹಾಗೂ ಆತನ ಸಂಭಾವಿತನಕ್ಕೆ ಮನಸೋತು ಜನತೆ ಅನಿವಾರ್ಯವಾಗಿ ಈತನನ್ನೆ ಆಯ್ಕೆ ಮಾಡುತ್ತ ಬಂದಿದ್ದರು. ಬಜೆಪಿ ಪಕ್ಷದ ವರ್ಚಸ್ಸು ಇಲ್ಲಿ ಯಾವುದೇ ಎಫೆಕ್ಟ್ ಉಂಟುಮಾಡುತ್ತಿರಲಿಲ್ಲ.

ಅಂದಂತೆ ಬೀದರ ಜಿಲ್ಲೆಯಲ್ಲಿ ಕಮಲ ಅರಳುವ ಯಾವ ಲಕ್ಷಣಗಳೂ ಇರಲಿಲ್ಲ, ಆದರೆ ಭೀಮಣ್ಣ ಖಂಡ್ರೆ, ಬಸವರಾಜ ಪಾಟೀಲ ಹುಮ್ನಾಬಾದ್ ಹಾಗೂ ಗುರುಪಾದಪ್ಪ ನಾಗಮಾರಪಳ್ಳಿಯವರ ಪಕ್ಷಾಂತರದಿಂದಾಗಿ ಬಜೆಪಿಗೆ ಲಿಂಗಾಯತರ ನಡುವೆ ಸ್ವಲ್ಪ ನೆಲೆ ಸಿಕ್ಕಿದೆ. ಆದರೆ ಈ ನಾಯಕರುಗಳ ನಡವಳಿಕೆಗಳು ಜನತೆಗೆ ಹೇಸಿಗೆ ತರಿಸಿವೆ. ಭಾಲ್ಕಿ ಹಿರೇಮಠದ ಪೂಜ್ಯ ಚೆನ್ನಬಸವ ಪಟ್ಟದ್ದೇವರು ಸಂಸ್ಥಾಪಿಸಿದ ಶಾಲಾ, ಕಾಲೇಜುಗಳನ್ನು ಖಂಡ್ರೆ ಹೈಜಾಕ್ ಮಾಡಿದ್ದರೆ, ಬೀದರ ಜಿಲ್ಲೆಯ ನಾರಂಜಾ ಸಕ್ಕರೆ ಕಾರ್ಖಾನೆ ಹಾಗೂ ಡಿ.ಸಿ.ಸಿ. ಬ್ಯಾಂಕನ್ನು ಸಂಪೂರ್ಣ ಮುಳುಗಿಸಿರುವ ನಾಗಮಾರಪಳ್ಳಿಯ ಫ್ಯೂಡಲ್ ಗುಣಗಳನ್ನು ಜನ ಮರೆತಿಲ್ಲ.

ಯಾವಾಗ ಕೆಲ ಖದೀಮ ನಾಯಕರು ಬಜೆಪಿಯ ಕಡೆ ತಿರುಗತೊಡಗಿದರೋ ಆಗ ಗುರುಪಾದಪ್ಪ ನಾಗಮಾರಪಳ್ಳಿ ಎಂಬ ಆಧುನಿಕ ದರೋಡೆಕೋರ ತಾನು ಡಿ.ಸಿ.ಸಿ.ಬ್ಯಾಂಕ್ ಹಾಗೂ ನಾರಂಜಾ ಕಾರ್ಖಾನೆಗಳಲ್ಲಿ ಮಾಡಿದ ಹಾದರವನ್ನು ಮುಚ್ಚಿಕೊಳ್ಳಲಿಕ್ಕೆ ಬಜೆಪಿಗೆ ಜಂಪ್ ಮಾಡಿದ ಕತೆ ಎಲ್ಲರಿಗೂ ಗೊತ್ತಿರುವಂಥದ್ದೆ. ಈತ ತನ್ನ ಸುಪರ್ದಿಯಲ್ಲಿರುವ ಸಂಸ್ಥೆಗಳ ಹಾದರವನ್ನು ಮುಚ್ಚಿಕೊಳ್ಳಲು ಇಂಥ ಅವಕಾಶವಾದಿ ರಾಜಕಾರಣವನ್ನು ಅನುಸರಿಸುತ್ತಾ ಬಂದಿರುವುದೂ ಇಲ್ಲಿಯ ಜನರಿಗೆ ಚೆನ್ನಾಗಿ ಗೊತ್ತಿದೆ.

ಈಗ ಬೀದರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿಯಾಗಿರುವ ಮಾಜಿ ಮುಖ್ಯಮಂತ್ರಿ ಧರ್ಮಸಿಂಗ್ ಅವರ ಈಗ ಮಾಜಿ ಕಾಂಗ್ರೆಸ್ಸಿಗ ಮತ್ತು ಹಾಲಿ ಬಜೆಪಿಯ ಅಭ್ಯರ್ಥಿಯಾಗಿರುವ ಗುರುಪಾದಪ್ಪ ನಾಗಮಾರಪಳ್ಳಿಯನ್ನು ಅಟಕಾಯಿಸಿಕೊಳ್ಳಲಿದ್ದಾರೆ.

ತಾನೊಂದು ಬಗೆದರೆ ದೈವವೊಂದು ಬಗೆಯಿತು ಎಂಬಂತೆ ನಾಗಮಾರಪಳ್ಳಿಯ ನಸೀಬು ಅಷ್ಟು ಚೆನ್ನಾಗಿಲ್ಲವೆಂಬುದು ದಿನಗಳೆದಂತೆಲ್ಲ ಮನದಟ್ಟಾಗುತ್ತಿದೆ. ಮೇಲ್ನೋಟಕ್ಕೆ ಧರ್ಮಸಿಂಗ್ ಬೀದರ ಸಂಸದೀಯ ಕ್ಷೇತ್ರಕ್ಕೆ ಹೊರಗಿನವರಂತೆ ಕಾಣುತ್ತಾರಾದರೂ ಅವರ ಬೆಂಬಲದ ಬೇರುಗಳು ಬೀದರ ಜಿಲ್ಲೆಯಾದ್ಯಂತ ವಿಸ್ತರಿಸಿಕೊಂಡಿವೆ. ಧರ್ಮಸಿಂಗ್‌ರ ಸರಳ-ಸಜ್ಜನಿಕೆಯ ನಡವಳಿಕೆಗಳು ಅವರಿಗೆ ಬೀದರ ಜಿಲ್ಲೆಯಾದ್ಯಂತ ಸರಿಯಾದ ನೆಟ್‌ವರ್ಕ್ ಉಂಟುಮಾಡಿವೆ. ಇದೆಲ್ಲಕ್ಕಿಂತ ಹೆಚ್ಚಾಗಿ ಗುರುಪಾದಪ್ಪನ ವಿರೋಧಿಗಳೂ ಇಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಬೆಳೆದಿದ್ದಾರೆ.

ಭಾಲ್ಕಿಯ ಪ್ರಕಾಶ ಖಂಡ್ರೆ ಬಜೆಪಿಯವನೇ ಆಗಿದ್ದರೂ ಧರ್ಮಸಿಂಗ್‌ರೊಂದಿಗೆ ಆತ ಹೊಂದಿರುವ ಗಳಸ್ಯ-ಕಂಠಸ್ಯ ಸಂಬಂಧ ಸಹಜವಾಗಿ ಧರ್ಮಸಿಂಗ್‌ಗೆ ವರದಾನವಾಗಲಿದೆ. ಬಸವಕಲ್ಯಾಣದ ಬಸವರಾಜ ಪಾಟೀಲ ಎಲ್ಲರಿಗೂ ಗೊತ್ತಿರುವಂತೆ ಗುರುಪಾದಪ್ಪನ ಆಜನ್ಮ ವೈರಿ. ಆಳಂದ ಮತಕ್ಷೇತ್ರವಂತೂ ಜೆಡಿಎಸ್ ತೆಕ್ಕೆಯಲ್ಲಿದೆ. ಅಲ್ಲಿ ಶಾಸಕರಾಗಿ ಆಯ್ಕೆಯಾಗಿರುವ ಸುಭಾಷ ಗುತ್ತೇದಾರ ತಮ್ಮ ಪಕ್ಷದ ಅಭ್ಯರ್ಥಿ ಸುಭಾಷ ನೇಳಗಿ ಪರವಾಗಿ ಪ್ರಚಾರ ಮಾಡಲಿದ್ದಾರೆ. ಅದಕ್ಕೂ ಮುಖ್ಯವಾಗಿ ಇಲ್ಲಿ ಹೆಚ್ಚಿನ ಸಂಖ್ಯೆಯ ಮತದಾರರು ಮುಸ್ಲಿಂ ಸಮುದಾಯದವರಾದ್ದರಿಂದ ಸುಭಾಷ ಗುತ್ತೇದಾರ ಕಮಲವನ್ನು ಅಪ್ಪಿಕೊಂಡು ತನ್ನ ಚರಿಷ್ಮಾ ಹಾಳು ಮಾಡಿಕೊಳ್ಳುವಷ್ಟು ದಡ್ಡರಲ್ಲ.

ಔರಾದ ಕ್ಷೇತ್ರದಲ್ಲಿ ಬಜೆಪಿಯ ಪ್ರಭು ಚೌಹಾನ್ ಮತ್ತು ಚಿಂಚೋಳಿ ಮತಕ್ಷೇತ್ರದಲ್ಲಿ ಬಜೆಪಿಯ ಸುನೀಲ ವಲ್ಯಾಪುರೆ ಶಾಸಕರಾಗಿದ್ದರೂ ನಾಗಮಾರಪಳ್ಳಿಯ ಬಾನಗಡಿಗಳ ಗಬ್ಬು ವಾಸನೆ ಎಂಟು ವಿಧಾನಸಭಾಕ್ಷೇತ್ರಗಳ ತುಂಬೆಲ್ಲ ವ್ಯಾಪಿಸಿರುವುದರಿಂದ ಅವರಿಬ್ಬರೂ ನಾಗಮಾರಪಳ್ಳಿಯ ಪರ ಅಷ್ಟು ಪ್ರಭಾವ ಬೀರಲಾರರು. ಇನ್ನು ವೈಜನಾಥಪಾಟೀಲ ಕೂಡ ಜನರಿಗೆ ದ್ರೋಹ ಬಗೆದು ಬಿಜೆಪಿಯ ತಕ್ಕೆಗೆ ಹಾರಿರುವುದೂ ಸ್ಥಳೀಯರಲ್ಲಿ ಹೇಸಿಗೆ ಹುಟ್ಟಿಸಿದೆಯಷ್ಟೇ.

ಗುರುಪಾದಪ್ಪನ ರಾಜೀನಾಮೆಯಿಂದ ತೆರವಾದ ಬೀದರ ವಿಧಾನಸಭಾ ಕ್ಷೇತ್ರದ ಚುನಾವಣಾ ಕಣದಲ್ಲಿ ಶಾಸಕ ಬಂಡೆಪ್ಪ ಕಾಶೆಂಪೂರ ಸಹೋದರ ಮಾರುತಿ ಜೆಡಿಎಸ್ ಅಭ್ಯರ್ಥಿಯಾಗಿದ್ದಾರೆ. ಹೀಗಾಗಿ ಅನಿವಾರ್ಯವಾಗಿ ಹಾಗೂ ಕುಮಾರಸ್ವಾಮಿಯ ಮೇಲಿನ ಋಣಕ್ಕಾದರೂ ಬಂಡೆಪ್ಪ ಪಕ್ಷಕ್ಕೆ ದ್ರೋಹಬಗೆದು ಬಜೆಪಿಯನ್ನು ತಬ್ಬಿಕೊಳ್ಳುವ ಇರ್ಯಾದೆ ಇಟ್ಟುಕೊಳ್ಳಲಾರ. ಕಳೆದಬಾರಿ ಗುರುಪಾದಪ್ಪನ ವಿರುದ್ಧ ತೀವ್ರ ಸ್ಪರ್ಧೆ ಒಡ್ಡಿದ್ದ ಬಿಎಸ್‌ಪಿಯ ಅಭ್ಯರ್ಥಿ ರಹೀಮಾನಖಾನ ಇದೀಗ ಇಲ್ಲಿ ಕಾಂಗ್ರೆ ಅಭ್ಯರ್ಥಿ. ಸಹಜವಾಗಿಯೇ ವಿಧಾನಸಭೆಯ ಅಭ್ಯರ್ಥಿಗಳು ಪಡೆಯುವ ಮತಗಳ ಪೈಕಿ ಬಹುಪಾಲು ಮತಗಳು ಲೋಕಸಭಾ ಕ್ಷೇತ್ರದ ಅಭ್ಯರ್ಥಿಯೂ ಪಡೆಯುವುದರಿಂದ ನಾಗಮಾರಪಳ್ಳಿಗೆ ಮತ್ತವನ ಪುಂಡ ಪುತ್ರನಿಗೆ ಇಲ್ಲಿಯೂ ಹಿನ್ನಡೆ ಉಂಟಾಗಲಿದೆ.

ಇದೆಲ್ಲಕ್ಕಿಂತ ಹೆಚ್ಚಾಗಿ ಬಜೆಪಿಯ ಮೂಲ ಸಂಘಟಕ ನಾಯಕರೆ ಗುರುಪಾದಪ್ಪ ನಾಗಮಾರಪಳ್ಳಿಯನ್ನು ಹೊರಗಿನವರಂತೆ ನೋಡುತ್ತಿದ್ದಾರೆ. ಪಕ್ಷಕ್ಕಾಗಿ ದುಡಿದವರನ್ನೇ ಮೂಲೆಗುಂಪು ಮಾಡುತ್ತ ನಿನ್ನೆ ಮೊನ್ನೆ ಪಾರ್ಟಿಗೆ ಬಂದು ಸೇರಿದವರಿಗೆ ಮಣೆಹಾಕುತ್ತಿರುವ ಬಿಜೆಪಿಯ ವರಿಷ್ಠರ ಬಗೆಗೆ ಚೆಡ್ಡಿಗಳಲ್ಲಿ ದ್ವಂದ್ವಗಳಿವೆ. ಅಪಾರ ಭ್ರಷ್ಟನಾದ, ಸರಳನಲ್ಲದ, ಶೋಕಿಲಾಲನಾದ, ಡಿ.ಸಿ.ಸಿ.ಬ್ಯಾಂಕ್ ಮತ್ತು ನಾರಂಜಾ ಕಾರ್ಖಾನೆಗಳನ್ನು ತನ್ನ ಕುಟುಂಬದ ಪಾರುಪತ್ಯದಲ್ಲೆ ಇಟ್ಟುಕೊಂಡು ಅವುಗಳ ತುಂಬ ಹೊಲಸು ರಾಡಿ ಎಬ್ಬಿಸಿರುವ ಗುರುಪಾದಪ್ಪನ ಅಸಲಿ ಮುಖ ಗೋಚರಗೊಳ್ಳುವಂತೆ ಮಾಡುತ್ತಿವೆ.

ಬಹಳ ಮುಖ್ಯವಾಗಿ ಬೀದರ ಕ್ಷೇತ್ರದ 14.84 ಲಕ್ಷ ಮತದಾರರ ಪೈಕಿ ಎಂಟು ಲಕ್ಷದಷ್ಟು ದಲಿತರು, ಮುಸ್ಲಿಮರು, ಬೌದ್ಧ ಕ್ರಿಶ್ಚಿಯನ್ನರ ಮತಗಳಿವೆ. ಇವರೆಲ್ಲಾ ಬಿಜೆಪಿಯನ್ನು ನಂಬುವವರಲ್ಲ, ಲಿಂಗಾಯತರು ಕೊಂಚ ಬಲಿಷ್ಠರಿದ್ದರೂ ನಿರ್ಣಾಯಕವಲ್ಲ, ಅತೀ ಮುಖ್ಯವಾಗಿ ಗುರುಪಾದಪ್ಪ ನಾಗಮಾರಪಳ್ಳಿ ಒಳ್ಳೆಯವನಲ್ಲ ಎಂಬ ಅನಿಸಿಕೆ ಜನರ ಮನಸ್ಸಿನಲ್ಲಿ ಬಂದು ಬಿಟ್ಟಿದೆ.

▶▶▶

ದೇಶಪಾಂಡೆ. ಆದರೆ ಆಳ್ವಾರ ಪ್ರಭಾವದಿಂದ ಅದು ನೆರವೇರಲಿಲ್ಲ. ಈಗ ಮಾರ್ಗರೆಟ್ ಆಳ್ವ ಅವರು "ಇದು ನನ್ನ ಕಡೆ ಚುನಾವಣೆ. ಭವಿಷ್ಯದ ನಾಯಕ ಪ್ರಶಾಂತ್ ದೇಶಪಾಂಡೆಯೆ" ಎಂದು ಘೋಷಿಸಿರುವುದರಿಂದ ದೇಶಪಾಂಡೆ ಮುಖದಲ್ಲಿ ಮಂದಹಾಸ ಮೂಡಿ ಇದೀಗ ಆಳ್ವ ಗೆಲುವಿಗೆ ಕೈಜೋಡಿಸಿದ್ದಾರೆ.

● ರಮೇಶ್ ಅಂಕೋಲಾ

ಹಿಂದುಳಿದವರೇ ಸಿಂಹಪಾಲು

ಕೆನರಾ ಲೋಕಸಭಾ ಕ್ಷೇತ್ರದಲ್ಲಿರುವ ಸುಮಾರು 13 ಲಕ್ಷದಷ್ಟು ಮತದಾರರಲ್ಲಿ ಶೇ. 95ರಷ್ಟು ಜನ ಹಿಂದುಳಿದ ಜಾತಿ ಜನಾಂಗದವರೇ ಆಗಿದ್ದಾರೆ. ಶೇ. 5ರಷ್ಟಿರುವ ಮೇಲ್ಜಾತಿಯವರಲ್ಲಿ 16 ಸಾವಿರ ಕೊಂಕಣಿ ಬ್ರಾಹ್ಮಣರು ಮತ್ತು 55 ಸಾವಿರ ಹವ್ಯಕ ಬ್ರಾಹ್ಮಣರು ಮಾತ್ರ ಇದ್ದಾರೆ.

ಹಿಂದುಳಿದವರ ಪೈಕಿ ಮೂರೂವರೆ ಲಕ್ಷ ಇರುವ ನಾಮಧಾರಿ ನಾಯಕರು, ಬಂಗಾರಪ್ಪನವರು ಕಾಂಗ್ರೆಸ್‌ಗೆ ಮರು ಸೇರ್ಪಡೆ ಆಗಿರುವುದರಿಂದ ಉತ್ಸಾಹಗೊಂಡಿದ್ದಾರೆ. ಇನ್ನುಳಿದಂತೆ ಮೂರೂವರೆ ಲಕ್ಷ ಮರಾಠಿ, ಮೂರು ಲಕ್ಷ ಮುಸ್ಲಿಂ, 80 ಸಾವಿರ ಲಿಂಗಾಯತ, 70 ಸಾವಿರ ಹಾಲಕ್ಕಿ ಒಕ್ಕಲಿಗರು, 75 ಸಾವಿರ ಮೊಗವೀರ, ಹರಿಕಾಂತ ಮುಂತಾದ ಮೀನುಗಾರರ ಸಮುದಾಯದಗಳು, ಒಂದು ಮುಕ್ಕಾಲು ಲಕ್ಷದಷ್ಟಿರುವ ಎಸ್ಸಿ/ಎಸ್ಟಿಗಳು, 45 ಸಾವಿರ್ ಕ್ರಿಶ್ಚಿಯನ್ನರು, ಸುಮಾರು 36 ಸಾವಿರ ಮರಾಠ ಕುಣಬಿ ಮುಂತಾದ ಮತದಾರರು ಈ ಕ್ಷೇತ್ರದಲ್ಲಿದ್ದಾರೆ.

ಈ ಬಾರಿಯ ಚುನಾವಣೆಯಲ್ಲಿ ಮೇಲ್ಜಾತಿಯ ಜನ ಬಿಜೆಪಿ ಪರ ಮತಚಲಾಯಿಸಿದರೆ, ಹಿಂದುಳಿದ, ಅಲ್ಪಸಂಖ್ಯಾತ ಮತದಾರರು ಸಾಲಿಡ್ ಆಗಿ ಕಾಂಗ್ರೆಸ್ ಪರ ಮತಚಲಾಯಿಸಲಿದ್ದಾರೆ. ಈ ಲೆಕ್ಕಾಚಾರದಲ್ಲಿ ನೋಡಿದರೆ, ಈ ಬಾರಿ ಇಲ್ಲಿಂದ ಕಾಂಗ್ರೆಸ್‌ನ ಮಾರ್ಗರೆಟ್ ಆಳ್ವ ಅವರೇ ಗೆಲ್ಲುವ ಸೂಚನೆಗಳು ಸ್ಪಷ್ಟವಾಗುತ್ತವೆ.

ಇದೆಲ್ಲದರಿಂದಾಗಿ ಧರ್ಮಸಿಂಗ್ ಇಲ್ಲಿಯ ಜನರಿಗೆ ಧರ್ಮಬೀರುವಾಗಿ ಗೋಚರವಾಗಿ ಅವರೇ ಅಂತಿಮವಾಗಿ ಆಯ್ಕೆಯಾದರೆ ಯಾರೂ ಅಚ್ಚರಿಪಡಬೇಕಿಲ್ಲ.

ಗುರುಪಾದಪ್ಪನ ಚಿನ್ನದ ಮೊಬೈಲ್, ಬೆಳ್ಳಿ ಉಯ್ಯಾಲೆ

ಹೇಳಿಕೇಳಿ ಬೀದರ್ ಅತೀ ಹಿಂದುಳಿದ, ಬಡವರ ಜಿಲ್ಲೆ, ಇಲ್ಲಿಂದ ನಾಯಕರಾಗಿ ಬರುವವರಿಗೆ ಈ ಬಡವರ ಬಗ್ಗೆ ಕಿಂಚಿತ್ತಾದರೂ ಕಾಳಜಿ ಇರಬೇಕಲ್ಲವೆ.

ಆದರೆ ಈ ಗುರಪಾದಪ್ಪ ನಾಗಮಾರಪಲ್ಲಿ ಇದುವರೆಗೂ ಐದು ಬಾರಿ ಶಾಸಕನಾಗಿ, ನಾಲು ಬಾರಿ ಮಂತ್ರಿಯಾದರೂ ಜನರಿಗೆ ಯಾವ ಉಪಕಾರವನ್ನೂ ಮಾಡಲಿಲ್ಲ, ಆದರ ಬದಲಾಗಿ ಅಧಿಕಾರ ಸಿಕ ಕಡೆಯಲ್ಲಾ ಹಣ ಕಳ್ಳತನ ಮಾಡಿ ನಂಬರ್ ಒನ್ ಭ್ರಷ್ಟ ರಾಜಕಾರಣಿ ಎನಿಸಿಕೊಂಡಿದ್ದಾನೆ.


ಮೊನ್ನೆ ಚುನಾವಣಾ ನಾಮಪತ್ರ ಸಲ್ಲಿಸುವಾಗ ನಾಗಮಾರಪಲ್ಲಿ ಘೋಷಿಸಿಕೊಂಡಿರುವ ಆಸ್ತಿ ಪಾಸ್ತಿಗಳ ವಿವರ ನೋಡಿದರೆ ಗಾಭರಿಯಾಗುತ್ತದೆ. ಬೆಂಗಳೂರು, ಬೀದರ್, ಮುಂಬೈ, ಹೈದರಾಬಾದ್‌ಗಳಲ್ಲಿ ಮನೆ, ನಿವೇಶನಗಳಲ್ಲದೆ 97 ಕೆ.ಜಿ. ಬೆಳ್ಳಿ, 3 ಕೆ.ಜಿ. ಚಿನ್ನ, ಏಳು ಕಾರುಗಳಿವೆ ಈತನ ಬಳಿ. ಈತನ ಮೊಬೈಲ್ ಅನ್ನು ಚಿನ್ನದ ಲೇಪನ ಕೊಡಿಸಿ ಅಮೆರಿಕದಿಂದ ತರಿಸಿದ್ದಾನೆ. ಅದರ ಬೆಲೆ 15 ಲಕ್ಷ. ಇನ್ನು ಬೆಂಗಳೂರಿನ ಬಂಗಲೆಯೊಳಗಿರುವ ಉಯ್ಯಾಲೆಗೆ ಬೆಳ್ಳಿಯ ಸರಪಳಿ ಹಾಕಿಸಿದ್ದಾನೆ. ಬೆಡ್‌ರೂಮಿನ ನಾಲ್ಕೂ ಗೋಡೆ ತುಂಬಾ ಬೆಳ್ಳಿಯ ಫ್ರೇಮಿನ ಕನ್ನಡಿಗಳಿವೆ. ಹಾಕುವ ಕನ್ನಡಕದ ಫ್ರೇಮೂ ಚಿನ್ನದ್ದೆ. ಪುಟ್ಟದ 5 ಲಕ್ಷ ಬೆಲೆಯ ದಾಬುಗೂ ಚಿನ್ನದ ಲೇಪನವಿದೆ. 25 ಸಾವಿರ ಬೆಲೆಯ ಶೂ ಹಾಕುತ್ತಾನೆ. ಅಷ್ಟೇ ಅಲ್ಲ, ನೋಡಲು ಬರುವ ಬಡಜನ ಶೂ ಧರಿಸುವ ಕಾಲಿಗೆ ಅಡ್ಡಬೀಳಬೇಕೆಂದು ಬಯಸುತ್ತಾನೆ!

ಇನ್ನು [illegible] ದುಡ್ಡು [illegible] ಓಟು ಹಾಕುತ್ತಾರೆ ಹೇಳಿ?

● ವಿಶ್ವಾರಾಧ್ಯ ಸತ್ಯಂಪೇಟೆ

ಉಡುಪಿ-ಚಿಕ್ಕಮಗಳೂರು


ಹಲ್ಮುಖಿ ಗೌಡರಿಗೆ ಸಜ್ಜನನ ಸವಾಲು



ರಾಜ್ಯ ಬಿಜೆಪಿ ನೇತೃತ್ವ ವಹಿಸಿರುವ ಹಲ್ಮುಖಿ ಸದಾನಂದ ಗೌಡರ ನಗು ಮುಖದಲ್ಲಿ ಈಗ ಆತಂಕದ ಗೆರೆಗಳು ಕಾಣಲಾರಂಭಿಸಿವೆ. ತಮ್ಮ ರಾಜಕೀಯ ಗುರು ಉರಿಮಜಲು ರಾಮಭಟ್ಟರಿಗೆ ಹೆದರಿ ಸ್ವಕ್ಷೇತ್ರ ತೊರೆದು, ಉಡುಪಿ-ಚಿಕ್ಕಮಗಳೂರು ಕ್ಷೇತ್ರಕ್ಕೆ ವಲಸೆ ಬಂದಿರುವ ಅವರಿಗೆ ಇಲ್ಲಿಯೂ ಸುಖವಿಲ್ಲವೆಂಬಂತಾಗಿದೆ.

ಕಾಂಗ್ರೆಸ್ ಕೊನೆಗೂ ಎಚ್ಚೆತ್ತು ಜಯಪ್ರಕಾಶ್ ಹೆಗ್ಡೆ ಎಂಬ ಸಜ್ಜನ ರಾಜಕಾರಣಿಯನ್ನು ಕಣಕ್ಕಿಳಿಸಿದೆ. ಇಲ್ಲಿನ ಕಾಂಗ್ರೆಸ್ ಅಭ್ಯರ್ಥಿಯಾಗಲು ಪೈಪೋಟಿ ನಡೆಸಿದ್ದ ಡಿ.ಕೆ.ತಾರಾದೇವಿ ಅಥವಾ ಬಿ.ಎಲ್. ಶಂಕರ್ ಕಣಕ್ಕಿಳಿದಿದ್ದರೆ (ಉಡುಪಿ ಜಿಲ್ಲೆಯೂ ಈ ಕ್ಷೇತ್ರಕ್ಕೆ ಸೇರಿರುವುದರಿಂದ) ಸುಲಭವಾಗಿ ಗೆಲ್ಲಬಹುದು ಎಂದು ಲೆಕ್ಕ ಹಾಕಿದ್ದ ಹಲ್ಮುಖಿ ಗೌಡರಿಗೆ ಈಗ ಜಯಪ್ರಕಾಶ್ ಹೆಗ್ಡೆಯವರು ತಮ್ಮ ವಿರುದ್ಧ ಪ್ರತ್ಯಕ್ಷರಾಗಿರುವುದರಿಂದ ಸೋಲಿನ ಭೀತಿ ಕಾಡುತ್ತಿದೆ.

ಮೇಲ್ನೋಟಕ್ಕೆ ಈ ಕ್ಷೇತ್ರದಲ್ಲಿ ಬಿಜೆಪಿ ಪ್ರಾಬಲ್ಯವಿದೆ. ಆದರೆ ಪಕ್ಷದ ಭದ್ರಕೋಟೆಯೇನೂ ಅಲ್ಲ. "ಕಳೆದ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 4,10,875 ಮತಗಳನ್ನು ಪಡೆದುಕೊಂಡಿದ್ದರೆ ಕಾಂಗ್ರೆಸ್ 3,34,819 ಮತಗಳನ್ನು ಪಡೆದಿತ್ತು, ಈ ಎರಡು ಪಕ್ಷಗಳ ಅಂತರ ಸುಮಾರು 76 ಸಾವಿರವಾಗಿದ್ದರಿಂದ ನಮ್ಮ ಗೆಲುವು ಖಚಿತ" ಎಂದು ಹಲ್ಮುಖಿ ಗೌಡರ ಪಟಾಲಂ ಬೀಗುತ್ತಿದೆ. ಆದರೆ ಅವರು ಮುಚ್ಚಿಡುವ ಅಂಶ ಯಾವುದೆಂದರೆ ಅದೇ ಚುನಾವಣೆಯಲ್ಲಿ ಜೆಡಿಎಸ್ ಸುಮಾರು 84 ಸಾವಿರ ಮತಗಳನ್ನು ಪಡೆದದ್ದು. ಈಗ ಜೆಡಿಎಸ್ ತನ್ನ ಅಭ್ಯರ್ಥಿಯನ್ನು ಕಣಕ್ಕಿಳಿಸಿಲ್ಲ ಎಂಬುದನ್ನು ಗೌಡರ ಚೆಡ್ಡಿ ಪಟಾಲಂ ಮರೆತಿರುವಂತೆ ವರ್ತಿಸುತ್ತಿದೆ. ತೃತೀಯ ರಂಗದ ಅಭ್ಯರ್ಥಿಯಾಗಿ ರಾಧಾ ಸುಂದರೇಶ್ ಕಣದಲ್ಲಿದ್ದಾರೆಯಾದರೂ ಜೆಡಿಎಸ್‌ನ ಹೆಚ್ಚುಕಡಿಮೆ ಎಲ್ಲ ಮತಗಳೂ ಕಾಂಗ್ರೆಸ್ ಪಾಲಾಗುವುದು ಖಚಿತವಾಗಿದೆ.



ಜಯಪ್ರಕಾಶ್ ಹೆಗಡೆ

ಘಟ್ಟದ ಮೇಲಿನ ಚಿಕ್ಕಮಗಳೂರು, ಮೂಡಿಗೆರೆ, ಶೃಂಗೇರಿ, ತರಿಕೆರೆ ಮತ್ತು ಘಟ್ಟದ ಕೆಳಗಿನ ಕಾರ್ಕಳ, ಕುಂದಾಪುರ, ಕಾಪು ಮತ್ತು ಉಡುಪಿ ವಿಧಾನಸಭಾ ಕ್ಷೇತ್ರಗಳು ಈ ಲೋಕಸಭಾ ಕ್ಷೇತ್ರದ ವ್ಯಾಪ್ತಿಗೆ ಬರುತ್ತವೆ. ಬರೋಬ್ಬರಿ 400 ಚದುರ ಕಿ.ಮೀ. ವ್ಯಾಪ್ತಿಯ ಈ ಕ್ಷೇತ್ರವನ್ನು ಹೀಗೆ ಎಂದು ಅಳೆಯುವುದು ಕಷ್ಟ. ಹೀಗಾಗಿ ಅಭ್ಯರ್ಥಿಗಳೂ ಕೂಡ ಏನಾಗುತ್ತಿದೆ ಎಂಬುದು ಗೊತ್ತಾಗದೆ ಗೊಂದಲಕ್ಕೆ ಬಿದ್ದಿದ್ದಾರೆ.

ಬಿಜೆಪಿ ಏಳು ವಿಧಾನಸಭಾ ಕ್ಷೇತ್ರದಲ್ಲಿ ಗೆದ್ದಿದ್ದರೂ ನಾಲ್ಕು ಕ್ಷೇತ್ರಗಳಲ್ಲಿ ಗೆಲುವಿನ ಅಂತರ ಹೆಚ್ಚೇನೂ ಇರಲಿಲ್ಲ, ಕಾಪುವಿನಲ್ಲಿ 500, ಉಡುಪಿಯಲ್ಲಿ 1,500, ಶೃಂಗೇರಿ 2000 ಮತ್ತು ಮೂಡಿಗೆರೆಯಲ್ಲಿ ಐದು ಸಾವಿರ ಅಂತರ ಮಾತ್ರವಿತ್ತು, ಹೀಗಾಗಿ ಕಾಂಗ್ರೆಸ್ ನೆಲೆಯೇನೂ ಇಲ್ಲಿ ದುರ್ಬಲವಾಗಿಲ್ಲ, ಜೊತೆಗೆ ಜೆಡಿಎಸ್ ಪರೋಕ್ಷ ಬೆಂಬಲ ನೀಡಿದಲ್ಲಿ ಹೆಗ್ಡೆ ಗೆಲುವಿನ ನಾಗಾಲೋಟಕ್ಕೆ ತಡೆಯೇ ಇಲ್ಲವಾಗುತ್ತದೆ.

ಇದು ಗೊತ್ತಾಗುತ್ತಿದ್ದಂತೆಯೇ ಹಲ್ಮುಖಿ ಗೌಡ ಚಿಟ್ಟುಬಿದ್ದು ಡಿ.ಬಿ. ಚಂದ್ರೇಗೌಡ ಎಂಬ ವೇಸ್ಟ್ ಬಾಡಿಯನ್ನು ಪಕ್ಷಕ್ಕೆ ಕೊಂಡು ತಂದಿದ್ದಾರೆ. ಆದರೆ ಅವರ ಹಿಂದೆ ಕ್ಷೇತ್ರದ ಒಬ್ಬನೇ ಒಬ್ಬ ಕಾರ್ಯಕರ್ತನೂ ಹೋಗಿಲ್ಲ. ಬದಲಾಗಿ ರೊಚ್ಚಿಗೆದ್ದಿರುವ ಶೃಂಗೇರಿ ಕ್ಷೇತ್ರದ ಕಾಂಗ್ರೆಸ್ ನಾಯಕರು ಒಗ್ಗಟ್ಟಿನಿಂದ ಪಕ್ಷದ ಕೆಲಸ ಮಾಡಲಾರಂಭಿಸಿದ್ದಾರೆ. ಮಾತ್ರವಲ್ಲ ಡಿಬಿಸಿ ಬಿಜೆಪಿ ಸೇರಿದ್ದರಿಂದ ತಮಗೇ ಹೆಚ್ಚು ಹಾನಿ ಎಂದು ಬಿಜೆಪಿ ನಾಯಕರೇ ತಲೆಮೇಲೆ ಕೈ ಹೊತ್ತು ಕೂತಿದ್ದಾರೆ.

ಘಟ್ಟದ ಕೆಳಗೆ ಸಾಲಿಡ್ ಲೀಡ್

ಸದಾನಂದ ಗೌಡ ಈ ಕ್ಷೇತ್ರಕ್ಕೆ ವಲಸೆ ಬಂದವರಾದ್ದರಿಂದ ಅದು ಅವರಿಗೆ ಒಂದು ದೊಡ್ಡ ಮೈನಸ್ ಪಾಯಿಂಟ್ ಆಗಲಿದೆ. ಇನ್ನು ಈ ಕ್ಷೇತ್ರದವರೇ ಆದ ಮಾಜಿ ಸಚಿವ ಜಯಪ್ರಕಾಶ್ ಹೆಗ್ಡೆ ಅಧಿಕಾರದಲ್ಲಿದ್ದಾಗ ಮಾಡಿದ ಕೆಲಸಗಳು ಇನ್ನೂ ಜನರ ಮನಸ್ಸಿನಲ್ಲಿವೆ. ಮೀನುಗಾರರ ಸಮಸ್ಯೆ ಬಗೆಹರಿಸಿದ್ದು, ಕಡಲು ಕೊರೆತ ತಡೆಗಟ್ಟಲು ಶ್ರಮಿಸಿದ್ದು ಎಲ್ಲ ಹೆಗ್ಡೆಗೆ ಪ್ಲಸ್ ಪಾಯಿಂಟ್ ಆಗಲಿವೆ.




ರಾಧಾ ಸುಂದರೇಶ್

ಘಟ್ಟದ ಕೆಳಗಿನ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ ಹೆಗ್ಡೆ ಪರ ಸಹಾನುಭೂತಿಯ ಅಲೆ ಎದ್ದಿದೆ. ಈ ಕ್ಷೇತ್ರಗಳಲ್ಲಿ ಹೆಗ್ಡೆ ಅವರಿಗೆ ಒಟ್ಟಾರೆಯಾಗಿ 50 ಸಾವಿರ ಲೀಡ್ ಬರುವ ಸಾಧ್ಯತೆಗಳು ಕಾಣುತ್ತಿವೆ. "ನೀವು ಇಲ್ಲಿಗೆ ಬರುವುದೇ ಬೇಡ, ನಮ್ಮವರನ್ನು ಬಿಟ್ಟುಕೊಡುವುದುಂಟೇ? ನಿಮಗೆ ಗ್ಯಾರಂಟಿ ಓಟು ಕೊಡುತ್ತೇವೆ. ನೀವು ಘಟ್ಟದ ಮೇಲೆ ಗಮನ ಕೊಡಿ. ಇಲ್ಲಿಯ ಬಗ್ಗೆ ಯೋಚನೆಯೇ ಬೇಡಿ" ಎಂದು ಹೆಗ್ಡೆಗೆ ಪಕ್ಷಾತೀತವಾಗಿ ಮತದಾರರು ಭರವಸೆ ನೀಡುತ್ತಿರುವುದು ಹೆಗ್ಡೆಯ ಉತ್ಸಾಹವನ್ನು ಹೆಚ್ಚಿಸಿದೆ. ಬಿಜೆಪಿಯ ಮೂಲ ಓಟುಗಳು ಸದಾನಂದ ಗೌಡರ ಪಾಲಾದರೂ, ಹೆಗ್ಡೆಗೆ ಹೆಚ್ಚಿನ ಲೀಡ್ ಗ್ಯಾರಂಟಿ ಎಂಬ ಮಾತು ನಾಲ್ಕೂ ಕ್ಷೇತ್ರಗಳಲ್ಲಿ ಕೇಳಿಬಂದಿವೆ. ಹೀಗಾಗಿ ಈಗ ಹೆಗ್ಡೆ ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಿರುಸಿನ ಪ್ರಚಾರ ಕೈಗೊಂಡಿದ್ದಾರೆ.

ಘಟ್ಟದ ಮೇಲೆ ಕಮಲಕ್ಕೆ ನೀರಿಲ್ಲ

ಚಿಕ್ಕಮಗಳೂರು ಜಿಲ್ಲೆಯ ನಾಲ್ಕು ಕ್ಷೇತ್ರದಲ್ಲಿ ಕಮಲದ ಸ್ಥಿತಿ ಸದ್ಯಕ್ಕೆ ಚೆನ್ನಾಗಿಲ್ಲ. ಅತಿದೊಡ್ಡ ವಿಧಾನಸಭಾ ಕ್ಷೇತ್ರವಾದ ಶೃಂಗೇರಿಯಲ್ಲಿ ಬಿಜೆಪಿಯ ಜೀವರಾಜ್ ಕೇವಲ ಎರಡು ಸಾವಿರ ಓಟುಗಳಿಂದ ಗೆದ್ದಿದ್ದರು. ಆದರೆ ಅದೇ ಚುನಾವಣೆಯಲ್ಲಿ ಜೆಡಿಎಸ್ 16 ಸಾವಿರ ಮತಗಳನ್ನು ಗಳಿಸಿತ್ತು. ಅದ್ದರಿಂದ ಈ ಬಾರಿ ಏನಿಲ್ಲವೆಂದರೂ ಜೆಡಿಎಸ್‌ನ 10 ಸಾವಿರ ಮತಗಳು ಕಾಂಗ್ರೆಸ್ ಪಾಲಾದರೂ ಈ ಕ್ಷೇತ್ರದಲ್ಲಿ ಹೆಗ್ಡೆಗೆ ಲೀಡ್ ದೊರೆಯಲಿದೆ ಎಂದೇ ವಿಶ್ಲೇಷಿಸಲಾಗುತ್ತಿದೆ.



ಸಿ.ಟಿ.ರವಿ

ಇನ್ನು ತರಿಕೆರೆಯಲ್ಲಿ ಭದ್ರಾ ಮೇಲ್ದಂಡೆ ವಿವಾದ ಕಾಂಗ್ರೆಸ್ ಪಾಲಿಗೆ ವರದಾನವಾಗಲಿದೆ. ಈ ತಾಲೂಕಿಗೆ ಶಾಪವಾಗಿರುವ ಈ ಯೋಜನೆಯನ್ನು ಬಿಜೆಪಿ ಜಾರಿಗೆ ತರಲು ಮುಂದಾಗಿರುವುದರಿಂದ ಬಿಜೆಪಿಗೆ ಪಾಠ ಕಲಿಸಲು ಮತದಾರರು ತೀರ್ಮಾನಿಸಿದ್ದಾರೆ. ಇಲ್ಲಿಯೂ ಹೆಗ್ಡೆ ಗೆಲುವು ಗ್ಯಾರಂಟಿ ಎಂದು ತರ್ಕಿಸಲಾಗುತ್ತಿದೆ.

ಇನ್ನು ಮೂಡಿಗೆರೆಯಿಂದ ಬಿಜೆಪಿಯ ಕುಮಾರಸ್ವಾಮಿ ಗೆದ್ದದ್ದು ಕೇವಲ ಐದು ಸಾವಿರ ಮತಗಳ ಅಂತರದಿಂದ. ಆಗ ಜೆಡಿಎಸ್‌ನಲ್ಲಿದ್ದ ಮಾಜಿ ಸಚಿವ ನಿಂಗಯ್ಯ ಈಗ ಕಾಂಗ್ರೆಸ್ ಸೇರಿರುವುದರಿಂದ ಪಕ್ಷಕ್ಕೆ ಇನ್ನಷ್ಟು ಬಲ ಬಂದಿದೆ. ಮಾಜಿ ಸಚಿವೆ ಮೋಟಮ್ಮ, ಅಭ್ಯರ್ಥಿ ಆಕಾಂಕ್ಷಿಯಾಗಿದ್ದ ಡಿ.ಕೆ.ತಾರಾದೇವಿ ನಿಜವಾಗಿಯೂ ಪಕ್ಷಕ್ಕೆ ನಿಷ್ಠರಾಗಿ ಕೆಲಸ ಮಾಡಿದರೆ ಕಾಂಗ್ರೆಸ್ ಗೆಲುವು ಕಷ್ಟವಾಗಲಿಕ್ಕಿಲ್ಲ.

ಇನ್ನು ಚಿಕ್ಕಮಗಳೂರು ಕ್ಷೇತ್ರದಲ್ಲಿ ಬಾಯಿಬಡುಕ ಸಿ.ಟಿ. ರವಿ ವಿರುದ್ಧ ಬಿಜೆಪಿ ಕಾರ್ಯಕರ್ತರೇ ಸಿಟ್ಟಿಗೆದ್ದಿದ್ದಾರೆ. ಇನ್ನು ಸಾಮಾನ್ಯ ಜನರಂತೂ "ಈತನಿಗೆ ಬಾಯಿಗೆ ಬಂದಹಾಗೆ ಮಾತನಾಡುವುದನ್ನು ಬಿಟ್ಟರೆ ಬೇರೆ ಯಾವ ಕೆಲಸ ಮಾಡಲೂ ಬರುವುದಿಲ್ಲ, ಜನಪರವಾಗಿ ಇಷ್ಟು ದಿನ ಒಂದೇ ಒಂದು ಕೆಲಸ ಮಾಡದಿದ್ದರೂ ತನ್ನ ಪರವಾಗಿ ಕೆಲಸ ಮಾಡಿ ಕೋಟ್ಯಾಧಿಪತಿಯಾಗಿದ್ದಾನೆ. ಇವನಿಗೆ ಗೊತ್ತಿರುವುದು ಲ್ಯಾಂಡ್ ಡೀಲಿಂಗು ಮತ್ತು ಹೆಂಡ ಹಂಚುವುದು" ಎಂದೇ ನಟಿಕೆ ಮುರಿಯುತ್ತಿದ್ದಾರೆ. ಅವರಲ್ಲೆ ಈ ಚುನಾವಣೆಯಲ್ಲಿ ರವಿಗೆ ತಕ್ಕ ಪಾಠ ಕಲಿಸುವ ಸಾಧ್ಯತೆಗಳಿವೆ.

ಜಾತಿ ಲೆಕ್ಕಾಚಾರ

ಈ ಕ್ಷೇತ್ರ ಹಿಂದಿನಿಂದಲೂ ಜಾತಿ ರಾಜಕೀಯಕ್ಕೆ ಹೆಸರುವಾಸಿಯಾಗಿದೆ. ಘಟ್ಟದ ಮೇಲೆ ಮುಸ್ಲಿಮರ ಮತ್ತು ಒಕ್ಕಲಿಗರ ಪ್ರಾಬಲ್ಯವಿದ್ದರೆ, ಘಟ್ಟದ ಕೆಳಗೆ ಬಿಲ್ಲವರ ಮತ್ತು ಬಂಟರ ಪ್ರಾಬಲ್ಯವಿದೆ. ಒಟ್ಟು 12 ಲಕ್ಷ ಮತದಾರರಿದ್ದು, ಸುಮಾರು 2 ಲಕ್ಷದಷ್ಟು ಮುಸ್ಲಿಮರ ಮತಗಳಿವೆ. ಘಟ್ಟದ ಕೆಳಗೆ ಬಿಲ್ಲವರ ಮತ್ತು ಬಂಟರ ಮತಗಳು ಸಾಲಿಡ್ ಆಗಿ ಹೆಗ್ಡೆ ಪಾಲಾಗುವುದು ಖಚಿತ. ಇನ್ನು ಘಟ್ಟದ ಮೇಲಿನ ಮುಸ್ಲಿಮರ, ಕ್ರಿಶ್ಚಿಯನ್ನರ ಮತಗಳ ಜೊತೆಗೆ ದಕ್ಷಿಣ ಕನ್ನಡ ಮೂಲದವರ ಮತಗಳು ಹೆಗ್ಡೆಗೆ ಬೀಳಲಿವೆ ಎಂಬುದರಲ್ಲಿ ಅನುಮಾನವಿಲ್ಲ. ಹೀಗಾಗಿ ಒಕ್ಕಲಿಗರ, ಬ್ರಾಹ್ಮಣರ ಹಾಗೂ ಲಿಂಗಾಯತ ಮತಗಳನ್ನೇ ನಂಬಿಕೊಂಡಿರುವ ಬಿಜೆಪಿ ಕಷ್ಟಕ್ಕೆ ಸಿಲುಕಿದೆ.

ಸದಾನಂದ ಗೌಡ ಒಕ್ಕಲಿಗರಾದರೂ ಘಟ್ಟದ ಮೇಲಿನ ಒಕ್ಕಲಿಗರಿಗೂ, ಘಟ್ಟದ ಕೆಳಗಿನ ಒಕ್ಕಲಿಗರಿಗೂ ಡಿಫರೆನ್ಸ್ ಇದೆ. ಇನ್ನು ಬಿಜೆಪಿ ಲಿಂಗಾಯತರ ಪಕ್ಷ ಎನಿಸಿಕೊಂಡಿರುವುದರಿಂದ ಒಕ್ಕಲಿಗರ ಮತಗಳೂ ಒಡೆದು ಕಾಂಗ್ರೆಸ್ ಪಾಲಾಗುವ ನಿರೀಕ್ಷೆ ಇದೆ. ಕಾಂಗ್ರೆಸ್ ನಾಯಕರಾದ ಬಿ.ಎಲ್. ಶಂಕರ್, ತಾರಾದೇವಿ ಒಕ್ಕಲಿಗರ ಮತಗಳು ಕಾಂಗ್ರೆಸ್‌ಗೆ ಬೀಳುವಂತೆ ಮಾಡಲು ಶ್ರಮಿಸುತ್ತಿದ್ದಾರೆ.

ಇತ್ತ ಬಿಜೆಪಿ ಒಡೆದ ಮನೆಯಾಗಿದೆ. ಡಿ.ಬಿ. ಚಂದ್ರೇಗೌಡರನ್ನು ಸೇರಿಸಿಕೊಂಡಿರುವುದಕ್ಕೆ ಜೀವರಾಜ್ ಮತ್ತು ಸಿ.ಟಿ.ರವಿ ಸಿಟ್ಟು ಮಾಡಿಕೊಂಡಿದ್ದಾರೆ. "ಅವರಿಂದ ಬರುವ ಮತಗಳನ್ನೇ ಪಡೆದು ಗೆಲ್ಲಿ, ನಿಮಗೆ ನಮ್ಮ ಮಾತು ಬೇಡವಾದರೆ ನಾವೇಕೆ ನಿಮಗೆ ಕೆಲಸ ಮಾಡಬೇಕು" ಎಂದು ನೇರವಾಗಿ ಹಲ್ಮುಖಿ ಗೌಡರನ್ನು ಕೇಳಿ, ಅವರ ಮುಖದಲ್ಲಿ ಬೆವರಿಳಿಸಿದ್ದಾರೆ.

ಬಜರಂಗದಳ ಕೂಡ ಬಿಜೆಪಿ ವಿರುದ್ಧ ತಿರುಗಿ ಬಿದ್ದಿದೆ. ಮಾಜಿ ಸಂಚಾಲಕ ಮಹೇಂದ್ರ ಕುಮಾರ್ ಬಹಿರಂಗವಾಗಿ ಆಕ್ರೋಶ ವ್ಯಕ್ತಪಡಿಸಿ ಶ್ರೀರಾಮ ಸೇನೆಯಿಂದ ಕಣಕ್ಕಿಳಿಯಲು ಮುಂದಾಗಿದ್ದ. ಆದರೆ ಕೊನೆಯ ಕ್ಷಣದಲ್ಲಿ ಆರ್‌ಎಸ್‌ಎಸ್ ಮುಖ್ಯಸ್ಥರು ಆತನನ್ನು ಸಮಾಧಾನಪಡಿಸಿದರು. ಶೃಂಗೇರಿ ಮತ್ತು ಚಿಕ್ಕಮಗಳೂರು ಭಾಗದಲ್ಲಿ ಬಿಜೆಪಿ ಮತ್ತು ಬಜರಂಗದಳದ ನಡುವೆ ನಡೆಯುತ್ತಿರುವ ಸಂಘರ್ಷ ತಾರಕಕ್ಕೇರಿದ್ದು, ಈ ಮಂದರು ಈ ಬಾರಿ ಬಿಜೆಪಿ ಪರವಾಗಿ ಕೆಲಸ ಮಾಡುವುದು ಅನುಮಾನವಾಗಿದೆ.


ಒಟ್ಟಾರೆಯಾಗಿ ಬಿಜೆಪಿಯ ಭದ್ರಕೋಟೆ ಎಂದು ಈ ಕ್ಷೇತ್ರಕ್ಕೆ ವಲಸೆ ಬಂದಿರುವ ಸದಾನಂದ ಗೌಡರಿಗೆ ಈಗ ಜಯಪ್ರಕಾಶ್ ಹೆಗ್ಡೆ ಸೋಲಿನ ಭೀತಿ ಮೂಡಿಸಿದ್ದಾರೆ. ಆ ಮೂಲಕ ಚುನಾವಣೆಯ ಒಂದು ಹಂತದಲ್ಲಿ ಗೆದ್ದಿದ್ದಾರೆ.


● ವರದಿಗಾರ

ಲಾಲ್‌ಕೃಷ್ಣ ಅಡ್ವಾಣಿಯ ಮುಖ ಕಳೆಗುಂದುತ್ತಿದೆ.

ಭವ್ಯ ಭಾರತದ ಪ್ರಧಾನಿಯಾಗಬೇಕೆಂಬ ಅವರ ಕನಸು ಕೇವಲ ಕನಸಾಗಿಯೇ ಉಳಿಯುವ ಸಾಧ್ಯತೆಗಳು ಸ್ಪಷ್ಟವಾಗಿ ಕಾಣುತ್ತಿವೆ. ವಯೋವೃದ್ಧ ಇಂದಿಯಾದ ಪುರೋಹಿತಶಾಹಿಗಳ ನಾಯಕ ಅಡ್ವಾಣಿ ಯಾವ ದುಸ್ಥಿತಿ ತಲುಪಿದ್ದಾರೆಂದರೆ ಕಾಂಗ್ರೆಸ್‌ನ ಈಗಿನ್ನೂ ಜೂನಿಯರ್ ಲೀಡರ್‌ಗಳಾದ ರಾಹುಲ್ ಗಾಂಧಿ, ಪ್ರಿಯಾಂಕ ವದೇರಾಗಳಿಂದಲೇ ಗೇಲಿಗೊಳಗಾಗುತ್ತಿದ್ದಾರೆ. ಪ್ರಧಾನಿ ಮನಮೋಹನ್ ಸಿಂಗ್ ತಮ್ಮೊಂದಿಗೆ ಬಹಿರಂಗ ಚರ್ಚೆಗೆ ಬರಲಿ ಎಂದು ಅಡ್ವಾಣಿ ವೀರಾವೇಶದ ಹೇಳಿಕೆ ಕೊಟ್ಟರಾದರೂ ಸಿಂಗ್ ಮಾತ್ರ ತಣ್ಣಗೆ 'ಅಡ್ವಾಣಿಗೆ ಅಷ್ಟು ಅರ್ಹತೆಯಿಲ್ಲ' ಎಂದು ಮುಖಭಂಗ ಮಾಡುತ್ತಿದ್ದಾರೆ.

ಮತ್ತೊಂದೆಡೆ ಚುನಾವಣಾ ಅಜೆಂಡಾ ಆಗಿ ಅಡ್ವಾಣಿ ಎತ್ತುತ್ತಿರುವ ಯಾವ ವಿಚಾರಗಳೂ ಜನರ ಮನಸ್ಸಿನಲ್ಲಿ ನಿಲ್ಲುತ್ತಿಲ್ಲ. 'ಟೆರರಿಸಂ' ಅಂತ ಅಡ್ವಾಣಿ ಚೀರಿಕೊಂಡರೆ 'ನೀನೆ ಟೆರರಿಸ್ಟರನ್ನು ಸೆರೆಯಿಂದ ಬಿಡಿಸಿ ಕಂದಹಾರ್‌ಗೆ ಕರೆದೊಯ್ದು ಬಿಟ್ಟುಬಂದೆಯಲ್ಲಪ್ಪ' ಎಂದು ಕಾಂಗ್ರೆಸ್ಸಿಗರು ಉಲ್ಟಾ ಹೊಡೆಯುತ್ತಿದ್ದಾರೆ. 'ಆಂತರಿಕ ಭದ್ರತೆ ಮುಖ್ಯ ಕಾಂಗ್ರೆಸ್ ಅದನ್ನು ನಿರ್ಲಕ್ಷಿಸಿದೆ' ಅಂದರೆ ಅದಕ್ಕೆ ಪ್ರತಿಕ್ರಿಯೆಯಾಗಿ ಸೋನಿಯಾ ಗಾಂಧಿ 'ಕೋಮುವಾದಿಗಳೇ ದೇಶದ ಆಂತರಿಕ ಭದ್ರತೆಗೆ ಅತಿ ಅಪಾಯ' ಎಂದು ಚಾಟಿ ಏಟು ನೀಡಿದ್ದಾರೆ.








82 ವರ್ಷದ ಮುದುಕ ಅಡ್ವಾಣಿಗೆ ಇದು ಬಹುಶಃ ಅವರ ಜೀವನದ ಕೊನೆಯ ಚುನಾವಣೆ ಆಗಲಿದೆ. ಅಡ್ವಾಣಿ ಈ ಬಾರಿ ಪ್ರಧಾನಿಯಾಗುವುದಿರಲಿ ಸ್ವಲ್ಪ ಹೆಚ್ಚುಕಡಿಮೆಯಾದರೆ ವಿರೋಧ ಪಕ್ಷದ ನಾಯಕನೂ ಆಗಲಾರರು. ಚುನಾವಣಾ ಫಲಿತಾಂಶ ಬಂದನಂತರ ರೂಪುತಳೆಯಬಹುದಾದ ಹೊಸ ಮೈತ್ರಿ ಕೂಟಗಳ ಪೈಕಿ ಬಿಜೆಪಿ ಹೊರತಾದ ಗುಂಪೇನಾದರೂ ಬಿಜೆಪಿಗಿಂತ ಹೆಚ್ಚು ಸಂಖ್ಯೆಯಲ್ಲಿದ್ದರೆ. ಅಡ್ವಾಣಿಯ ಸ್ಥಾನ ಇನ್ನೂ ಕೆಳಗಿಳಿಯಲಿದೆ. ಅವರು ಕೊನೆಗೆ ಬಿಜೆಪಿ ಸಂಸದೀಯ ಪಾರ್ಟಿ ನಾಯಕನಾಗುಳಿದರೆ ಅದೇ ಪುಣ್ಯ!

ಮೂಲತಃ ಹೋರಾಡುವ ಸ್ವಭಾವದ ಅಡ್ವಾಣಿ ಕಳೆದ 50 ವರ್ಷಗಳಿಂದಲೂ ರಾಜಕೀಯದಲ್ಲಿದ್ದಾರೆ. 1970 ರಲ್ಲಿ ಅಡ್ವಾಣಿ ಮೊದಲ ಬಾರಿಗೆ ರಾಜ್ಯಸಭಾ ಸದಸ್ಯರಾದಾಗ ಅವರಿಗೆ ಕೇವಲ ನಲವತ್ತೊಂರರ ವಯಸ್ಸು. ಅಲ್ಲಿಂದಾಚೆಗೆ 1973 ರಲ್ಲಿ ಜನಸಂಘದ ಅಧ್ಯಕ್ಷರಾಗಿ, 1977 ರ ಜನತಾ ಸರ್ಕಾರದಲ್ಲಿ ಕೆಲಕಾಲ ವಾರ್ತಾ ಸಚಿವರಾಗಿದ್ದು, ಆನಂತರ ವಾಜಪೇಯಿ ಸರ್ಕಾರದಲ್ಲಿ ಗೃಹ ಸಚಿವರಾಗಿ ಉಪಪ್ರಧಾನಿಯಾಗಿದ್ದ ಅಡ್ವಾಣಿಗೆ ಇದೇ ಅವರ ರಾಜಕೀಯ ಜೀವನದ ಅತ್ಯುನ್ನತ ಸಾಧನೆಗಳಾಗಿ ಕೊನೆಯಾಗಲಿದೆ.

ಬಿಜೆಪಿಯ ಕೊಲೆಗಡುಕ ರಾಜಕಾರಣದ ಮುಂಚೂಣಿ ನಾಯಕನಾಗಿ ರಥಯಾತ್ರೆ, ಬಾಬರಿ ಮಸೀದಿ ನಾಶ ಮುಂತಾದ ದೊಂಬಿ ಕೆಲಸ ನಡೆಸಿಯೂ ಬಿಜೆಪಿ ಗಳಿಸಿದ ಅತಿ ಹೆಚ್ಚು ಲೋಕಸಭಾ ಸ್ಥಾನವೆಂದರೆ 185 ಮಾತ್ರ. ಅಲ್ಲಿಂದಾಚೆಗೆ ಬಿಜೆಪಿಯ ಚುನಾವಣಾ ಸಾಧನೆ ಇಳಿಮುಖಗೊಂಡಿದೆ. ಡಜನ್‌ಗಟ್ಟಲೆಯಿದ್ದ ಎನ್‌ಡಿಎ ಮಿತ್ರಪಕ್ಷಗಳೆಲ್ಲಾ ದೂರವಾಗಿ ಈಗ ಕೇವಲ ಬೆರಳೆಣಿಕೆಯಷ್ಟು ಚಿಕ್ಕಪುಟ್ಟವರು ಮಾತ್ರ ಬಿಜೆಪಿಯೊಂದಿಗಿದ್ದಾರೆ. ಹೀಗೆ ಬಿಜೆಪಿಯ ಬೆಳವಣಿಗೆ ಹಂತದ ನಾಯಕರಾಗಿದ್ದ ಅಡ್ವಾಣಿ ಈಗಿನ ಇಳಿಮುಖದ ಹಂತದಲ್ಲೂ ನಾಯಕರಾಗೇ ಉಳಿದಿದ್ದಾರೆ.

ಬಿಜೆಪಿ ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗಲೇ 'ಇಂಡಿಯಾ ಶೈನಿಂಗ್' ಎಂಬ ಅಬ್ಬರದ ಪ್ರಚಾರ ನಡೆಸಿದಾಗಲೂ ಸಿಗದ ಬಹುಮತ ಈಗ ಸಿಗುತ್ತದೆಂದು ಯಾರೂ ನಂಬುತ್ತಿಲ್ಲ. ಅಷ್ಟೇ ಏಕೆ, ಕಳೆದ ಒಂದು ತಿಂಗಳಿಂದ ದೇಶಾದ್ಯಂತ ನಡೆದಿರುವ ಆರೆಂಟು ದೊಡ್ಡ ಮಟ್ಟದ ಸಮೀಕ್ಷೆಗಳಲ್ಲೂ ಬಿಜೆಪಿ ಅಥವಾ ಎನ್‌ಡಿಎ 2 ನೇ ಸ್ಥಾನದಲ್ಲಿವೆ. ಈ ನಡುವೆ ಕೇರಳ, ತಮಿಳುನಾಡು, ಆಂಧ್ರ, ಪಶ್ಚಿಮ ಬಂಗಾಳ, ಬಿಹಾರ್, ಜಾರ್ಖಂಡ್, ಉತ್ತರ ಪ್ರದೇಶ, ದೆಹಲಿ, ಪಂಜಾಬ್, ಹರಿಯಾಣಗಳಲ್ಲಿ ಬಿಜೆಪಿ ಹೆಚ್ಚುಕಡಿಮೆ ಕರಗಿಹೋಗಿದೆ.

ಅಡ್ವಾಣಿ ಗೊಂದಲ, ಫಜೀತಿಗಳು



ಭಾರತದ ಪ್ರಧಾನಿಯಾಗಲು ಅಡ್ವಾಣಿ ಯೋಗ್ಯರೆ ಎಂಬ ಸಮೀಕ್ಷೆಗಳ ಪೈಕಿ ಯಾವುದರಲ್ಲೂ ಶೇಕಡಾ ಮೂರಕ್ಕಿಂತ ಹೆಚ್ಚು ಜನ ಎಸ್ ಅಂದಿಲ್ಲ. ಕೋಮುವಾದ, ದ್ವೇಷ-ಹಿಂಸೆಯ ಸಿದ್ಧಾಂತದ ಬಿಜೆಪಿಯ ನಿಲುವು ಬದಲಿಸಿ ಅಭಿವೃದ್ಧಿಯ ಬಗ್ಗೆ ಎಷ್ಟೇ ಮಾತಾಡಿದರೂ ಭಾರತೀಯರು ಬಿಜೆಪಿಯನ್ನು ನಂಬುತ್ತಿಲ್ಲ. ಇದೇ ಸರ್ಕಸ್‌ನ ಭಾಗವಾಗಿ ಅಡ್ವಾಣಿ ಒಮ್ಮೆ ಮಹಮದಾಲಿ ಜಿನ್ನಾ ಬಗ್ಗೆ ಹೊಗಳಿಕೆಯ ಮಾತಾಡಿ ಹಾರ್ಡ್‌ಕೋರ್ ಆರೆಸ್ಸೆಸ್ಸಿಗರು ಸಿಟ್ಟಿಗೆದ್ದಿದ್ದರು. ಈಗ ತಾನೆ ಏನು? ಫಿಲಿಬಿಟ್‌ನಲ್ಲಿ ವರುಣ್ ಗಾಂಧಿ ಮುಸ್ಲಿಮರ ಕೈಕತ್ತರಿಸಿ ಅಂದಾಗ ಮೊದಲು ಅಡ್ವಾಣಿ ವಿವಾದದಿಂದ ದೂರ ನಿಂತರು. ಆಮೇಲೆ ವರುಣ್ ಪರ ಮಾತನಾಡಿದರು. ಯಾವ ನಿಲುವು ತೆಗೆದುಕೊಂಡರೆ ಲಾಭ, ಇನ್ಯಾವುದರಿಂದ ನಷ್ಟ ಎಂಬ ಹೇಸಿಗೆಯ ಲೆಕ್ಕಾಚಾರದಿಂದ ಹುಟ್ಟಿರುವ ಗೊಂದಲ ಅದು.

ಕಾಂಗ್ರೆಸ್ ತಿರುಗೇಟುಗಳು

ಟೆರರಿಸಂ ಬಗ್ಗೆ ಕಾಂಗ್ರೆಸ್ ಮೃದು ಧೋರಣೆ ತಾಳಿದೆ ಎಂದು ಅಡ್ವಾಣಿ ಎಷ್ಟೇ ಚೀರಿಕೊಂಡರೂ ವಾಸ್ತವ ಹಾಗಿಲ್ಲ.

ಮುಂಬೈ ದಾಳಿಯಾದ ನಂತರ ಕೇಂದ್ರ ಗೃಹ ಸಚಿವ ಶಿವರಾಜ್ ಪಾಟೀಲ್, ಮಹಾರಾಷ್ಟ್ರ ಮುಖ್ಯಮಂತ್ರಿ ವಿಲಾಸರಾವ್ ದೇಶಮುಖ್‌ರಿಂದ ರಾಜೀನಾಮೆ ಕೊಡಿಸಿತ್ತು ಕಾಂಗ್ರೆಸ್. ಆದರೆ ಕಂದಹಾರ್ ವಿಮಾನ ಹೈಜಾಕ್ ಪ್ರಕರಣದಲ್ಲಿ ಆಗ ಗೃಹಮಂತ್ರಿಯಾಗಿದ್ದ ಅಡ್ವಾಣಿಯೇ ಟೆರರಿಸ್ಟರೊಂದಿಗೆ ರಾಜಿಯಾಗಿದ್ದರಲ್ಲದೇ ತಮ್ಮ ಹುದ್ದೆಗೆ ಮತ್ತು ರಾಜೀನಾಮೆ ನೀಡಿರಲಿಲ್ಲ. ಅಡ್ವಾಣಿ ಗೃಹಮಂತ್ರಿಯಾಗಿದ್ದಾಗಲೇ ಭಯೋತ್ಪಾದನೆ ಕುರಿತ ಶ್ವೇತಪತ್ರ ಪ್ರಕಟಿಸುವುದಾಗಿ ಹೇಳಿದ್ದಾರಾದರೂ ಅದೆಂದೂ ಹೊರಬರಲಿಲ್ಲ. ಮಾತ್ರವಲ್ಲ, ಈತ ಗೃಹಮಂತ್ರಿ ಆಗಿದ್ದಾಗಲೇ ಪಾರ್ಲಿಮೆಂಟ್ ಮೇಲೆ ದಾಳಿ ಸಂಭವಿಸಿತ್ತು. ಈತ ಅಧಿಕಾರದಲ್ಲಿದ್ದಾಗಲೇ ಅಮೆರಿಕದ FBI ಗೂಢಚರ್ಯೆ ಸಂಸ್ಥೆಗೆ ದೆಹಲಿಯಲ್ಲಿ ಕಚೇರಿ ತೆಗೆಯಲು ಅನುಮತಿ ಕೊಟ್ಟಿದ್ದರು. ಆಗಲೇ ಗುಜರಾತ್ ನರಮೇಧ, ಅಕ್ಷರಧಾಮ ದಾಳಿಗಳಾದವು.

ಈಗ ಉಕ್ಕಿನ ಮನುಷ್ಯ ಎಂದು ಬಿಜೆಪಿಗಳಿಂದ ಬಿಂಬಿಸಲಾಗುತ್ತಿರುವ ಅಡ್ವಾಣಿ ನಿಜಕ್ಕೂ ಉಕ್ಕಿನ ಮನುಷ್ಯನಲ್ಲ ಬದಲಿಗೆ ತಗಡು ನಾಯಕ ಎಂಬುದಕ್ಕೆ ಇವೆಲ್ಲಾ ಉದಾಹರಣೆಗಳಾಗಿವೆ.

ಕಾಂಗ್ರೆಸ್ ಈ ಎಲ್ಲಾ ಅಂಶಗಳನ್ನು ಎತ್ತಿ ತೋರಿಸುತ್ತಾ ಅಡ್ವಾಣಿಯ ಮರ್ಯಾದೆ ಕಳೆಯುತ್ತಿದೆ.

ಬಿಜೆಪಿ ಮತ್ತು ಕಾಂಗ್ರೆಸ್ ನಡುವಿನ ವ್ಯತ್ಯಾಸ

ಮನಮೋಹನ್ ಸಿಂಗ್ ದುರ್ಬಲ ಪ್ರಧಾನಿಯೆಂತಲೂ, ಅವರು ಕಾಂಗ್ರೆಸ್ ಹೈಕಮಾಂಡ್ ನಾಯಕಿ ಸೋನಿಯಾರ ಕೈಗೊಂಬೆ ಎಂತಲೂ ಅಡ್ವಾಣಿ ಮತ್ತು ನರೇಂದ್ರ ಮೋದಿ ಆರೋಪಿಸುತ್ತಿದ್ದಾರೆ.

ಈ ಬಗ್ಗೆ ಚರ್ಚಿಸಲು ಒಂದೆರಡು ಸ್ವಾರಸ್ಯಕರ ವಿಚಾರಗಳಿವೆ.

ಕಾಂಗ್ರೆಸ್‌ಗಿದ್ದಂತೆಯೇ ಬಿಜೆಪಿಗೂ ಒಂದು ಹೈಕಮಾಂಡ್ ಇದೆ. ಅದು ಆರ್‌ಎಸ್‌ಎಸ್. ಕರ್ನಾಟಕದಲ್ಲೂ ಮುಖ್ಯಮಂತ್ರಿ ಯಡಿಯೂರಪ್ಪ ಬಿಕ್ಕಟ್ಟು ಬಂದಾಗೆಲ್ಲಾ ಚಾಮರಾಜಪೇಟೆಯ ಕೇಶವ ಕೃಪಾದ ಆರ್‌ಎಸ್‌ಎಸ್ ಕೇಂದ್ರ ಕಚೇರಿಗೆ ಓಡಿಹೋಗುತ್ತಾರೆ. ಜನರಿಗೆ ಮುಖ ಪರಿಚಯವೇ ಇರದ ಜಯದೇವ, ನರಹರಿ, ಸಂತೋಷ್ ಹೀಗೆ ಯಾರ್‍ಯಾರ ಮಾತನ್ನೋ ಕೇಳಿಬರುತ್ತಾರೆ.


ಹೀಗೆ ಸರ್ಕಾರಗಳನ್ನು ನಾಗಪುರ, ಕೇಶವಕೃಪಾಗಳಿಂದ ನಿಯಂತ್ರಿಸುವ ಯಾವ RSS ನಾಯಕನೂ ನೇರ ಚುನಾವಣೆಗೆ ನಿಲ್ಲುವಷ್ಟು ಧೈರ್ಯ ತೋರುವುದಿಲ್ಲ.

ಆದರೆ ಮತ್ತೊಂದೆಡೆ ಕಾಂಗ್ರೆಸ್ ಹೈಕಮಾಂಡಿನ ಸೋನಿಯಾ ಗಾಂಧಿ, ರಾಹುಲ್ ಗಾಂಧಿ, ಪ್ರಣಬ್ ಮುಖರ್ಜಿ ಮುಂತಾದವರೆಲ್ಲಾ ತಾವೇ ನೇರವಾಗಿ ಎಲೆಕ್ಷನ್‌ಗೆ ನಿಂತು ಹೋರಾಡುತ್ತಾರೆ. ಅದೇ ರೀತಿ ಅವರವರ ಪಕ್ಷದ ಒಳರಚನೆಯನುಸಾರ ಹೈಕಮಾಂಡ್ ಸ್ಥಾನದಲ್ಲಿ ನಿಂತು ಎಲ್ಲವನ್ನೂ ನಿಯಂತ್ರಿಸುತ್ತಾರೆ.

ತಮಾಷೆ ಏನೆಂದರೆ ಮನಮೋಹನ್ ಸಿಂಗ್ ಸೋನಿಯಾರ ಕೈಗೊಂಬೆ ಎನ್ನುವ ಅಡ್ವಾಣಿಯೇ ಸ್ವತಃ ಆರ್‌ಎಸ್‌ಎಸ್ ನಾಯಕ ಭಾಗವತನ ಕೈಗೊಂಬೆಯಾಗಿದ್ದಾರೆ!

ಅಡ್ವಾಣಿಯೂ ಮುದುಕ ಎಂದ ಮೋದಿ

ಕಾಂಗ್ರೆಸ್ ಈಗ ಮುದುಕರ ಪಾರ್ಟಿ ಎಂದು ಯಡಿಯೂರಪ್ಪನಾದಿಯಾಗಿ ನರೇಂದ್ರ ಮೋದಿಯತನಕ ಆಡಿಕೊಳ್ಳುತ್ತಿದ್ದಾರಲ್ಲವೆ. ಇದಕ್ಕೆ ಉತ್ತರವಾಗಿ ಪ್ರಿಯಾಂಕ ಗಾಂಧಿ 'ಹಾಗಾದರೆ ಅಡ್ವಾಣಿ ಇನ್ನೂ ಯುವಕರಾ?' ಎಂದು ಗೇಲಿ ಮಾಡಿದ್ದರು.



ಇಲ್ಲೊಂದು ಒಳರಾಜಕೀಯವಿದೆ. ಕಾಂಗ್ರೆಸ್ ಬಗ್ಗೆ ತಾನು ಈ ಕಾಮೆಂಟ್ ಮಾಡಿದರೆ ಅದಕ್ಕೆ ಪ್ರತಿಯಾಗಿ ಕಾಂಗ್ರೆಸಿಗಳು ಬಿಜೆಪಿಯ ಅಡ್ವಾಣಿ ಬಗ್ಗೆ ಗೇಲಿ ಮಾಡಬಲ್ಲರೆಂಬುದು ನರೇಂದ್ರ ಮೋದಿಗೆ ಗೊತ್ತಿತ್ತು ಮತ್ತು ಅಂತಾ ಸಂದರ್ಭ ಸೃಷ್ಟಿಸುವ ಮೂಲಕ ಬಿಜೆಪಿಯೊಳಗಿನ ಅಡ್ವಾಣಿ ನಾಯಕತ್ವದ ಬುಡವನ್ನೇ ಮೋದಿ ಅಲ್ಲಾಡಿಸುತ್ತಿದ್ದಾರೆ ಎನ್ನಲಾಗಿದೆ.

ಚುನಾವಣೆಯ ಸಮಯದಲ್ಲಿ ಜನರೆದಿರು ಮಂಡಿಸಬೇಕಾದ ವಿಚಾರಗಳು ಏನಾಗಿರಬೇಕೆಂಬ ಬಗ್ಗೆಯೇ ಬಿಜೆಪಿ ಗೊಂದಲಕ್ಕೊಳಗಾಗಿದೆ. ಸ್ಥಿರ ಸರ್ಕಾರದ ವಿಚಾರ ತೆಗೆದರೆ ಕಾಂಗ್ರೆಸ್ ನೇತೃತ್ವದ ಯುಪಿಎ ಕಳೆದ ಐದು ವರ್ಷಗಳಿಂದ ಸ್ಥಿರ ಸರ್ಕಾರವನ್ನೇ ಕೊಟ್ಟಿದೆ. ಹಿಂದೂ ಕೋಮುವಾದ ಜನರಿಗೆ ಈಗ ಕಿರಿಕಿರಿ ಉಂಟು ಮಾಡುತ್ತಿರುವ ಅಜೆಂಡಾ ಆಗಿ ಹೋಗಿದೆ. ಟೆರರಿಸಂ ಮಾತನಾಡಲು ಹೋದರೆ ಹೊರಗಿನ ಭಯೋತ್ಪಾದಕರೊಂದಿಗೆ ಅಡ್ವಾಣಿ ರಾಜಿ ಮಾಡಿಕೊಂಡಿದ್ದು ಹಾಗೂ ದೇಶದೊಳಗೆ ಸಂಘ ಪರಿವಾರವೇ ಭಯೋತ್ಪಾದನೆ ನಡೆಸುತ್ತಿರುವುದನ್ನು ಜನ ನೋಡುತ್ತಿದ್ದಾರೆ. ಈಗ ನೋಡಿದರೆ ಎಲ್ಲಾ ಸಮೀಕ್ಷೆಗಳು ಬಿಜೆಪಿಗೆ ನಿರಾಶದಾಯಕದಾಗಿವೆ.

ಭಾರತ ದೇಶದ ಜನ ಅಡ್ವಾಣಿಗೆ ಗುಡ್‌ಬೈ ಹೇಳುವ ನಿರ್ಧಾರ ಮಾಡಿದಂತಿದೆ. ■



ಅಡ್ವಾಣಿ ಗುಡ್ ಬೈ!

■ ಪಾರ್ವತೀಶ

■ ಸಮೀಕ್ಷೆಗಳತ್ತ ಒಂದು ನೋಟ

ಇದುವರೆಗೂ ನಡೆದಿರುವ ಒಟ್ಟು 19 ದೊಡ್ಡ ಮಟ್ಟದ ಅಖಿಲ ಭಾರತ ಸಮೀಕ್ಷೆಗಳ ಒಂದು ಸಂಗ್ರಹ ನೋಟ ಇಲ್ಲಿದೆ. ದೇಶದ ಪ್ರಮುಖ ಸುದ್ದಿ ಮಾಧ್ಯಮಗಳು ನಡೆಸಿರುವ ಈ ಜನಾಭಿಪ್ರಾಯ ಸಂಗ್ರಹದ ಯಾವೊಂದರಲ್ಲೂ ಬಿಜೆಪಿ ಹಾಗೂ ಎನ್‌ಡಿಎ ಮೈತ್ರಿಕೂಟ ಮೊದಲ ಸ್ಥಾನದಲ್ಲಿಲ್ಲ, ಅದರ ವಿವರಗಳು ಹೀಗಿವೆ.

ಪಕ್ಷ-ಮೈತ್ರಿಕೂಟ	ಎನ್‌ಡಿ ಟಿವಿ	ಸಿಎನ್‌ಎನ್/ ಐಬಿಎನ್	ಸ್ಟಾರ್ ನ್ಯೂಸ್	ಆಜ್‌ತಕ್ ಟಿವಿ	ಇಂಡಿಯಾ ಟಿವಿ	ಟೈಮ್ಸ್ ಆಫ್ ಇಂಡಿಯಾ	ಡಿಎನ್‌ಎ	ದಿ ವೀಕ್	ಎನ್‌ಡಿ ಟಿವಿ 2ನೇ ಸಮೀಕ್ಷೆ
ಕಾಂಗ್ರೆಸ್-ಯುಪಿಎ	230	215-235	203	190-200	178	198	201	234	205-215
ಬಿಜೆಪಿ-ಎನ್‌ಡಿಎ	190	165-186	191	170-180	187	176	180	186	160-170
ತೃತೀಯ ರಂಗ (ಕಮ್ಯುನಿಸ್ಟ್-ಜೆಡಿಎಸ್-ತೆಲುಗು ದೇಶಂ ಇತ್ಯಾದಿ)	110	120-150	104	165-175	178	65	60	90	120-130
ನಾಲ್ಕನೇ ರಂಗ (ಆರ್‌ಜೆಡಿ-ಎಸ್‌ಪಿ ಇತ್ಯಾದಿ)	ನೀಡಿಲ್ಲ		39	-		60	50	30	30-35

ಈ ಎಲ್ಲಾ ಸಮೀಕ್ಷೆಗಳಲ್ಲೂ ಎದ್ದು ಕಾಣುವ ಪ್ರಮುಖ ಅಂಶ ಯಾವುದು ನೋಡಿ!

ಈ ಒಂಭತ್ತು ಸಮೀಕ್ಷೆಗಳ ಪೈಕಿ ಏಳು ಸಮೀಕ್ಷೆಗಳು ಕಾಂಗ್ರೆಸ್ ಮೈತ್ರಿಕೂಟ ಇನ್ನೂರು ಸೀಟುಗಳ ಗಡಿ ದಾಟಲಿದೆ ಎನ್ನುತ್ತಿದೆ. ಆದರೆ ಒಂದೇ ಒಂದು ಸಮೀಕ್ಷೆಯೂ ಬಿಜೆಪಿ ಮೈತ್ರಿಕೂಟ ಇನ್ನೂರು ದಾಟುತ್ತದೆ ಎಂದಿಲ್ಲ. ಅದು ನೂರಾ ಎಂಭತ್ತು ಗೆದ್ದರೆ ಅದೇ ಜಾಸ್ತಿ ಎನ್ನುತ್ತಿವೆ. ಅಷ್ಟೇ ಅಲ್ಲದೆ ಚುನಾವಣಾ ಫಲಿತಾಂಶ ಬಂದ ಮೇಲೆ ಬಿಜೆಪಿ ನಾಯಕತ್ವದ ಎನ್‌ಡಿಎ ಮೈತ್ರಿ ಪಕ್ಷಗಳು ಹೊರಬಂದು ಅಡ್ವಾಣಿಗೆ ಗುಡ್ ಬೈ ಹೇಳಿ ಇನ್ನಿತರ ಮೈತ್ರಿಕೂಟಕ್ಕೆ ಸೇರಿದರೂ ಆಶ್ಚರ್ಯವೇನಿಲ್ಲ. ಅಡ್ವಾಣಿ ಪ್ರಧಾನಿ ಅಭ್ಯರ್ಥಿ ಆಗಿರಬಹುದು, ಆದರೆ ಪ್ರಧಾನಿಯಾಗಲಾರರು.



ಶಿವಮೊಗ್ಗ: ಹಣದ ಮಳೆ ಹೆಂಡದ ಹೊಳೆ

ರಾಘು ಬಜೆಟ್ 100 ಕೋಟಿ

ಪ್ರತಿ ಸ್ತ್ರೀಶಕ್ತಿ ಸಂಘಕ್ಕೆ ತಲಾ ಐದು ಸಾವಿರ ರೂಪಾಯಿಯ ಗರಿಗರಿ ನೋಟು. ಯುವಕ ಸಂಘವಾದರೆ ಒಂದೇ ಇಪ್ಪತ್ತೈದು ಸಾವಿರ ಕ್ಯಾಷು ಮತ್ತು ಅದರ ಸು ಸಕ್ರಿಯ ಲೀಡರುಗಳಿಗೆ ಮತ್ತೆ ತಲಾ ಐದು ಸಾವಿರದಂತೆ ಸೀಕ್ರೆಟ್ ಅಮೌಂಟು. ಗ್ರಾಮ ಪಂಚಾಯ್ತಿ ಸದಸ್ಯನಿಗೆ ಕನಿಷ್ಠ ಒಂದು ಲಕ್ಷ ರೂಪಾಯಿಗಳ ಗಂಟು ಮತ್ತು ತಾಲ್ಲೂಕು ಪಂಚಾಯ್ತಿ ಸದಸ್ಯನೊಬ್ಬನಿಗೆ 25 ಲಕ್ಷದ ನೋಟಿನ ಕಟ್ಟು– ಇದು ಶಿವಮೊಗ್ಗ ಲೋಕಸಭಾ ಕ್ಷೇತ್ರದಲ್ಲಿ ಮುಖ್ಯಮಂತ್ರಿ ಪುತ್ರ ರಾಘವೇಂದ್ರನ ಪರವಾಗಿ ಚೇಲಾಗಳು ಹಂಚುತ್ತಿರುವ ರೊಕ್ಕದ ಸಮಾದರಿಗಳು.

ಒಂದು ಸರ್ಕಾರ, ಓರ್ವ ಮುಖ್ಯಮಂತ್ರಿ ಆತನ ಸೋಕಾಲ್ಡ್ ಧರ್ಮಾಧಾರಿತ ಸೇರಿಕೊಂಡು ಈ ಪಾಟ ಲಜ್ಜೆಗೆಟ್ಟು ಖರೀದಿಗೆ ನಿಂತದ್ದು ಬಹುಶಃ ಎಂ. ಕೃಷ್ಣ ಬಂಗಾರಪ್ಪ ಪಟೇಲ್, ಯಂಥ ಮುಖ್ಯಮಂತ್ರಿಗಳ ಕಾಲ ನಡೆದದ್ದಿಲ್ಲ. ಮುಖ್ಯಮಂತ್ರಿ ಯಡ್ಡಿ ರಾಘವೇಂದ್ರನ ವಿರುದ್ಧ ಕಾಂಗ್ರೆಸ್ ರ್ಥಿಯಾಗಿರುವ ಬಂಗಾರಪ್ಪ ಯಕಶ್ಚಿತ್ ರ್ಯಕರ್ತನೊಬ್ಬನಿಗೆ ಅರ್ಧ ಕಪ್ ಮನ್ನೂ ಕುಡಿಸುವಷ್ಟು ಶಕ್ತರಲ್ಲ. ಅವರ ಬ್ಬರೂ ರಾಜಕೀಯವಾಗಿ ನಿರುದ್ಯೋಗಿ ಕಾಂಗ್ರೆಸ್ಸಿನಿಂದ ಬಂದ ಪಾರ್ಟಿ ಫಂಡ್ 'ಬಂ' ಕೈ ಸೇರಿದೆಯಾ ಅಥವಾ ತ್ತಾದರೂ ಬರುತ್ತಾ? ಎಂಬುದು ಕೂಡ ರಿಗೂ ಗೊತ್ತಿಲ್ಲ. ಎಲೆಕ್ಷನ್ ಗೆಂದಾಗಲಿ, ಪ್ರಚಾರಕ್ಕೆಂದಾಗಲಿ ಕ ಯಾರಿಗೂ ನಯಾಪೈಸೆಯನ್ನೂ ಡದ, ನೆಟ್ಟಗೆ ಪ್ರಚಾರಕ್ಕೇ ಇಳಿಯದ, ಖರ್ಚಿಗೇ ತತ್ವಾರಪಡುವ ಬಂಗಾರಪ್ಪನವರ ದು ಮುಖ್ಯಮಂತ್ರಿ ಯಡ್ಡಿ ಮತ್ತವನ ಚತಿಗೆ ಈಪಾಟ ದುಡ್ಡಿನ ಮಳೆ ವ ಅಗತ್ಯವಾದರೂ ಏನಿದೆ?

ಹಣದ ಸುರಿಮಳೆ

ಶಿವಮೊಗ್ಗ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಎಂಟು ವಿಧಾನಸಭಾ ಕ್ಷೇತ್ರಗಳ ಪೈಕಿ ಸ್ಸಿನ ಭದ್ರಾವತಿಯ ಸಂಗಮೇಶ್ ಮತ್ತು ಹಳ್ಳಿಯ ತಿಮ್ಮಪ್ಪ ರತ್ನಾಕರರನ್ನು ಹೊರತುಪಡಿಸಿದರೆ ಮಿಕ್ಕ ಆರೂ ಕ್ಷೇತ್ರಗಳಲ್ಲಿ ಬಿಜೆಪಿ. ಸೊರಬದ ಹರತಾಳು ಹಾಲಪ್ಪ ಮತ್ತು ಸಾಗರದ ವರು ಗೋಪಾಲಕೃಷ್ಣ ಇಬ್ಬರೂ ಬಂಗಾರಪ್ಪನವರದೇ ವು ಬಿಜೆಪಿ ಶಾಸಕರು. ಶಿವಮೊಗ್ಗ ನಗರಕ್ಕೆ ಮಂತ್ರಿ ಪ್ಪ, ಶಿಕಾರಿಪುರಕ್ಕೆ ಸ್ವತಃ ಯಡಿಯೂರಪ್ಪ ಮತ್ತು ಮೊಗ್ಗ ಗ್ರಾಮಾಂತರಕ್ಕೆ ಬಿಜೆಪಿಯದೇ ಕುಮಾರಸ್ವಾಮಿ ಶಾಸಕರಾಗಿದ್ದೂ ಮುಖ್ಯಮಂತ್ರಿ ಮಗ ರಾಘವೇಂದ್ರನನ್ನು ಗೆಲ್ಲಿಸಲು ಈ ಪಾಟ ದುಡ್ಡು ಸುರಿಯಬೇಕಾ?

ಅಷ್ಟೇ ಏಕೆ, ಶಿವಮೊಗ್ಗ ಜಿಲ್ಲಾ ಪಂಚಾಯ್ತಿಯಲ್ಲೂ ಬಿಜೆಪಿಯದೇ ಪಾರುಪತ್ಯವಿದೆ. ಬಿಜೆಪಿಯದೇ ಸರ್ಕಾರ ಜಿಲ್ಲಾಡಳಿತ, ಪೊಲೀಸು, ಅಬಕಾರಿ ಎಲ್ಲವೂ ಅವರ ಕೈಯಲ್ಲಿದ್ದೂ ಹಿಂದೆಂದೂ ಕಂಡರಿಯದ ಮಟ್ಟದ ಹಣದ ಹೊಳೆ ಹರಿಸುತ್ತಿರುವ ಮುಖ್ಯಮಂತ್ರಿಗೆ ತನ್ನ ಮಗನನ್ನು ಬಂಗಾರಪ್ಪನವರಂಥ ಸೋತು ಸುಣ್ಣವಾಗಿರುವ ಮುತ್ಸದ್ದಿಯೊಬ್ಬರ ಮುಂದೆ ಗೆಲ್ಲಿಸುವುದು ಏಕೆ ಕಷ್ಟವಾಗುತ್ತಿದೆ?









ಇದು ಇಡೀ ಶಿವಮೊಗ್ಗ ಲೋಕಸಭಾ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ತಲೆ ಎತ್ತಿರುವ ಮೂಲ ಪ್ರಶ್ನೆ. ಬಂಗಾರಪ್ಪನವರ ವಿರುದ್ಧ ಜೆಡಿಎಸ್ ತನ್ನ ಅಭ್ಯರ್ಥಿ ಹಾಕಿಲ್ಲ. ಬಿಎಸ್‌ಪಿಗೆ ಅಭ್ಯರ್ಥಿಯೇ ದಿಕ್ಕಿಲ್ಲ. ಒಂದಿಬ್ಬರು ಪಕ್ಷೇತರರಿದ್ದಾರಾದರೂ ಲೆಕ್ಕಕ್ಕಿಲ್ಲ. ಹಣಾಹಣಿ ಅಂತಿದ್ದರೆ ಅದು ಯಡ್ಡಿ ಮಗ ರಾಘವೇಂದ್ರ ಮತ್ತು ಬಂಗಾರಪ್ಪ ವಿರುದ್ಧವೇ ಹೊರತು ಇಲ್ಲಿ ಮೂರನೇ ವ್ಯಕ್ತಿ-ಶಕ್ತಿ ಯಾವುದೂ ಇಲ್ಲ. ಹಾಗಿದ್ದೂ ಬಂಗಾರಪ್ಪನವರನ್ನು ಸೋಲಿಸುವುದು ಮುಖ್ಯಮಂತ್ರಿ ಯಡ್ಡಿಗೇಕೆ ಇಷ್ಟೊಂದು ಕಷ್ಟವಾಗುತ್ತಿದೆ?

ತಲಾ ಐಡಿಗೆ 2000...!

ತೀರ ಇತ್ತೀಚೆಗೆ ಯಡ್ಡಿ ಗ್ಯಾಂಗ್ ಖರೀದಿಸುತ್ತಿರುವ ವಿರೋಧಿ ಕಾರ್ಯಕರ್ತರು ಮತ್ತು ಮತದಾರರ ಗುರುತಿನ ಚೀಟಿಯೇ ಈ ಪ್ರಶ್ನೆಗೆ ಉತ್ತರದಂತಿದೆ. ಎಲ್ಲೆಲ್ಲಿ ಬಿಜೆಪಿಗೆ ಓಟು ಬರುವುದಿಲ್ಲವೋ ಅಂಥ ಹಳ್ಳಿಗಳಲ್ಲಿ ಮತದಾರರ ಗುರುತಿನ ಚೀಟಿಯೊಂದರ ಬೆಲೆ ಎರಡು ಸಾವಿರ ರೂಪಾಯಿ. ಇಲ್ಲಿಗೆ ಎಂಟು ದಿನದ ಹಿಂದಷ್ಟೇ ಆಯನೂರಿನ ಕಾಂಗ್ರೆಸ್ ನಾಯಕ ಛತ್ರಪತಿ ನಾಯ್ಕ್ ಎಂಬಾತ ಅಲ್ಲಿನ ಲಂಬಾಣಿ ತಾಂಡಾದಲ್ಲಿ ಮತದಾರರ ಗುರುತಿನ ಚೀಟಿಯ ಖರೀದಿಗಿಳಿದಿದ್ದ ಇಬ್ಬರು ಬಿಜೆಪಿ ನಾಯಕರನ್ನು ಪೊಲೀಸರಿಗೆ ಹಿಡಿದುಕೊಟ್ಟರೆ, ಪೊಲೀಸರು ನೆಪಕ್ಕೂ ಖರೀದಿಗಿಳಿದಿದ್ದ ಬಿಜೆಪಿ ಧೂರ್ತರನ್ನು ಮುಟ್ಟಲಿಲ್ಲ. ಅಂಥದೊಂದು ಗುರುತಿನ ಚೀಟಿಗೆ ಬಿಜೆಪಿ ನಾಯಕರು ಎರಡು ಸಾವಿರ ರೂಪಾಯಿಯ ಬೆಲೆ ಕೊಡುತ್ತಾರೆ. ಈಗಾಗಲೇ ಶಿವಮೊಗ್ಗದ ಬೇರೆಬೇರೆ ಭಾಗಗಳಲ್ಲಿ ಇಂಥ ಇಪ್ಪತ್ತು ಸಾವಿರಕ್ಕೂ ಅಧಿಕ ಗುರುತಿನ ಚೀಟಿಗಳನ್ನು ಬಿಜೆಪಿ ನಾಯಕರು ಖರೀದಿಸಿದ್ದಾರೆ.

■ [illegible]

ಹೀಗೆ ತಮ್ಮನ್ನು ತಾವೇ ಮಾರಿಕೊಂಡ ನಿರ್ಗತಿಕ ಮತದಾರರ ಕತೆ ಒತ್ತಟ್ಟಿಗಿರಲಿ, ಅನುಕೂಲಸ್ಥ ಕಾಂಗ್ರೆಸ್ಸಿನ ಜಿಲ್ಲಾ ಪಂಚಾಯ್ತಿ ಸದಸ್ಯರುಗಳೇ ಯಡ್ಡಿಮಗನ ದುಡ್ಡಿಗೆ






ಸ್ವಯಂಬಕರಿಯಾಗುತ್ತಿದ್ದಾರೆ. ಈ ಪೈಕಿ ದೊಡ್ಡ ಹೆಸರೆಂದರೆ ಸಾಗರದ ಕಾಂಗ್ರೆಸ್ ಜಿ.ಪಂ. ಸದಸ್ಯ ಮತ್ತು ಲೋಹಿಯಾ ಸಮಾಜವಾದಿ ಬಿ.ಆರ್. ಜಯಂತ್!

ಮಾತೆತ್ತಿದರೆ ಲೋಹಿಯಾವಾದದ ಡೈಲಾಗ್ ಹೊಡೆಯುವ ಬಿ.ಆರ್. ಜಯಂತ್‌ನ ಬಣ್ಣ ಆತನ ಮರಣಕ್ಕೆ ಮೊದಲೇ ಕಳಚಿಬಿದ್ದಿದೆ. ಜೊತೆಗೆ ಹೊಳಲೂರು ಜಿಲ್ಲಾ ಪಂಚಾಯ್ತಿ ಸದಸ್ಯ ಕಾಂಗ್ರೆಸ್ಸಿನ ಬಸವರಾಜಪ್ಪ ಆಸೋಡಿಯ ಕಾಂಗ್ರೆಸ್ ಜಿ.ಪಂ. ಸದಸ್ಯೆ ಭಾಗ್ಯಮ್ಮ, ಸೊರಬದ ಸಮಾಜವಾದಿ ಪಕ್ಷದ ಜಿ.ಪಂ. ಸದಸ್ಯೆ ದೇವಕಿ ಪಾಣಿರಾಜಪ್ಪ, ರಿಪ್ಪನ್‌ಪೇಟೆಯ ಮತ್ತೊಬ್ಬ ಸಮಾಜವಾದಿ ಜಿ.ಪಂ. ಸದಸ್ಯೆ ನಾಗರತ್ನ, ಭದ್ರಾವತಿಯ ಆನವೇರಿಯ

▶▶▶ 13



ದುಡ್ಡು ಯಡ್ಡಿ ಮಗಂದು ಗೆಲುವು ಬಂಗಾರಪ್ಪಂದು....

ಒಂದು ಲೆಕ್ಕಾಚಾರದ ಪ್ರಕಾರ ಯಡ್ಡಿ ಮಗ ರಾಘು ಈಗಾಗಲೇ ಶಿವಮೊಗ್ಗದಲ್ಲಿ ಸುರಿದ ದುಡ್ಡಿನ ಮೊತ್ತ 30 ಕೋಟಿಯನ್ನು ಮೀರಿದೆ. ಅದೂ ಒಂದೇ ವಾರಕ್ಕೆ 30 ಕೋಟಿ!

ಇನ್ನು ಚುನಾವಣೆಯ ಹೊತ್ತಿಗದು ಖಂಡಿತಾ 100 ಕೋಟಿಯನ್ನು ಮುಟ್ಟುತ್ತದೆ. 'ನೋಡ್ರಾ ಇರಿ, ಈ ಸಾರಿ ಕಾಂಗ್ರೆಸ್ಸಿನವರಿಗೆ ಓಟು ಕೇಳೋಕ್ಕೆ ಕಾರ್ಯಕರ್ತರಿರಲಿ, ನಾಯಕರೂ ಸಿಕ್ಕದ ಹಾಗೇ ಮಾಡಿಬಿಡ್ತಿನಿ' ಎಂದು ಮುಖ್ಯಮಂತ್ರಿಯೇ ಬಿಜೆಪಿ ಕಾರ್ಯಕರ್ತರ ಸಭೆಯಲ್ಲಿ ಬಹಿರಂಗವಾಗಿ ಹೂಂಕರಿಸಿದ್ದಾರೆ. ಇದರರ್ಥ ಸಾಧ್ಯವಾದಷ್ಟು ವಿರೋಧ ಪಕ್ಷಗಳ ನಾಯಕರು ಮತ್ತು ಕಾರ್ಯಕರ್ತರನ್ನು ಖರೀದಿಸುವುದು ತಾನೆ?

ಮುಖ್ಯಮಂತ್ರಿಗಳ ಪರ ನಿಂತು ಶಿವಮೊಗ್ಗದ ಬಹುತೇಕ ಪತ್ರಕರ್ತರಿಗೆ ಗಾಳ ಹಾಕುತ್ತಿರುವುದು ವಕೀಲನೊಬ್ಬ ಅದೂ ಯಾವ ಮಟ್ಟಕ್ಕೆಂದರೆ ಪುಡಿ ಪತ್ರಕರ್ತರಿಗಾದರೆ ಕನಿಷ್ಠ 25 ಸಾವಿರ ಮತ್ತು ರಾಜ್ಯ ಮಟ್ಟದ ವರದಿಗಾರರಿಗೆ ಐದು ಲಕ್ಷದಿಂದ ಹದಿನೈದು ಲಕ್ಷದ ತನಕ!

ಮಂಗಳೂರು ಮೂಲದ ದಿನಪತ್ರಿಕೆಯೊಂದರ ವರದಿಗಾರ, ಲೋಕಲ್ ಆರೆಸ್ಸೆಸ್ ದೈನಿಕವೊಂದರ ಚೆಡ್ಡಿ ರಿಪೋರ್ಟರ್ ಮತ್ತು 'ಟೈಮ್ಸ್' ಬಳಗದ ಮತ್ತೊಬ್ಬ ಜನಿವಾರ ಧಾರಿ ರಿಪೋರ್ಟರ್ ಹೀಗೆ ಯಾರೆಲ್ಲ ನಿಷ್ಪಕ್ಷಪಾತವಾಗಿ ಬಿಜೆಪಿ ದುರಾಚಾರವನ್ನು ಬಯಲಿಗೆಳೆಯಬೇಕಿತ್ತೋ ಅವರೇ ಯಡ್ಡಿ ಮಗನ ಜೊತೆ ಬಿಜೆಪಿ ಪರವಾಗಿ ಶಿವಮೊಗ್ಗದ ಹೊಸಮನೆ ಏರಿಯಾದಲ್ಲಿ ಪಾದಯಾತ್ರೆ ಮಾಡಿ ಪ್ರಚಾರಕ್ಕಿಳಿಯುತ್ತಾರೆ.

ಪತ್ರಕರ್ತರೇ ಯಡ್ಡಿ ಮಗನ ಜೊತೆ ಪ್ರಚಾರಕ್ಕಿಳಿಯುತ್ತಾರೆಂದರೆ ಇನ್ನು ಅವರ ವರದಿಗಳು ಹೆಂಗಿರಬೇಡ?

ಬಂಗಾರಪ್ಪನವರಿಗೆ ವಯಸ್ಸಾಗಿದೆ, ಸಿಡುಕುತ್ತಾರೆ, ಕಾರ್ಯಕರ್ತರೇ ಇಲ್ಲ; ಇತ್ಯಾದಿ ಅಪಪ್ರಚಾರ ವರದಿಗಳೇ ಶಿವಮೊಗ್ಗದ ಲೋಕಲ್ ಪತ್ರಿಕೆಗಳಲ್ಲಿ ಇಟ್ಯಾಡುತ್ತವೆ. ಯಡ್ಡಿ ಮಗ ನಿಂತಿದ್ದು, ನಡೆದದ್ದು, ನಕ್ಕಿದ್ದು, ಕಕ್ಕಿದ್ದು ಎಲ್ಲವೂ ಇಂಥ ಪತ್ರಿಕೆಗಳಲ್ಲಿ ಪರಮಾನ್ನವೆ. ಆದರೆ ಶಿವಮೊಗ್ಗದ ವಾಸ್ತವವೇ ಬೇರೆಯಿದೆ. ಯಡ್ಡಿ ಮಕ್ಕಳ ಅಟ್ಟಹಾಸ, ದುಡ್ಡಿನ ದೌಲತ್ತು, ಹೆಂಡದ ದುರಾಚಾರವನ್ನು ಕಂಡ ಜನ ಬಿಜೆಪಿಗೇ ತಿರುಗಿಬಿದ್ದಿದ್ದಾರೆ. ಅಷ್ಟೇ ಏಕೆ, ನಿಷ್ಠಾವಂತ ಬಿಜೆಪಿ ಕಾರ್ಯಕರ್ತರೇ ಯಡ್ಡಿ ಆರ್ಭಟದ ವಿರುದ್ಧ ಶಾಪ ಹಾಕುತ್ತಾರೆ.

ಯಡ್ಡಿ ಗ್ಯಾಂಗ್ ಏನೇ ಲಗಾಟ ಹಾಕಿ, ಅದೆಷ್ಟೋ ದುಡ್ಡಿನ ಹೊಳೆ ಹರಿಸಿದರೂ ಇಡಿ ಜಿಲ್ಲೆಯ ಈಡಿಗರು ಬಂಗಾರಪ್ಪ ಪರ ಒಕ್ಕೊರಲಿನ ನಿರ್ಧಾರ ಮಾಡಿದ್ದಾಗಿದೆ. ಎರಡೂ ಮುಕ್ಕಾಲು ಲಕ್ಷದಷ್ಟಿರುವ ಈಡಿಗರು, ಒಂದು ಲಕ್ಷದಷ್ಟು ಒಕ್ಕಲಿಗರು, ಸರಿಸುಮಾರು ಎರಡು ಲಕ್ಷದಷ್ಟಿರುವ ಮುಸ್ಲಿಂ ಮತ್ತು ಕ್ರಿಶ್ಚಿಯನ್ ಮತಗಳಲ್ಲಿ ಒಂದೇ ಒಂದು ಓಟು ಕೂಡ ಯಡ್ಡಿ ಮಗನಿಗೆ ಗಿಟ್ಟುವುದಿಲ್ಲ. ಒಂದೂವರೆ ಲಕ್ಷದಷ್ಟಿರುವ ಲಿಂಗಾಯತರು ಮತ್ತು 70 ಸಾವಿರದಷ್ಟಿರುವ ಬ್ರಾಹ್ಮಣರಷ್ಟೇ ಬಿಜೆಪಿಗೇ ಗಟ್ಟಿ. ಈ ಪೈಕಿ ಲಿಂಗಾಯತರಲ್ಲೂ ಸಾದರ, ಪಂಚಮಸಾಲಿ, ಬಣಜಿ ಎಂಬ ವಿಭಜನೆಯಾಗಿದೆ. ಮಿಕ್ಕಂತೆ ಕುರುಬರು, ಲಂಬಾಣಿಗಳು, ದಲಿತರು, ಬೋವಿಗಳ ಪೈಕಿ ಬಹುಪಾಲು ಓಟೆಲ್ಲ ಬಂಗಾರಪ್ಪನವರಿಗೇ ಕಟ್ಟಿಟ್ಟಬುತ್ತಿ. ಈಗಾಗಲೇ ಯಡ್ಡಿ ಮಗನ ಚುನಾವಣಾ ಅಕ್ರಮದ ವಿರುದ್ಧ ಕಾಂಗ್ರೆಸ್ ನಾಯಕರು ಇಪ್ಪತ್ತಕ್ಕೂ ಅಧಿಕ ದೂರುಗಳನ್ನು ಚುನಾವಣಾ ಆಯೋಗಕ್ಕೆ ಸಲ್ಲಿಸಿದ್ದಾರೆ. ನಿಷ್ಪಕ್ಷಪಾತ ಚುನಾವಣೆಗಾಗಿ ಕೇಂದ್ರ ಮೀಸಲು ಪೊಲೀಸರು ಮತ್ತು ಕೇಂದ್ರ ಚುನಾವಣಾ ಆಯೋಗದ ಅಧಿಕಾರಿಗಳನ್ನು ನೇಮಿಸುವಂತೆ ಸ್ವತಃ ಬಂಗಾರಪ್ಪನವರೇ ಮನವಿ ಸಲ್ಲಿಸಿದ್ದಾರೆ.

ಇತ್ತೀಚೆಗೆ ಶಿವಮೊಗ್ಗದಾದ್ಯಂತ ಹಬ್ಬಿರುವ ಲೇಟೆಸ್ಟ್ ಗೇಲಿ ಏನು ಗೊತ್ತೆ?


'ದುಡ್ಡು ಯಡ್ಡಿ ಮಗಂದು, ಗೆಲುವು ಬಂಗಾರಪ್ಪಂದು' ಯಡ್ಡಿಯ ಅಧಿಕಾರದ ಸೊಕ್ಕಿಗೆ ಇದಕ್ಕಿಂತ ಬೇರೆ! ■

ಅಪ್ಪನಿಗೇ ಸುಳ್ಳು ಹೇಳಿದ್ದ ಮಗ!

ಯಡ್ಡಿ ಪುತ್ರ ರಾಘವೇಂದ್ರ, ಅಪ್ಪನಿಗೇ ಸುಳ್ಳು ಹೇಳಿ ಯಾಮಾರಿಸಿದ್ದ ಸ್ವಾರಸ್ಯಕರ ಘಟನೆಯೊಂದು ಶಿವಮೊಗ್ಗದಲ್ಲಿ ಬಹಿರಂಗಗೊಂಡಿದೆ.

ಆಚಾರ್ಯ ತುಳಸಿ ವಾಣಿಜ್ಯ ಕಾಲೇಜಿನಲ್ಲಿ ರಾಘವೇಂದ್ರ ಬಿಬಿಎಂ ಓದುತ್ತಿದ್ದ. ಕೋರ್ಸ್ ಅವಧಿ ಮುಗಿದಿದ್ದರೂ, ಎಲ್ಲ ವಿಷಯಗಳಲ್ಲಿ ಪಾಸ್ ಆಗಿರಲಿಲ್ಲ. ಹೀಗಾಗಿ ನಾಮಪತ್ರ ಸಲ್ಲಿಸುವಾಗ ಪ್ರಮಾಣಪತ್ರದಲ್ಲಿ 'ಕೋರ್ಸ್ ಮುಗಿದಿದೆ' ಎಂದಷ್ಟೇ ದಾಖಲು ಮಾಡಿದ್ದಾನೆ. ಆದರೆ ತನ್ನ ಮಗ ಹೀಗೆ ಪರೀಕ್ಷೆಯಲ್ಲಿ ಡುಮ್ಕಿ ಹೊಡೆದಿದ್ದ ವಿಷಯ ಆತನ ಅಪ್ಪ ಯಡ್ಡಿಗೇ ಗೊತ್ತಿರಲಿಲ್ಲವಂತೆ. ಕೋರ್ಸ್ ಮುಗಿದಿದೆ ಎಂದಷ್ಟೇ ಅಪ್ಪನ ಬಳಿ ಹೇಳಿದ್ದ ರಾಘವೇಂದ್ರ ತಾನು ಎಂಬಿಎ ಮಾಡುತ್ತೇನೆ ಎಂದೂ ಕೊಚ್ಚಿಕೊಂಡಿದ್ದನಂತೆ. ಮಗನ ಮಾತನ್ನು ನಂಬಿದ್ದ ಯಡ್ಡಿ ಆತ ಬಿಬಿಎಂ ಪಾಸಾಗಿದ್ದಾನೆ ಎಂದೇ ನಂಬಿದ್ದರಂತೆ. ಮೊನ್ನೆ ರಾಘವೇಂದ್ರ ನಾಮಪತ್ರ ಸಲ್ಲಿಸಿದಾಗ ನಿಜಸಂಗತಿ ಬೆಳಕಿಗೆ ಬಂದಿದೆ. "ಅಯ್ಯೋ, ನನ್ನ ಮಗ ನನ್ನ ಹತ್ತಿರವೇ ಸುಳ್ಳು ಹೇಳಿದ್ದಾನೆ. ಆತ ಬಿಬಿಎಂ ಕೂಡ ಮುಗಿಸಿಲ್ಲ" ಎಂದು ಯಡ್ಡಿ ತಮ್ಮ ಆತ್ಮೀಯರ ಬಳಿ ನೋವು ತೋಡಿಕೊಂಡಿದ್ದಾರೆ. ಇದು ಗೊತ್ತಾಗಿದ್ದೇ ತಡ ಚೆಡ್ಡಿಗಳು ಈ ವಿಷಯವನ್ನು ಪಬ್ಲಿಕ್ ಮಾಡಿ 'ಅಪ್ಪನಿಗೆ ತಕ್ಕ ಮಗ' ಎಂದು ಆಡಿಕೊಳ್ಳಲಾರಂಭಿಸಿದ್ದಾರೆ!

ಇನ್ನು ಶಿವಮೊಗ್ಗದ ಮತದಾರರಂತೂ "ಅಪ್ಪನಿಗೇ ಸುಳ್ಳು ಹೇಳಿದ ಮಗ ಇನ್ನು ನಮಗೂ ಮೋಸ ಮಾಡದೇ ಇರುತ್ತಾನೆಯೇ?" ಎಂದು ಚೌಕಾರುತ್ತಿದ್ದಾರೆ!!



ಬೆಳಗಾವಿ:

ಎ.ಬಿ. ಪಾಟೀಲ ಗೆಲುವು ನಿಶ್ಚಿತ!

ಬೆಳಗಾವಿಯಲ್ಲಿ ಮತದಾರನ ಆಲೋಚನೆಗೆ ತೆರೆಬಿದ್ದಂತಿದೆ. ನಿರ್ಧಾರಕ್ಕೂ ಬಂದಿರುವಂತಿದೆ. ಬಿಜೆಪಿಯ ದುರಾಡಳಿತ, ಸಂಸದ ಸುರೇಶ ಅಂಗಡಿಯ ಪುಂಡಾಟಿಕೆ ಮತ್ತು ಭ್ರಷ್ಟಾಚಾರಗಳಿಂದ ಬೇಸತ್ತಿರುವ ಬೆಳಗಾವಿಯ ಜನತೆ ಅಂತಿಮವಾಗಿ ಜಾತ್ಯತೀತ ಜನತಾ ದಳದ ಎ.ಬಿ. ಪಾಟೀಲರನ್ನ ಗೆಲ್ಲಿಸುವ ನಿರ್ಧಾರ ಮಾಡಿದಂತಿದೆ.

ಅಪಾರ ರಾಜಕೀಯ ಅನುಭವ ಹೊಂದಿರುವ ಎ.ಬಿ.ಪಾಟೀಲ ಅಧಿಕಾರದಲ್ಲಿರಲಿ ಬಿಡಲಿ ಸದಾ ಜನಸಾಮಾನ್ಯರ ಕಷ್ಟಕ್ಕೆ ಸ್ಪಂದಿಸಿ ಅವರ ಕೈಗೆಟುಕುವ ಸಜ್ಜನ ಮನುಷ್ಯ. ಅಷ್ಟೇ ಪ್ರಾಮಾಣಿಕ. ಹೀಗಾಗಿ ಮತದಾರರು ಎ.ಬಿ. ಹಿಂದೆ ನಿಂತಿರುವುದರಲ್ಲಿ ಆಶ್ಚರ್ಯವೂ ಇಲ್ಲ. ಕ್ಷೇತ್ರದಲ್ಲಿ ಪ್ರಬಲರಾಗಿರುವ ಲಿಂಗಾಯತ ಪಂಚಮಸಾಲಿ ಸಮುದಾಯದ ಜೊತೆಗೆ ಅಲ್ಪಸಂಖ್ಯಾತ ಹಿಂದುಳಿದ ವರ್ಗ ಹಾಗೂ ಮರಾಠಾ ಸಮಿತಿಗಳು ಎ.ಬಿ.ಪಾಟೀಲಗೆ ಬೆಂಬಲ ನೀಡಿರುವುದು ಬೆಳಗಾವಿ ಲೋಕಸಭೆಯ ಫಲಿತಾಂಶ ಅಡ್ವಾನ್ಸಾಗಿಯೇ ಬಂದಂತಾಗಿದೆ. ಈ ಕಾರಣದಿಂದ ಹಾಸನ, ಬೆಂಗಳೂರು ಗ್ರಾಮಾಂತರ, ಮಂಡ್ಯ, ಬೆಂಗಳೂರು ಸೆಂಟ್ರಲ್‌ಗಳಂಥ ಜೆಡಿಎಸ್ ಗೆಲ್ಲುವ ಕ್ಷೇತ್ರಗಳ ಲಿಸ್ಟಿಗೆ ಈಗ ಬೆಳಗಾವಿಯೂ ಸೇರಿಕೊಂಡಂತಾಗಿದೆ.

ಸಂಕೇಶ್ವರದಿಂದ ಮೂರು ಬಾರಿ ಶಾಸಕರಾಗಿ, ಸಚಿವರಾಗಿ ಹಿಂದುಳಿದ ಗಡಿಭಾಗದ ಅಭಿವೃದ್ಧಿಗೆ ಶ್ರಮಿಸಿರುವ ಎ.ಬಿ.ಪಾಟೀಲ ಲೋಕಸಭೆಯ ಕಣಕ್ಕೆ ಪ್ರವೇಶ ನೀಡಿದಾಗಲೇ ಬಿಜೆಪಿಯ ಸುರೇಶ ಅಂಗಡಿಗೆ ನಡುಕ ಶುರುವಾಗಿತ್ತು, ಗೆಲುವು ಸುಲಭವಲ್ಲಾ ಎಂಬ ಆಲೋಚನೆಯಲ್ಲೇ ಪ್ರಚಾರಕ್ಕಿಳಿದ ಅಂಗಡಿ ದಿನಕಳೆದಂತೆ ಬೆಂಬಲಕ್ಕಿದ್ದ ಜನರೂ ಕಡಿಮೆಯಾಗಿದ್ದು ಅವರೆಲ್ಲಾ ಗೆಲ್ಲುವ ಕುದುರೆಯಂತಿದ್ದ ಎ.ಬಿ.ಪಾಟೀಲರ ಪಾಳೆಯಕ್ಕೆ ಜಿಗಿದಿದ್ದನ್ನು ಕಂಡು ದಿಕ್ಕು ತೋಚದ ಪರಿಸ್ಥಿತಿಗೆ ಬಂದಿದ್ದಾನೆ. ಜನಾಕರ್ಷಣೆಗೆ ಸಿ.ಎಂ. ಯಡ್ಡಿಯಿಂದ ಹಿಡಿದು ಬಿಜೆಪಿಯ ಬಹುತೇಕ ಎಲ್ಲ ಚಡ್ಡಿಗಳು ಮೈಕ್ ಹಿಡಿದು ಇಂದ್ರ-ಚಂದ್ರ ಎಂದು ಬೊಗಳೆ ಭಾಷಣ ಬಿಗಿದರೂ ಏನೂ ವರ್ಕೌಟ್ ಆಗಿಲ್ಲ. ಯಾಕೆಂದರೆ ಇವರು ಈ ಹಿಂದೆ ಹೇಳಿರುವ ಚಂದಮಾಮನ ಕಥೆಯೇ ಇನ್ನೂ ಮುಗಿದಿಲ್ಲ, ಸಮಸ್ಯೆಗಳು ಅವತ್ತು ಎಲ್ಲಿದ್ದವೋ ಈ ಹೊತ್ತೂ ಅಲ್ಲೇ ಇವೆ.


ಐದು ವರ್ಷ ಸಂಸದನಾಗಿದ್ದ ಸುರೇಶ್ ಅಂಗಡಿ ಬೆಳಗಾವಿಗಾಗಿ ಕಡಿದು ಗುಡ್ಡೆ ಹಾಕಿದ್ದು ಅಷ್ಟರಲ್ಲೇ ಇದೆ. ಬೆಳಗಾವಿ ಪಂಚಮಸಾಲಿಗಳನ್ನು ಹಣಿಯಬೇಕು ಎಂಬ ದುರುದ್ದೇಶದಿಂದ ಸಿಮೆಂಟ್ ವ್ಯಾಪಾರ ಮಾಡಿಕೊಂಡಿದ್ದ ಈ ಬಣಜಿಗನಿಗೆ ಎಂಪಿ ಟಿಕೆಟ್ ಕೊಟ್ಟಿತ್ತು ಬಿಜೆಪಿ. ಅವತ್ತಿದ್ದ ವಾಜಪೇಯಿ ಅಲೆ ಮತ್ತು ಕೇಸರಿ ರಾಜಕಾರಣದ ಕಾವುಗಳಿಂದ ಅದ್ಹೇಗೋ ಆರಿಸಿಯೂ ಬಂದ. ಸಿಮೆಂಟ್ ವ್ಯಾಪಾರದಲ್ಲಿ ಪರ್ಸಂಟೇಜ್ ಲೆಕ್ಕಾ ಹಾಕಿದಂತೆಯೇ ಎಂಪಿ ಫಂಡಿನಲ್ಲೂ ನುಂಗಿ ನೀರು ಕುಡಿದ ಪರ್ಸಂಟೇಜ್ ಪ್ರವೀಣನೀತ. ತನ್ನನ್ನು ಆರಿಸಿ ಕಳಿಸಿದ ಜನರ ಸಮಸ್ಯೆಗಳಿಗೆ, ಅಹವಾಲುಗಳಿಗೆ ಸ್ಪಂದಿಸುವುದನ್ನು ಬಿಟ್ಟು ದಿಲ್ಲಿ, ಬೆಂಗಳೂರುಗಳಲ್ಲೇ ಐದು ವರ್ಷ ಕಾಲಹರಣ ಮಾಡಿದ. ಈಗ ಮತ್ತೆ ಎಲೆಕ್ಷನ್ ಬಂದ ಮೇಲೆ ಬೆಳಗಾವಿಯ ನೆನಪಾಗಿಬಿಟ್ಟಿದೆ. ಈತ ಇಲ್ಲಿಗೆ ವಾಪಸ್ ಬಂದು ಮಾಡಿದ್ದು ಏನೆಂದರೆ ಕನ್ನಡ-ಮರಾಠಿ ಜನರ ನಡುವೆ ಕೊಳ್ಳಿಯಿಡುವ ಕೆಲಸ ಮಾತ್ರ.

ಸುರೇಶ್ ಅಂಗಡಿಯ ಕಾಲಾವಧಿಯಲ್ಲಿ ಬೆಳಗಾವಿ ಹಿಂದೆಂದೂ ಕಂಡಿರದಷ್ಟು ಭ್ರಷ್ಟಾಚಾರವನ್ನು ಕಂಡಿದೆ. ಜನರ ರಕ್ತ ಹೀರುವ ಜಿಗಣೆಗಳಂತಿರುವ ಕಡು ಭ್ರಷ್ಟ ಅಧಿಕಾರಿಗಳನ್ನು ಆಯಕಟ್ಟಿನ ಜಾಗದಲ್ಲಿ ಕೂರಿಸಿ ಅವರಿಂದಲೂ ಹಫ್ತಾ ವಸೂಲಿ ಮಾಡಿದ ವಸೂಲಿವೀರನೀತ. ಲೋಕಾಯುಕ್ತರು ಬಿಡ್ಡಾಕ್ಕೆ ಕೆಡವಿದ ಜಿಲ್ಲೆಯ ಏಳೆಂಟು ಭ್ರಷ್ಟ ಅಧಿಕಾರಿಗಳೆಲ್ಲರೂ ಸುರೇಶ್ ಅಂಗಡಿಯ ಕೃಪಾಪೋಷಿತರೇ ಆಗಿದ್ದಾರೆ.



ಸುರೇಶ್ ಅಂಗಡಿ

ಹಿಂದಿನ ಎಲ್ಲಾ ಎಂಪಿಗಳಿಗಿಂತ ತಾನೇ ಬೆಳಗಾವಿಯನ್ನು ಹೆಚ್ಚು ಅಭಿವೃದ್ಧಿ ಮಾಡಿರುವುದಾಗಿ ಅಂಗಡಿ ಹೋದಲ್ಲಿ ಬಂದಲ್ಲಿ ಕೊಚ್ಚಿಕೊಳ್ಳುತ್ತಾನೆ. ಆದರೆ ಹಿಂದಿನ ಎಲ್ಲಾ ಎಂಪಿಗಳಿಗಿಂತ ಈತನೇ ಹೆಚ್ಚು ಲೂಟಿ ಮಾಡಿದ್ದಾನೆಂದು ಜನ ಮಾತನಾಡಿಕೊಳ್ಳುತ್ತಾರೆ. ಬೆಳಗಾವಿಯ ನಿರ್ಮಿತಿ ಕೇಂದ್ರದ ಕಳ್ಳ ಅಧಿಕಾರಿ ಪಾಟೀಲ್ ಹಾಗೂ ತನ್ನ ಖಾಸಾ ಸಂಬಂಧಿ ಗುತ್ತಿಗೆದಾರರ ಮೂಲಕ ಕಳಪೆ ಕೆಲಸ ಮಾಡಿಸಿ ತನ್ನ ವಾಸವದತ್ತಾ ಸಿಮೆಂಟ್ ಏಜೆನ್ಸಿಯ ಸಿಮೆಂಟ್ ಮಾರಿಸಿ ಕಮೀಷನ್ ತಿಂದಿದ್ದು ಎಲ್ಲರಿಗೂ ಗೊತ್ತಿರುವ ವಿಚಾರ. ಸುಮಾರು 10.27 ಕೋಟಿಯಷ್ಟು ಸಂಸದರ ನಿಧಿಯಲ್ಲಿ 246 ಭವನಗಳು ನಿರ್ಮಾಣಗೊಂಡಿದ್ದನ್ನು ನೋಡಿದರೆ ಅದರಲ್ಲಿ ಎಷ್ಟರಮಟ್ಟಿಗೆ ಭ್ರಷ್ಟಾಚಾರ ನಡೆದಿದೆ ಎಂಬುದನ್ನು ಎಂಥವರೂ ಊಹಿಸಬಹುದು.



ಅಮರೀಶ್

ಜಿಲ್ಲೆಯಲ್ಲಿ ಗಣನೀಯ ಪ್ರಮಾಣದಲ್ಲಿರುವ ಮರಾಠಿ ಮತದಾರರನ್ನು ಓಲೈಸುವುದಕ್ಕಾಗಿಯೇ ಅಂಗಡಿ ಆಗಾಗ ಕನ್ನಡ ವಿರೋಧಿ, ಮರಾಠಿ ಪರ ಅವತಾರವೆತ್ತುತ್ತಾನೆ. ಈ ಹಿಂದೆ ಅದೆಷ್ಟೋ ಬಾರಿ ಮಹಾರಾಷ್ಟ್ರ ಏಕೀಕರಣ ಸಮಿತಿ (ಎಂಇಎಸ್) ಎಂಬ ಮರಾಠಿಗರ ಕಾರ್ಯಕ್ರಮದಲ್ಲಿ ಪಾಲ್ಗೊಂಡು "ಎ ಬೆಳಗಾಂ ಮಾಜಾ ನಹೀ ತುಮಚಾ ಹೈ" (ಈ ಬೆಳಗಾವಿ ನಮ್ಮದಲ್ಲ, ನಿಮ್ಮದ್ದೆ) ಎಂದು ಬಹಿರಂಗವಾಗಿಯೇ ಘೋಷಿಸಿದ್ದಾನೆ. ಒಮ್ಮೆ ಕನ್ನಡದ ಜಾನಪದ ಕಲಾವಿದ ಏಣಗಿ ಬಾಳಪ್ಪನವರನ್ನು ಹೊಗಳುವ ಭರದಲ್ಲಿ ಡಾ.ರಾಜ್‌ಕುಮಾರ್‌ನಂಥ ಹಿರಿಯ ಕಲಾವಿದರನ್ನು ಮನಬಂದಂತೆ ಬಯ್ದು ರಾಜ್ ಪ್ರೇಮಿಗಳಿಂದ ಉಗಿಸಿಕೊಂಡಿದ್ದ. ಮೊನ್ನೆ ಮೊನ್ನೆ ಬೆಳಗಾವಿಯ ಪಾಲಿಕೆಯ ಕಟ್ಟಡದ ಮೇಲೆ ಭಗವಾಧ್ವಜವನ್ನು ಹಾರಿಸಲು ಹೋಗಿದ್ದು ಈತನ ಮರಾಠಿ ಪ್ರೇಮ ಮತ್ತು ಕನ್ನಡ ವಿರೋಧಿ[...] ಲೇಟೆಸ್ಟ್ ಉದಾಹರಣೆ. ಯಾವಾಗ ಕನ್ನಡ ಸಂಘಟನೆ[...] ವಿರೋಧ ಪಕ್ಷಗಳು ಅಂಗಡಿಯ ಪುಂಡಾಟಿಕೆಯ ವಿ[...] ತಿರುಗಿಬಿದ್ದವೋ ಈತ ಒಂದು ಪ್ರೆಸ್‌ಮೀಟ್ ಮ[...] 'ನನ್ನಿಂದ ತಪ್ಪಾಯ್ತು' ಎಂದು ಗೋಗರೆದಿದ್ದಾನೆ.

ಈತ ಒಮ್ಮೊಮ್ಮೆ ಅಪ್ರತಿಮ ಮರಾಠಿಗ[...] ಮಾತನಾಡುತ್ತಿರುವುದು ಮರಾಠಿ ಮತಗಳ[...] ಸೆಳೆಯುವುದಕ್ಕೆ ಎಂಬುದು ಮರಾಠಿಗರಿಗೂ ಗೊತ್ತಿ[...] ವಿಚಾರ. ಕನ್ನಡಿಗರು ಎದ್ದು ನಿಂತ ತಕ್ಷಣ ಕ[...] ಪ್ರೇಮಿಯಂತೆ ಪೋಜು ಕೊಟ್ಟು ಮರಾಠಿಗರ[...] ತೆಗಳಲಾರಂಭಿಸುತ್ತಾನೆ. ಇದರಿ[...] ಬೇಸತ್ತುಹೋಗಿರುವ ಮರಾಠಿಗರು ಕ[...] ಇವನಿಂದ ದೂರ ಸರಿದು ಎ.ಬಿ.ಪಾಟೀ[...] ಬೆಂಬಲಕ್ಕೆ ನಿಂತಿದ್ದಾರೆ. ಹತ್ತಾರು ಮರ[...] ಸಂಘ, ಸಂಸ್ಥೆಗಳು ತಾವೇ ಸ್ವಯಂಪ್ರೇರಿತ[...] ಪತ್ರಿಕಾಗೋಷ್ಠಿ ಕರೆದು ಎ.ಬಿ.ಪಾಟೀಲ[...] ಬೆಂಬಲ ನೀಡಿರುವುದು ಇತ್ತೀಚಿನ [...] ವಣಿಗೆ.


ಇನ್ನೊಂದೆಡೆ ಎ.ಬಿ.ಪಾಟೀ[...] ಅಂಗಡಿಯಂತೆ ಹೆಸರು ಕೆಡಿಸಿಕೊಂಡವ[...] ಈ ಹಿಂದೆ ಜೆ.ಎಚ್.ಪಟೇಲ್ ಮ[...] ದೇವೇಗೌಡರ ಸರ್ಕಾರದಲ್ಲಿ ಮಂತ್ರಿಯಾಗಿ[...] ಸಮಯದಲ್ಲಿ ಅವರು ಜಿಲ್ಲೆಗಾಗಿ ಮಾಡಿ[...] ಅಭಿವೃದ್ಧಿ ಕಾರ್ಯಗಳು, ಜನರೊಂದಿ[...] ಅವರು ಹೊಂದಿದ್ದ ಒಡನಾಟ ಇಂದಿಗ[...] ಜನಮನದಲ್ಲಿವೆ.

ಜಾತಿ ಲೆಕ್ಕಾಚಾರ ಹಾಕಿದರೂ ಎ.[...] ಪಾಟೀಲ್ ಅವರು ಸುರೇಶ್ ಅಂಗಡಿಗಿ[...] ಉತ್ತಮ ಪರಿಸ್ಥಿತಿಯಲ್ಲಿದ್ದಾರೆ. ಕ್ಷೇತ್ರದಲ್ಲಿ ಲಿಂಗಾಯತ[...] 4.70 ಲಕ್ಷವಿದ್ದರೂ ಅದರಲ್ಲಿ ನಾಲ್ಕೂವರೆ ಲಕ್ಷ [...] ಪಂಚಮಸಾಲಿ ಒಳಪಂಗಡದವರೇ ಆಗಿದ್ದಾರೆ. ಮಂ[...] ಮಾಡುವಲ್ಲಿ, ಟಿಕೆಟ್ ಕೊಡುವಲ್ಲಿ ಈ ಸಮುದಾ[...] ದವರಿಗೆ ಬಿಜೆಪಿ ಅನ್ಯಾಯ ಮಾಡುತ್ತಿರುವುದು ಅವರ[...] ಕೆರಳಿಸಿದೆ. ಬಿಜೆಪಿಯಲ್ಲಿ ಹದಿನೈದು ಜನ ಪಂಚಮಸಾ[...] ಎಮ್ಮೆಲ್ಲೆಗಳಿದ್ದರೂ ಮಂತ್ರಿ ಸ್ಥಾನ ಅಂತ ಕೊಟ್ಟಿರುವು[...] ಮುರುಗೇಶ್ ನಿರಾಣಿಗೆ ಮಾತ್ರ. ಇಡೀ ರಾಜ್ಯದಲ್ಲಿ 7[...] ಲಕ್ಷದಷ್ಟು ಪಂಚಮಸಾಲಿಗಳೇ ಇದ್ದರೂ ಎಂಪಿ ಟಿಕೆ[...] ಕೊಟ್ಟಿರುವುದು ಒಬ್ಬರಿಗೆ ಮಾತ್ರ. ಹೀಗಿರುವಾಗ 'ಬಿಜೆಪಿ[...] ಓಟು ಹಾಕುವುದಕ್ಕೆ ನಾವು ಬೇಕು, ಚಾಕರಿ ಮಾಡುವುದ[...] ನಾವು ಬೇಕು, ಅಧಿಕಾರ ಅನುಭವಿಸಲು ಮಾತ್ರ ಬೇ[...] ಎಂದರೆ ಹೇಗೆ' ಎಂದು ಪಂಚಮಸಾಲಿಗಳು ಬಿಜೆಪಿ[...]


ಚಿಕ್ಕಬಳ್ಳಾಪುರ

ಹೋರಾಟದಲ್ಲಿ ಮೊಯ್ಲಿ ಹೇಡಿ ಜಾಲಪ್ಪ ನಿಖಾಲಿ


ಅಶ್ವಥ್ ಜೇಬು ಖಾಲಿಯೋ ಖಾಲಿ



ಮೊಯ್ಲಿ



ಜಾಲಪ್ಪ



ಅಶ್ವತ್ಥನಾರಾಯಣ

ಯಾರೇ ರಾಜಕಾರಣಿಯೊಬ್ಬನ ಬದುಕಿನಲ್ಲಿ ಅವನ ಶಕ್ತಿ ಸಾಮರ್ಥ್ಯ. ಯೋಗ್ಯತೆ-ಅಯೋಗ್ಯತೆಗಳನ್ನು ಪರೀಕ್ಷಿಸುವ ಕೆಲ ಸಂದರ್ಭ ಬರುತ್ತವೆ. ಆವಾಗ ಗಂಡೆದೆ ಇರುವವನು ಮುಂದೆ ನಿಂತು ಹೋರಾಡುತ್ತಾನೆ, ಅಳ್ಳೆದೆಯ ಪುಕ್ಕಲರು ಯುದ್ಧರಂಗ ಬಿಟ್ಟು ಪರಾರಿಯಾಗಿ ತೆರೆಮರೆಯಲ್ಲಿ ನಿಂತು ಪಿತೂರಿಯ, ಹೇಡಿತನದ ರಾಜಕೀಯ ಮಾಡುತ್ತಾರೆ.



ಚಿಕ್ಕಬಳ್ಳಾಪುರ ಸಂಸತ್ ಕ್ಷೇತ್ರದ ಚುನಾವಣೆ ಬಗ್ಗೆ ಬರೆಯುವಾಗ ಮಾಜಿ ಸಂಸದ ಜಾಲಪ್ಪನ ಕುರಿತು ಈ ಮಾತು ಹೇಳಲೇಬೇಕು.

ಕಾಂಗ್ರೆಸ್‌ನಿಂದ ಎಂ. ವೀರಪ್ಪ ಮೊಯ್ಲಿ, ಬಿಜೆಪಿಯಿಂದ ಸಿ. ಅಶ್ವಥ್ ನಾರಾಯಣ ಹಾಗೂ ಜೆಡಿಎಸ್‌ನಿಂದ ಮನೋಹರ್ ಈ ಅಖಾಡದಲ್ಲಿದ್ದಾರೆ. ಇಲ್ಲಿ ಕಾಂಗ್ರೆಸ್‌ನ ಮತ್ತು ಬಿಜೆಪಿ ನಡುವೆ ನೇರ ಹೋರಾಟ ನಡೆಯುತ್ತಿದೆ. ಕ್ಷೇತ್ರದ 8 ಅಸೆಂಬ್ಲಿ ಸೆಗ್ಮೆಂಟುಗಳ ಪೈಕಿ ಗೌರಿಬಿದನೂರು, ಬಾಗೇಪಲ್ಲಿ ಹಾಗೂ ದೇವನಹಳ್ಳಿಯಲ್ಲಿ ಕಾಂಗ್ರೆಸ್ ಶಾಸಕರುಗಳಿದ್ದಾರೆ. ಬಿಜೆಪಿ ಯಲಹಂಕ, ದೊಡ್ಡಬಳ್ಳಾಪುರ, ಹೊಸಕೋಟೆ ಹಾಗೂ ನೆಲಮಂಗಲಗಳಲ್ಲಿ ಶಾಸಕರನ್ನು ಹೊಂದಿದೆ. ಚಿಕ್ಕಬಳ್ಳಾಪುರದಲ್ಲಿ ಜೆಡಿಎಸ್ ಶಾಸಕರಿದ್ದಾರೆ.

2004 ರ ಪಾರ್ಲಿಮೆಂಟ್ ಎಲೆಕ್ಷನ್‌ನಲ್ಲಿ ಕಾಂಗ್ರೆಸ್‌ನ ಜಾಲಪ್ಪ 60 ಸಾವಿರ ಮತಗಳ ಅಂತರದಿಂದ ಜೆಡಿಎಸ್‌ನ ಶಶಿಕುಮಾರ್‌ರನ್ನು ಸೋಲಿಸಿದ್ದರು. ಆಗ ಬಿಜೆಪಿಯಿಂದ ನಿಲ್ಲಿಸಲು ಒಬ್ಬ ಅಭ್ಯರ್ಥಿಯೂ ಗತಿ ಇರಲಿಲ್ಲ, ಹಾಗಾಗಿ ಮಿತ್ರಪಕ್ಷ ಜೆಡಿಯುಗೆ ಈ ಕ್ಷೇತ್ರ ಬಿಟ್ಟುಕೊಡಲಾಗಿತ್ತು.

ಅಲ್ಲಿಂದಾಚೆಗೆ ಈ ಐದು ವರ್ಷಗಳಲ್ಲಿ ಬೇಕಾದಷ್ಟು ಬದಲಾವಣೆಗಳಾಗಿವೆ. ಅದರಲ್ಲಿ ಮುಖ್ಯವಾದದ್ದು ಜಾಲಪ್ಪನ ಹೇಡಿತನದ ರಾಜಕೀಯ.

ಕರ್ನಾಟಕ ಕಂಡ ಅತೀ ವಿಶಿಷ್ಟ ರಾಜಕಾರಣಿಯಾಗಿರುವ, ಸ್ವಾಭಿಮಾನಿಯೂ, ದಕ್ಷ ಆಡಳಿತಗಾರನೂ ಆಗಿದ್ದ ಜಾಲಪ್ಪ ಈಗ ತನ್ನ ಇಳಿವಯಸ್ಸಿನಲ್ಲಿ ಚಿಲ್ಲರೆ ಲೆವೆಲ್‌ನ ರಾಜಕಾರಣ ಮಾಡಲು ಹೊರಟಿರುವುದೇ ಈ ಬಾರಿಯ ಚುನಾವಣಾ ವೈಶಿಷ್ಟ್ಯವಾಗಿದೆ.

ಜಾಲಪ್ಪಾಗೆ ಟಿಕೆಟ್ ನೀಡಲು ಈ ಬಾರಿ ಕಾಂಗ್ರೆಸ್ ನಿರಾಕರಿಸಿತ್ತು, ಬೇಕಿದ್ದರೆ ನೀವೇ ಬೇರೊಬ್ಬರ ಹೆಸರು ಸೂಚಿಸಿ ಎಂತಲೂ ಹೇಳಲಾಗಿತ್ತು. ಆಗ ಎಂ.ಆರ್. ಸೀತಾರಾಂ ಹೆಸರು ಹೇಳಿದ್ದರು ಜಾಲಪ್ಪ. ಆದರೆ ಅಷ್ಟರಲ್ಲಿ ಕಾಂಗ್ರೆಸ್ ಹೈಕಮಾಂಡ್‌ನೊಳಗೆ ಜಾಲಪ್ಪನ ಮಾತಿಗೆ ಕಿಲುಬು ಕಾಸಿನ ಬೆಲೆಯೂ ಇರಲಿಲ್ಲ. ಕಾಂಗ್ರೆಸ್ ತೆಕ್ಕೆಯಲ್ಲಿದ್ದ ದೊಡ್ಡಬಳ್ಳಾಪುರ ಕ್ಷೇತ್ರದ ಶಾಸಕ ಜಾಲಪ್ಪ ಮಗ ನರಸಿಂಹಸ್ವಾಮಿ ಬಿಜೆಪಿ ಸೇರಿದ್ದೇ ಇದಕ್ಕೆ ಕಾರಣ. ಅದಕ್ಕೆ ಜಾಲಪ್ಪನೂ ಶಾಮೀಲಾಗಿದ್ದರು. ಹಣ, ಹೆಂಗಸು, ಅಧಿಕಾರ ಈ ಮೂರೂ ಇರದೆ ಒಂದೇ ಒಂದು ದಿನವೂ ಬದುಕಿರಲಾರದ ಈ ಅಪ್ಪ ಮಕ್ಕಳಿಂದ ಚಿಕ್ಕಬಳ್ಳಾಪುರ ಕ್ಷೇತ್ರದ ಕಾಂಗ್ರೆಸ್ ಸಮತೋಲನ ತಪ್ಪಿರುವುದು ನಿಜ.

ಆದರೆ ಕಾಂಗ್ರೆಸ್ ಜಾಲಪ್ಪನಂಥ ಅನೇಕರನ್ನು ಜೀರ್ಣಿಸಿಕೊಂಡಿದೆ. ಹಾಗಾಗಿ ಜಾಲಪ್ಪನ ಮಾತಿಗೆ ಬೆಲೆ ನೀಡದೆ ವೀರಪ್ಪ ಮೊಯ್ಲಿ ಕಣಕ್ಕಿಳಿದಿದ್ದಾರೆ. ರಾಜ್ಯ ಕಂಡ ಅತೀ ಸಂಭಾವಿತ ರಾಜಕಾರಣಿ ಹಾಗೂ ಹಿಂದುಳಿದ ವರ್ಗಗಳ ನಾಯಕ ಮೊಯ್ಲಿಗೆ ಇಲ್ಲಿ ಕೆಲವು ಅನುಕೂಲಗಳೂ ಹಲವು ಅನಾನುಕೂಲಗಳೂ ಇವೆ[...]

ಮೊಯ್ಲಿ ಹೊರಗಿನವರೆಂಬ ಅಂಶ ಇಲ್ಲಿ ಮು[...] ವಾಗುತ್ತಿಲ್ಲ. ಮೊಯ್ಲಿ ಗೆದ್ದರೆ ಕ್ಷೇತ್ರ ಸ್ಥಳೀಯರ ಕೈಯಿಂ[...] ಜಾರಿ ಹೋಗುತ್ತದಲ್ಲ ಎಂದು ಅವರಿವರ[...] ಮಾತಾಡಿದರೂ ಅದೂ ಅಷ್ಟೇನೂ ಪರಿಣಾಮ ಬೀರುತ್ತಿ[...]

ಗೌರಿಬಿದನೂರಿನ ಕಾಂಗ್ರೆಸ್ ಶಾಸಕ ಶಿವಶಂಕರ ರೆ[...] ಬಾಗೇಪಲ್ಲಿಯ ಸಂಪಂಗಿ ಹಾಗೂ ದೇವನಹಳ್ಳಿಯ[...] ನರಸಿಂಹಯ್ಯ ಮೊಯ್ಲಿ ಪರವಾಗಿ ಬಿರುಸಿನ ಕೆಲ[...] ಮಾಡುತ್ತಿದ್ದಾರೆ. ಹೊಸಕೋಟೆಯಲ್ಲಿ ಬಿಜೆಪಿಯ[...] ಬಚ್ಚೇಗೌಡನ ಬಗ್ಗೆ ಜನರಲ್ಲಿ ಎಷ್ಟು ರೋಷ ಉಕ್ಕಿದೆಯೆಂದ[...] ಅವೆಲ್ಲಾ ಕಾಂಗ್ರೆ ಮತಗಳಾಗಿ ಹರಿದು ಬರಲಿದೆ. ಜೊತೆ[...] ಮಾಜಿ ಶಾಸಕ ಎಂಟಿಬಿ ನಾಗರಾಜ್ ಮೊಯ್ಲಿ ಜೊತೆಗಿದ್ದಾ[...] ಉಳಿದಂತೆ ಗೌರಿಬಿದನೂರು, ನೆಲಮಂಗಲ[...] ಯಲಹಂಕಗಳಲ್ಲಿ ಮೊಯ್ಲಿ ಹಾಗೂ ಅಶ್ವಥ್ ಫಿಫ್ಟಿ-ಫಿ[...] ಮತ ಹಂಚಿಕೊಳ್ಳಲಿದ್ದಾರೆ.

ಇನ್ನು ಬಿಜೆಪಿಗೆ ದೊಡ್ಡಬಳ್ಳಾಪುರ ಜಾಲಪ್[...] ಕೂಟುಗೆರೆ ಹೋಬಳಿ ಇರುವ ದೇವನಹಳ್ಳಿ ಹಾಗ[...] ಯಲಹಂಕದಲ್ಲಿ ಸ್ವಲ್ಪ ಜಾಸ್ತಿ ಮತಗಳು ಸಿಗಲಿವೆ.

ಇಲ್ಲಿ ಮೊಯ್ಲಿಗಿರುವ ಮುಖ್ಯ ಅಡೆತಡೆ ಜಾಲಪ್[...]

ಉರಿಯುತ್ತಿದ್ದಾರೆ. ಇದೇ ಸಂದರ್ಭದಲ್ಲಿ ಎಯಲ್ಲಿ ಬಣಜಿಗ ಅಂಗಡಿ ಬಿಜೆಪಿಯಿಂದ ದ್ದಾನೆ. ಆದರೆ, ಜೆಡಿಎಸ್ ಪಂಚಮಸಾಲಿ ಪಾಟೀಲ್‌ಗೆ ಟಿಕೆಟ್ ಕೊಟ್ಟು ಕಣಕ್ಕಿಳಿಸಿದೆ. ಹಾಗಿ ಪಂಚಮಸಾಲಿಗಳು 'ಇಂವ ನಮ್ಮವ'? ಎ.ಬಿ.ಪಾಟೀಲ್‌ಗೆ ಓಟು ಹಾಕುತ್ತಾರೆ. ಅದು ಗೆ ಗೂಟ ಬಡಿದಂತಾಗುತ್ತದೆ.

ಅಂಗಡಿಗೆ ಮುಳುವಾಗಿರುವ ಇನ್ನೊಂದು ಸಮು ಎಂದರೆ ಮುಸ್ಲಿಮರು. ಸುಮಾರು ಒಂದೂವರೆ ಹೆಚ್ಚು ಜನ ಮುಸ್ಲಿಮರ ಹಾಗೂ 45 ಕ್ರಿಶ್ಚಿಯನ್ನರ ಮತಗಳಿವೆ. ಬಿಜೆಪಿ ರಾಜ್ಯಾದ್ಯಂತ ನ್ ಚರ್ಚುಗಳ ಮೇಲೆ, ಮುಸ್ಲಿಮರ ಮೇಲೆ ಮಾಡಿದ್ದರಿಂದ ಅವರೆಲ್ಲಾ ಎ.ಬಿ.ಪಾಟೀಲ್ ಕಡೆ ತ್ವಗಿ ವಾಲುತ್ತಾರೆ. ಎರಡೂವರೆ ಲಕ್ಷದಷ್ಟು ಒಬಿಸಿ ಗಳು, 1.80 ಲಕ್ಷ ಮರಾಠಿ ಮತಗಳು, ಸುಮಾರು ಲಕ್ಷದಷ್ಟು ಎಸ್ಸಿಎಸ್ಟಿ ಮತಗಳು, 1.80 ಮತಗಳು ಇವೆ. ಈ ಸಮುದಾಯದ ಬಹುತೇಕ ಗಳು ಇಂದು ಎ.ಬಿ.ಪಾಟೀಲ್ ಜೊತೆಯಿದ್ದಾರೆ. ದಲ್ಲಿ ಅರ್ಧದಷ್ಟು ಮತಗಳನ್ನು ಕಿತ್ತುಕೊಂಡರೂ ಪಾಟೀಲ್ ಗೆಲ್ಲುವುದು ಸುಲಭವಾಗುತ್ತದೆ.

ನ್ನು ಕಾಂಗ್ರೆಸ್ಸಿನ ಅಮರಸಿಂಹ ಪಾಟೀಲ್‌ರ ದ ವೈಖರಿ, ಕಾಂಗ್ರೆಸ್ಸಿಗೆ ಜಿಲ್ಲೆಯಲ್ಲಿರುವ ಾರರ ನೆಲೆ, ಜನರ ಮನಸ್ಥಿತಿಗಳನ್ನು ಗಮನಿಸಿದರೆ ಮೂರನೇ ಸ್ಥಾನಕ್ಕೆ ತೃಪ್ತಿಪಟ್ಟುಕೊಳ್ಳಬೇಕಷ್ಟೆ. ಸಮುದಾಯದವರಾಗಿರುವ ಅವರು 1.80 ರುವ ಕುರುಬ ಮತಗಳನ್ನಷ್ಟೇ ನೆಚ್ಚಿಕೊಳ್ಳಬೇಕಾದ ತಿಯಿದೆ. ಜಿಲ್ಲಾ ಪಂಚಾಯತಿಯ ಅಧ್ಯಕ್ಷನಾಗಿ, ಬಾರಿ ಎಂಪಿಯಾಗಿದ್ದರೂ ಜಿಲ್ಲೆಗೆ ಹೇಳಿಕೊಳ್ಳು ಅಭಿವೃದ್ಧಿಯೇನೂ ಅವರು ಮಾಡಿಲ್ಲ.

ರಾಂಶದಲ್ಲಿ ಹೇಳಬೇಕೆಂದರೆ, ಪೈಪೋಟಿಯಿರು ಕಡುಭ್ರಷ್ಟ ಸುರೇಶ್ ಅಂಗಡಿ ಮತ್ತು ಇದ್ದುದರಲ್ಲೇ ಎಂದು ಹೇಳಬಹುದಾದ ಎ.ಬಿ.ಪಾಟೀಲ್. ಎ.ಬಿ.ಪಾಟೀಲ್ ಬೆನ್ನಿಗಿರುವ ತನ್ನದೇ ಮಸಾಲಿಗಳ ಬೆಂಬಲ, ಕುಮಾರಸ್ವಾಮಿ ಮಂತ್ರಿಯಾಗಿದ್ದಾಗ ಬೆಳಗಾವಿ ಅಧಿವೇಶನ ಿಸಿದ್ದರಿಂದ ಹಿಡಿದು ಜಿಲ್ಲೆಯಲ್ಲಿ ಮಾಡಿರುವ ದ್ಧಿಗಳು, ಸುರೇಶ್ ಅಂಗಡಿಯ ಎಡವಟ್ಟುಗಳು ಕ್ಕಿನಲ್ಲಿ ಎಲ್ಲಾ ಸೇರಿ ಎ.ಬಿ.ಪಾಟೀಲರನ್ನು ಈ ಪಾರ್ಲಿಮೆಂಟಿಗೆ ಕಳಿಸುವುದರಲ್ಲಿ ಯಾವುದೇ ಾನವಿಲ್ಲ.

● ವಿನಯ್ ಹುರುಳಿಕುಪ್ಪಿ

ದು ರಾಜಕೀಯದ್ದು ಇತ್ತ ಗಂಡಸೂ ಅಲ್ಲ ಅತ್ತ ಅಲ್ಲ ಎನ್ನುವಂತೆ ಕಾಂಗ್ರೆಸ್‌ನಲ್ಲಿದ್ದರೂ ಕಾಂಗ್ರೆಸ್ ಲ್ಲದೆ, ಬಿಜೆಪಿ ಸೇರದಿದ್ದರೂ ಒಳಗಿಂದೊಳಗೆ ಪರ ನಿಂತಿರುವ ಜಾಲಪ್ಪ ಜೋಕರ್ ತರ ದ್ದಾರೆ. ಆದರೆ ಜೆಡಿಎಸನ ಮನೋಹರ್ ಬಲಿಜ ದವರಾಗಿದ್ದು ಅವರು ಪಡೆಯುವ ಓಟುಗಳೆಲ್ಲಾ ನಷ್ಟದ ಬಾಬ್ತು ಆಗಲಿದೆ.

ತ್ರದಲ್ಲಿ 2 ಲಕ್ಷದಷ್ಟಿರುವ ಮುಸ್ಲಿಮರ ಓಟುಗಳು, ನ ಪರಂಪರಾನುಗತ ದಲಿತ, ಹಿಂದುಳಿದ ಬೆಂಬಲ ಮೊಯ್ಲಿಗೆ ಗ್ಯಾರಂಟಿ. ಜೊತೆಗೆ ಲಿಜರ ಇನ್ನಿತರ ವಿಭಜನೆಯಾಗುವ ಓಟ್‌ಗಳಲ್ಲಿ ಪಾಲು ಇರಲಿದೆ.

ಜೆಪಿಗೆ ಸದ್ಯಕ್ಕೆ ಅತೀ ದೊಡ್ಡ ಬಿಕ್ಕಟ್ಟೆಂದರೆ ಅಭ್ಯರ್ಥಿ ಅಶ್ವತ್ಥ್ ನಾರಾಯಣ 52 ಕೋಟಿ ಸ್ತಿ ಘೋಷಣೆ ಮಾಡಿಕೊಂಡಿದ್ದರೂ ಪ್ರಚಾರ ಾದ ಒಂದೇ ವಾರದೊಳಗೆ ಜೇಬು ಖಾಲಿ ಂದು ಕುಳಿತಿದ್ದಾರೆ. ಮತ್ತೊಂದೆಡೆ ಮೊಯ್ಲಿ ವಿಚಾರದಲ್ಲಿ ಧಾರಾಳವಾಗಿದ್ದಾರೆ. ಹಾಲಿ ಬಿಜೆಪಿ ಗ ಶಾಸಕರು ಹಾಗೂ ಪುಡಿ ಲೀಡರ್‌ಗಳು ಜೇಬಿನಿಂದ ನಯಾಪೈಸೆ ಖರ್ಚು ಮಾಡದೆ ನಾರಾಯಣನೇ ಹಣ ಹೊಂದಿಸಲಿ ಎಂದು ಬಿಟ್ಟಿದ್ದಾರೆ.

ಚುನಾವಣೆ ಹತ್ತಿರವಾಗುತ್ತಿದ್ದಂತೆ ಬಿಜೆಪಿಯ ಕಿತ್ತು ಇನ್ನು ಜಾಸ್ತಿಯಾಗಲಿದೆ. ಕಾರ್ಯಕರ್ತರ ಷ್ಟು ಈಗಾಗಲೇ ಇಳಿದುಹೋಗಿದೆ.

ಒಟ್ಟೋಟ್ಟಿಗೆ, ವಾತಾವರಣ ಮೊಯ್ಲಿ ಅಥವಾ ಪರ ಖಚಿತವಾಗಿ ಕಾಣಿಸದಿದ್ದರೂ ಗೆಯ ಹೊತ್ತಿಗೆ ಬಿಜೆಪಿಗಳು ಸುಸ್ತಾಗಲಿದ್ದು ಇನ್ನಷ್ಟು ಅನುಕೂಲ ತಲುಪಬಹುದು. ಹಾಗಾಗಿ ಜಾಲಪ್ಪನ ಜಮಾನ ಅಂದಿಗೇ ಮುಗಿದು ಿದೆ.

▶▶▶11

ಶಾಂತವೀರನಾಯ್ಕ ಮತ್ತು ಉಳವಿಯ ಗಂಗಾಧರಪ್ಪ (ಇವರಿಬ್ಬರೂ ಸಮಾಜವಾದಿ ಪಕ್ಷದಿಂದ ಗೆದ್ದವರು) ಇತ್ಯಾದಿ ಏಳುಮಂದಿ ಜಿಲ್ಲಾ ಪಂಚಾಯ್ತಿ ಸದಸ್ಯರನ್ನು ಮೊನ್ನೆಯಷ್ಟೇ ಯಡ್ಡಿ ಮಗ ರಾಘು ಖರೀದಿಸಿದ್ದಾನೆ.

ಜಿ.ಪಂ. ಸದಸ್ಯರ ಭಾರೀ ಬಿಕರಿ

ಹಕೀಕತ್ತೇನೆಂದರೆ ಕಾಂಗ್ರೆಸ್ಸಿನ ಮೂವರೂ ಮತ್ತು ಸಮಾಜವಾದಿ ಪಕ್ಷದ ಈ ನಾಲ್ವರು ಜಿ.ಪಂ. ಸದಸ್ಯರುಗಳಿಗೆ ಯಡ್ಡಿ ಪ್ರಸಾದವಾಗಿ ದಕ್ಕಿದ್ದು ತಲಾ ಇಪ್ಪತ್ತೈದು ಲಕ್ಷ ರೂಪಾಯಿಗಳ ಪಾಪದ ದುಡ್ಡು!

ಇಂಥ ದುಡ್ಡುಬಾಕ ಜಿ.ಪಂ. ಸದಸ್ಯರುಗಳ ಖರೀದಿಗೆಂದೇ ಒಂದೂ ಮುಕ್ಕಾಲು ಕೋಟಿ ಕಾಸು ಬಿಚ್ಚಿದ್ದ ಯಡ್ಡಿ ಮಗ ರಾಘು ಈ ಚುನಾವಣೆಯಲ್ಲಿ ಮಾಡಿದ ಮತ್ತೊಂದು ಖರೀದಿಯೆಂದರೆ ಬಂಗಾರಪ್ಪನವರ ಸಮಾಜವಾದಿ ಪಕ್ಷಕ್ಕೆ ಶಿವಮೊಗ್ಗ ಜಿಲ್ಲಾ ಅಧ್ಯಕ್ಷನಾಗಿದ್ದ ಫಯಾಜ್ ಅಹ್ಮದ್. ನಿನ್ನೆಮೊನ್ನೆಯ ತನಕ ಬಂಗಾರಪ್ಪನವರ ಭಜನೆ ಮಾಡಿಕೊಂಡಿದ್ದ ಫಯಾಜ್ ಅಹ್ಮದ್ ಕೇವಲ ಐದು ಲಕ್ಷಕ್ಕೆ ಬಿಜೆಪಿಗೆ ಹಾರುತ್ತಾನೆಂದರೆ ಇನ್ನು ಜನಸಾಮಾನ್ಯರದು ಯಾವ ಲೆಕ್ಕ?


ಸದ್ಯ ಇಡೀ ಶಿವಮೊಗ್ಗದುದ್ದಕ್ಕೂ ಯಡ್ಡಿ ಮಕ್ಕಳ ಕುರುಡು ಕಾಂಚಾಣವೇ ಕುಣಿದಾಡುತ್ತಿದೆ. ಒಂದೆಡೆ ಯಡ್ಡಿ ಒಡೆತನದ ಜನಶಿಕ್ಷಣ ಸಂಸ್ಥೆಯನ್ನೇ ತನ್ನ ಹುತ್ತವನ್ನಾಗಿ ಮಾಡಿಕೊಂಡು ಬೇಕಾಬಿಟ್ಟಿ ಹೊಲಿಗೆ ಮಿಷಿನ್‌ಗಳನ್ನು ಹಂಚುವ ಯಡ್ಡಿ ಪುತ್ರಿ ಅರುಣಾ ದೇವಿ, ಇನ್ನೊಂದೆಡೆ ಯಡ್ಡಿಯ ಪಿಇಎಸ್ ಕಾಲೇಜಿನಲ್ಲಿ ನೋಟಿನ ಕಂತೆಗಳ ಮೇಲೆ ಕೂತ ಮಗ ವಿಜಯೇಂದ್ರ, ಮತ್ತೊಂದೆಡೆ ಮನೆಮನೆ ಸುತ್ತಿ ಚಿನ್ನದ ಉಂಗುರಗಳನ್ನು ವಿತರಿಸುತ್ತಿರುವ ಅಭ್ಯರ್ಥಿ ರಾಘವೇಂದ್ರ, ಮಗದೊಂದೆಡೆ ಮುಖ್ಯಮಂತ್ರಿಯ ಪರಮಾಪ್ತ ವಕೀಲ ಕೆ. ದಿವಾಕರ್; ಹೀಗೆ ಎತ್ತಿಂದೆತ್ತ ನೋಡಿದರೂ ಯಡ್ಡಿ ಪಾಪದ ದುಡ್ಡೇ ಕಣ್ಣು ಕುಕ್ಕುತ್ತಿದೆ.


ಕುಮಾರ್ ಬಂಗಾರಪ್ಪ

ಶಿವಮೊಗ್ಗ ನಗರದುದ್ದಕ್ಕೂ ಇರುವ ನೂರೈವತ್ತು ಸ್ತ್ರೀಶಕ್ತಿ ಗುಂಪುಗಳಿಗೆಂದೇ ತಲಾ ಐದು ಸಾವಿರದಂತೆ ಬಟವಾಡೆಯಾಗಿದೆ. ಇದಲ್ಲದೇ ಬಿಡಿಬಿಡಿಯಾಗಿರುವ ಮಹಿಳಾ ಸಂಘಗಳ ನಾಯಕಿಯರನ್ನು ಕರೆಸಿಕೊಂಡ ಅರುಣಾದೇವಿ ಪ್ರತಿ ಸಂಘಕ್ಕೂ ಕನಿಷ್ಠ ಐದು ಹೊಲಿಗೆ ಮಿಷನ್ನುಗಳ ಕೂಪನ್ ಕೊಡುತ್ತಾಳೆ. ಇಂಥ ಒಂದು ಹೊಲಿಗೆ ಯಂತ್ರದ ಬೆಲೆ ಕನಿಷ್ಠ ನಾಲ್ಕು ಸಾವಿರ. ಈ ಥರದ ಐನೂರು ಹೊಲಿಗೆ ಯಂತ್ರಗಳನ್ನು ಅರುಣಾದೇವಿ ಒಬ್ಬಳೇ ಹಂಚಿದ್ದಾಳೆ. ಇನ್ನು ಅಭ್ಯರ್ಥಿ ರಾಘವೇಂದ್ರನ ಕಾರ್ಯಾಚರಣೆಯೇ ವಿಚಿತ್ರ. ಹಳೇ ಬಿಜೆಪಿ ಕಾರ್ಯಕರ್ತರಾಗಿರಲಿ, ಸಂಘ ಪರಿವಾರದವರಾಗಲಿ ಆತನ ಜೊತೆ ಪ್ರಚಾರಕ್ಕಿಳಿಯದೇ ಒಂದಷ್ಟು ಮಂದಿ ಪಡ್ಡೆ ಮಾರ್ವಾಡಿ ಹುಡುಗರ ಜೊತೆ ಮನೆಮನೆ ಸುತ್ತುತ್ತಾನೆ. ಅದೂ ಪಕ್ಕಾ ಬಿಜೆಪಿ ಮತದಾರರನ್ನು ರಾಘು ಮೂಸಿ ಕೂಡ ನೋಡುವುದಿಲ್ಲ.

15 ಸಾವಿರ ಚಿನ್ನದ ಉಂಗುರ

ಯಾರು ಬಿಜೆಪಿಯ ವಿರೋಧಿಗಳಿರುತ್ತಾರೋ, ವಿಶೇಷವಾಗಿ ಜೆಡಿಎಸ್ ಅಥವಾ ಯುವಕ ಸಂಘಗಳನ್ನೇ ಆಯ್ದು ರಾಘು ಬಲೆ ಬೀಸುತ್ತಾನೆ. ಆಯಾ ಯುವಕ ಸಂಘದ ಹುಡುಗರೆಲ್ಲರೂ ನೋಡುವಂತೆ 25 ಸಾವಿರ ರೂಪಾಯಿ ಎಣಿಸಿಕೊಡುತ್ತಾನೆ, ಆನಂತರ ಪ್ರತ್ಯೇಕವಾಗಿ ಅದೇ ಸಂಘದ ಲೀಡರ್‌ನನ್ನು ಕರೆಸಿಕೊಂಡು ಮತ್ತೆ ಇಪ್ಪತ್ತೈದೋ ಮುವತ್ತೋ ಸಾವಿರದ ನೋಟು ತುರುಕುತ್ತಾನೆ. ಮೊದಲು ಕೊಟ್ಟ 25 ಸಾವಿರ ರೂ.ಗಳನ್ನು ಸಂಘದ ಇತರೇ ಸದಸ್ಯರಿಗೆ ಹಂಚುವ ಲೀಡರ್ ರಹಸ್ಯವಾಗಿ ರಾಘು ಕೊಟ್ಟ ಕಾಸನ್ನು ತಾನಿಟ್ಟುಕೊಳ್ಳುತ್ತಾನೆ. ಇಲ್ಲಿ ತತ್ವನಿಷ್ಠೆ ಪಕ್ಷನಿಷ್ಠೆಗಿಂತಲೂ ಕಾಂಚಾಣ ನಿಷ್ಠೆಯೇ ಹೆಚ್ಚು ಕೆಲಸ ಮಾಡುತ್ತದೆ.


ಹಾಲಪ್ಪ

ಇದು ಮತದಾರರಿಗೆ ವೈಯಕ್ತಿಕವಾಗಿ ಬಟವಾಡೆಯಾಗುವ ಬಿಜೆಪಿ ದುಡ್ಡು. ಇದಲ್ಲದೇ ಮತದಾನದ ದಿನಕ್ಕೆಂದೇ ವಿಶೇಷ ಬಜೆಟ್ಟೊಂದನ್ನು ಯಡ್ಡಿ ಗ್ಯಾಂಗ್ ರೆಡಿ ಮಾಡಿದೆ. ಅದು ಪ್ರತಿ ಬೂತಿಗೆಂದು ಹಂಚಿಕೆಯಾಗುವ ಮೂರು ಲಕ್ಷದ ಮೊತ್ತವಷ್ಟೇ ಅಲ್ಲ; ಪ್ರತಿ ಹಳ್ಳಿಗೂ ಕನಿಷ್ಠ ಇಪ್ಪತ್ತು ಕೇಸ್‌ಗಳಷ್ಟು ಕಳಪೆ ವಿಸ್ಕಿಯೂ ಸೇರುತ್ತದೆ. ಶಿವಮೊಗ್ಗದ 1600 ಕ್ಕೂ ಅಧಿಕ ಬೂತ್‌ಗಳಿಗೆ ತಲಾ ಮೂರು ಲಕ್ಷದಂತೆ ಲೆಕ್ಕ ಹಾಕಿದರೆ ಅದೇ ನಲವತ್ತು ಕೋಟಿಗೂ ಮೀರಿದ ಮೊತ್ತವಾಗುತ್ತದೆ. ಇದಲ್ಲದೇ ಬೂತ್ ಒಂದಕ್ಕೆ ಕನಿಷ್ಠ ಐವತ್ತು ಸಾವಿರ ರೂಪಾಯಿಯ ಲಿಕ್ಕರ್ ಎಂದಿಟ್ಟುಕೊಂಡರೂ ಅದು ಎಂಟು ಕೋಟಿಯ ಪಾಪದ ದುಡ್ಡಾಗುತ್ತದೆ.

ಹೆಂಡದ ಹೊಳೆ

ಆದರೆ ಸಮಸ್ಯೆಯಿರುವುದು ಇಂಥ ಲಿಕ್ಕರ್‌ನ ಬಟವಾಡೆಯಲ್ಲಿ, ಅದೂ ನರೇಂದ್ರ ಮೋದಿಯ ರಾಜ್ಯವಾದ ಗುಜರಾತ್ ಮೂಲಕ ಬಂದ ಬೃಹತ್ ಪ್ರಮಾಣದ ಕಳಪೆ ವಿಸ್ಕಿ. `Boss' ಎಂಬ ವಿಚಿತ್ರ ಹೆಸರಿನ ಲೇಬಲ್ಲುಗಳಿದ್ದ ವಿಸ್ಕಿ ಬಾಟಲಿಯ ಕೇಸುಗಳಿದ್ದ ಮೂವತ್ತಕ್ಕೂ ಹೆಚ್ಚು ಲಾರಿ ಲೋಡುಗಳು ಶಿವಮೊಗ್ಗಕ್ಕೆ ಬಂದಿದ್ದು ಗುಜರಾತಿನಿಂದ.

ಮೂಲತಃ ಇದು ಉತ್ತರ ಭಾರತದ ರಾಜ್ಯಗಳಲ್ಲಿ ಸೃಷ್ಟಿಯಾದ ಕಳಪೆ ದರ್ಜೆಯ, ವಿಷಕಾರಿ ರಾಸಾಯನಿಕ ಮಿಶ್ರಿತ ಥರ್ಡ್ಸ್ ವಿಸ್ಕಿ. ಇಂಥ 37 ಲೋಡುಗಳಷ್ಟು ವಿಷಕಾರಿ ವಿಸ್ಕಿ ಮಹಾರಾಷ್ಟ್ರ ಮೂಲಕ ಹೇಗೆ ಕರ್ನಾಟಕಕ್ಕೆ ಬಂತೆಂಬುದೇ ನಿಗೂಢ. ಕೆಲ ಅಬಕಾರಿ ಸಿಬ್ಬಂದಿಗಳೇ ಹೇಳುವಂತೆ ಇಂಥ ಒಂದೊಂದು ಲಾರಿ ಲೋಡನ್ನೂ ಶಿವಮೊಗ್ಗದ ಅಬಕಾರಿ ಸೂಪರಿಂಟೆಂಡೆಂಟ್ ಜಗದೀಶನೇ ಸಂಬಂಧಪಟ್ಟ ಜಾಗಕ್ಕೆ ಸಾಗಿಸುವ ಘನಕಾರ್ಯವೆಸಗಿದ್ದಾನೆ. ಜೊತೆಗೆ ಜಿಲ್ಲಾ ಪೊಲೀಸ್ ಸೂಪರಿಂಟೆಂಡೆಂಟ್ ಮುರುಗನ್ ಮತ್ತು ಶಿವಮೊಗ್ಗದ ಜಿಲ್ಲಾಧಿಕಾರಿ ಪಂಕಜ್ ಕುಮಾರ್ ಪಾಂಡೆ ಸಾಹೇಬರ ಶ್ರೀರಕ್ಷೆಯಲ್ಲೇ ಇಡೀ ಜಿಲ್ಲೆಯಾದ್ಯಂತ ಹೆಂಡದ ಬಟವಾಡೆಯಾಗಿದೆ.

ಇದಕ್ಕೆ ಪಕ್ಕಾ ಉದಾಹರಣೆಯಂತಿದ್ದದ್ದು ಏಪ್ರಿಲ್ 10ರ ಉಳವಿಯ ಶೂಟೌಟ್ ಪ್ರಸಂಗ. ಸೊರಬದ ಬಿಜೆಪಿ ಪ್ರಧಾನ ಕಾರ್ಯದರ್ಶಿ ಗಜಾನನರಾವ್ ಎಂಬಾತನ ರೈಸ್‌ಮಿಲ್ಲಿನಲ್ಲಿ ಗುಡ್ಡೆ ಹಾಕಿದ ಲೋಡುಗಟ್ಟಲೇ ಗುಜರಾತಿ ವಿಸ್ಕಿಯನ್ನು ಸಾಕ್ಷಾತ್ ಮಂತ್ರಿ ಹರತಾಳು ಹಾಲಪ್ಪನೇ ಕೂತು ಹಂಚುತ್ತಿದ್ದ. ಇದು ಕಾಂಗ್ರೆಸ್ ಕಾರ್ಯಕರ್ತರಿಗೆ ಗೊತ್ತಾಗಿ ಮಾಜಿ ತಾಲ್ಲೂಕು ಪಂಚಾಯ್ತಿ ಸದಸ್ಯ ಮಂಜುನಾಥ್ ನೇತೃತ್ವದಲ್ಲಿ ನೂರಾರು ಮಂದಿ ರೈಸ್‌ಮಿಲ್ಲಿಗೆ ಮುತ್ತಿಗೆ ಹಾಕಿದ್ದಾರೆ. ಸ್ಥಳಕ್ಕೆ ಪೊಲೀಸರು, ಚುನಾವಣಾ ಅಧಿಕಾರಿಗಳು ಎಲ್ಲರೂ ಬಂದಿದ್ದಾರೆ. ದುರಂತವೆಂದರೆ ಸ್ವತಃ ಎಸ್.ಪಿ. ಮುರುಗನ್ ಸಾಹೇಬರೇ ಹಂಚಲು ತಂದಿದ್ದ ಲಿಕ್ಕರ್ ಕೇಸುಗಳನ್ನು ಬೇರೆಡೆಗೆ ಸಾಗಿಸಲು ಅನುವು ಮಾಡಿಕೊಟ್ಟಿದ್ದಾರೆ.

ಮಂತ್ರಿ ಹಾಲಪ್ಪನ ಗೂಂಡಾಗಿರಿ

ಇದರಿಂದ ಕೆರಳಿದ ಕಾಂಗ್ರೆಸ್ ಕಾರ್ಯಕರ್ತರು ಮತ್ತು ಜನ ಮಂತ್ರಿ ಹಾಲಪ್ಪನ ಸಮೇತ ಸಾಗಿಸುತ್ತಿದ್ದ ಲಿಕ್ಕರ್ ಕೇಸುಗಳನ್ನು ತಡೆದರೆ; ಬಿಜೆಪಿಯ ಗೂಂಡಾಗಳು ಮತ್ತು ಪೊಲೀಸರು ಸೇರಿಕೊಂಡೆ ಜನರನ್ನು ಹಿಡಿದು ಬಡಿಯಲಾರಂಭಿಸಿದ್ದಾರೆ. ಯಾವತ್ತು ಮಂತ್ರಿ ಹಾಲಪ್ಪನ ಗೂಂಡಾಗಳಿಂದ ಮಾಜಿ ತಾ.ಪಂ. ಸದಸ್ಯ ಕೆ. ಮಂಜುನಾಥ್ ಮೇಲೆ ಭೀಕರ ಹಲ್ಲೆಯಾಯಿತೋ ರಕ್ತ ಸುರಿಸುತ್ತಾ ನೆಲಕ್ಕೆ ಕುಸಿದು ಬಿದ್ದಿದ್ದಾರೆ ಮಂಜುನಾಥ್. ಇದನ್ನು ಕಂಡೇ ಕೆರಳಿದ ಜನ ಮಂತ್ರಿ ಹರತಾಳು ಹಾಲಪ್ಪನವರಿಗೆ ಮುತ್ತಿಗೆ ಹಾಕಿದ್ದಾರೆ. ಅಷ್ಟರಲ್ಲೇ ಹಾಲಪ್ಪನವರ ಗನ್‌ಮ್ಯಾನ್ ತನ್ನ ಬಂದೂಕು ಹಿಡಿದವನೇ ಜನರ ಮೇಲೆಯೇ ಗುಂಡು ಹಾರಿಸಿಬಿಟ್ಟ. ಅದೃಷ್ಟವಶಾತ್ ಹಾರಿದ ಗುಂಡು ಜನಕ್ಕೆ ಬಿದ್ದಿಲ್ಲ.




ಆದರೆ ವಿಧಿಯಿಲ್ಲದೇ ಲಿಕ್ಕರ್ ವಶಪಡಿಸಿಕೊಂಡ ಪೊಲೀಸರು ಮುತ್ತಿಗೆ ಹಾಕಿದ್ದ ಜನರ ಮೇಲೇ ಲಾಠಿಚಾರ್ಜ್ ಮಾಡಿ ಕುಮಾರ್ ಬಂಗಾರಪ್ಪನವರ ಮೇಲೊಂದು ಕೇಸು ಹಾಕಿ ತಿಪ್ಪೆಸಾರಿಸಿಬಿಟ್ಟರು!

ಇದು ಶಿವಮೊಗ್ಗದ ಪೊಲೀಸರ ಬಿಜೆಪಿ ನಿಷ್ಠೆ. ಯಾವ ಜನ ಮಂತ್ರಿಯೇ ನಿಂತು ಲಿಕ್ಕರ್ ಹಂಚುತ್ತಿದ್ದ ಬಗ್ಗೆ ಮಾಹಿತಿ ಕೊಟ್ಟರೋ ಆಗಲೂ ಪೊಲೀಸರು ಮಿಸುಕಾಡಿಲ್ಲ, ಕೊನೆಗೆ ಜನರೇ ಮುತ್ತಿಗೆ ಹಾಕಿದರೆ ಜನರಿಗೇ ಲಾಠಿ ಏಟು ಮತ್ತು ಕಾಂಗ್ರೆಸ್ ನಾಯಕ ಕುಮಾರ್ ಬಂಗಾರಪ್ಪರ ವಿರುದ್ಧ ಖೊಟ್ಟಿ ಕೇಸು.

ಬೀದಿಗಿಳಿದ ಜನತೆ

ಇದು ಕೇವಲ ಉಳವಿಯ ಘಟನೆಯೊಂದೇ ಅಲ್ಲ, ತೀರ್ಥಹಳ್ಳಿಯ ತನಿಕಲ್‌ನಲ್ಲಿ ಬಿಜೆಪಿ ನಾಯಕ ಮತ್ತು ಖದೀಮ ಕಂಟ್ರಾಕ್ಟರ್ ರಾಜಣ್ಣನ ಮನೆಯಲ್ಲೇ 32 ಲಕ್ಷ ರೂಪಾಯಿಗಳ Boss ವಿಸ್ಕಿ ಪತ್ತೆಯಾಗಿತ್ತು. ಅದೂ 10 ಚಕ್ರಗಳಿದ್ದ ದೈತ್ಯ ಲಾರಿಯೊಂದರಲ್ಲಿ ಗುಜರಾತ್‌ನಿಂದ ಬಂದ ಲಿಕ್ಕರ್ ರಾಶಿಯಾಗಿತ್ತು. ಇಲ್ಲೂ ಕೂಡ ಜನರೇ ಮುತ್ತಿಗೆ ಹಾಕಿ ಲಿಕ್ಕರ್ ಗೋದಾಮನ್ನು ಪೊಲೀಸರಿಗೆ ತೋರಿಸಿಕೊಟ್ಟರೆ ಪೊಲೀಸರಾಗಲಿ, ಅಬಕಾರಿ ಅಧಿಕಾರಿ ಗಳಾಗಲಿ ನಯಾಪೈಸೆಯ ಕ್ರಮ ಕೈಗೊಳ್ಳಲಿಲ್ಲ. ಇದರ ಬೆನ್ನಿಗೆ ಶಿವಮೊಗ್ಗದ ತುಂಗಾ ನಗರ ಪೊಲೀಸರು ಚುನಾವಣೆಗೆ ಹಂಚಲೆಂದು ಸಾಗಿಸುತ್ತಿದ್ದ ಒಂದು ಲಾರಿ ಲೋಡಿನಷ್ಟಿದ್ದ ರೇಷ್ಮೆ ಸೀರೆಗಳನ್ನು ಹಿಡಿದಿದ್ದಾರೆ. ಅದೂ ಕೂಡ ಜನರೇ ನುಗ್ಗಿ ಹಿಡಿದುಕೊಟ್ಟಿದ್ದ ಸೀರೆ ಲೋಡು. ಹಾಗಿದ್ದೂ ಪೊಲೀಸರು ಸಿಕ್ಕಿಬಿದ್ದ ಸೀರೆಗಳ ರಾಶಿಯ ಸಣ್ಣದೊಂದು ಫೋಟೋ ತೆಗೆಯುವುದಕ್ಕೂ ಅವಕಾಶ ಮಾಡಿಕೊಟ್ಟಿಲ್ಲ. ಎಷ್ಟು ಸೀರೆ, ಯಾವ ಸೀರೆ ಇತ್ಯಾದಿ ಯಾವೊಂದು ಮಾಹಿತಿಯನ್ನೂ ನೀಡುತ್ತಿಲ್ಲ. ಕನಿಷ್ಠ ಸೀರೆ


ಮಂಜುನಾಥ್

ಸಾಗಿಸುತ್ತಿದ್ದ ಆರೆಸ್ಸೆಸ್ ನಾಯಕ ಪರಶುರಾಮ್ ಎಂಬಾತನನ್ನಾಗಲಿ ಯಡ್ಡಿಯ ಚೇಲಾ ಅರುಣ್‌ಕುಮಾರ್ ಎಂಬ ಶಿಕಾರಿಪುರ ಪುರಸಭೆಯ ಅಧ್ಯಕ್ಷನನ್ನಾಗಲಿ ಬಂಧಿಸಿಲ್ಲ.

ಹೀಗೆ ಪೊಲೀಸರು ಮತ್ತು ಜಿಲ್ಲಾಧಿಕಾರಿ ಪಂಕಜ್ ಕುಮಾರ್ ಪಾಂಡೆಯೇ ಬಿಜೆಪಿಯ ಏಜೆಂಟರಂತೆ ಚುನಾವಣಾ ಅಕ್ರಮದಲ್ಲಿ ಶಾಮೀಲಾಗಿದ್ದರ ವಿರುದ್ಧ ಜಿಲ್ಲೆಯಾದ್ಯಂತ ಪ್ರತಿಭಟನೆಗಳಾಗಿವೆ. ತೀರ್ಥಹಳ್ಳಿಯ ಶಾಸಕ ಕಿಮ್ಮನೆ ರತ್ನಾಕರ್ ನೇತೃತ್ವದಲ್ಲಿ ಸಾವಿರಾರು ಜನ ಬೀದಿಗಿಳಿದು ಪ್ರತಿಭಟಿಸಿದ್ದಾರೆ. ಯಾವತ್ತು ಜಿಲ್ಲಾಡಳಿತದ ವಿರುದ್ಧವೇ ಜನ ಬೀದಿಗಿಳಿಯುವುದು ಸಾಮಾನ್ಯವಾಯಿತೋ, ಜನರ ಕಣ್ಣೊರೆಸಬೇಕಲ್ಲ-

ಹುಷಾರಾದ ಪೊಲೀಸ್ ವರಿಷ್ಠ ಮುರುಗನ್ ಮತ್ತು ಡೀಸಿ ಪಂಕಜ್‌ಕುಮಾರ್ ಪಾಂಡೆ ಪತ್ರಿಕಾಗೋಷ್ಠಿ ಕರೆದಿದ್ದೇ 'ಎಲ್ಲೆಲ್ಲಿ ನಕಲಿ ವಿಸ್ಕಿಗಳು ಜಪ್ತಾಗಿಯೋ ಅದೆಲ್ಲ ಬಿಜೆಪಿಗಳದ್ದೇ....' ಎಂದು ಪ್ರಾಮಾಣಿಕವಾಗಿ ಒಪ್ಪಿಕೊಂಡರು. ಏಪ್ರಿಲ್ 10 ರಂದು ಮತ್ತೊಂದು ಪತ್ರಿಕಾಗೋಷ್ಠಿ ಕರೆದ ಜಿಲ್ಲಾಧಿಕಾರಿ ಪಂಕಜ್‌ಕುಮಾರ್ ಪಾಂಡೆ ಗುಜರಾತ್‌ನಿಂದ ಬಂದ 'Boss' ವಿಸ್ಕಿಯನ್ನು ಯಾರೂ ಕುಡಿಯಬಾರದೆಂದೂ, ಅದರಲ್ಲಿ ವಿಷಕಾರಕ ರಾಸಾಯನಿಕಗಳಿವೆಯೆಂದೂ' ಅಧಿಕೃತವಾಗಿ ಪತ್ರಿಕಾ ಹೇಳಿಕೆ ಕೊಟ್ಟರು!

ಜಿಲ್ಲಾಧಿಕಾರಿ ಪಂಕಜ್‌ಕುಮಾರ್ ಪಾಂಡೆ ಸಾಹೇಬರೇ ಸಹಿ ಹಾಕಿ ಎಲ್ಲಾ ಪತ್ರಿಕಾ ಕಚೇರಿಗಳಿಗೂ ಇಂಥದೊಂದು ಹೇಳಿಕೆ ಕಳಿಸಿದ್ದಾರೆ. ಈಗಾಗಲೇ ಅಬಕಾರಿ ಇಲಾಖೆ ಶಿವಮೊಗ್ಗ ಜಿಲ್ಲೆಯಾದ್ಯಂತ ನಿಷೇಧಿತ ಲಿಕ್ಕರ್‌ಗೆ ಸಂಬಂಧಪಟ್ಟಂತೆ ನೂರಿಪ್ಪತ್ತು ಮೊಕದ್ದಮೆಗಳನ್ನು ದಾಖಲಿಸಿದೆ. 'ಪೊಲೀಸ್ ಇಲಾಖೆಯಂತೂ ನೂರಾ ಐವತ್ತೊಂಭತ್ತು ಪ್ರಕರಣಗಳಲ್ಲಿ 'Boss' ವಿಸ್ಕಿಯ ಕೇಸುಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ. ಅಷ್ಟೇ ಸಂಖ್ಯೆಯ ಕೇಸುಗಳನ್ನೂ ದಾಖಲಿಸಿದ್ದಾರೆ. ಈ ಎಲ್ಲಾ ಪ್ರಕರಣಗಳಲ್ಲೂ ಆರೆಸ್ಸೆಸ್ ಮತ್ತು ಬಿಜೆಪಿ ನಾಯಕರೇ ಆರೋಪಿಗಳು!

ಮಂತ್ರಿ ಹಾಲಪ್ಪನ ಭಾನಗಡಿ

ಏಪ್ರಿಲ್ 10 ರಂದು ಉಳವಿಯಲ್ಲಿ ಮಂತ್ರಿ ಹಾಲಪ್ಪನೇ ನಿಂತು ಲಿಕ್ಕರ್ ಹಂಚುತ್ತಿದ್ದದ್ದು ಮತ್ತು ಮುತ್ತಿಗೆ ಹಾಕಿದ ಜನರ ಮೇಲೆ ಗುಂಡು ಹಾರಿಸಿದ ಘಟನೆ ನಡೆದ ಮರುದಿನವೇ ಉಳವಿಯ ಸುತ್ತಮುತ್ತಲ ಓಟೂರು, ಕುದ್ರೆಗಣಿ, ಚಿತ್ರಟ್ಟೆ ಹಳ್ಳಿಗಳಲ್ಲಿ ಲೋಡುಗಟ್ಟಲೇ ಲಿಕ್ಕರ್ ಜಪ್ತಾಗುತ್ತದೆ. ಇದೆಲ್ಲವೂ ಜನರೇ ಪತ್ತೆ ಹಚ್ಚಿ ಮುತ್ತಿಗೆ ಹಾಕಿ ಪೊಲೀಸರಿಗೊಪ್ಪಿಸಿದ ಪ್ರಕರಣಗಳೇ ಹೊರತು ಎಲ್ಲೂ ಪೊಲೀಸರೇ ಮುಂದಾಗಿ ಲಿಕ್ಕರ್ ಜಪ್ತಿ ಮಾಡಿಕೊಂಡಿದ್ದಾಗಲಿ, ಜಿಲ್ಲಾಡಳಿತವೇ ಮುತುವರ್ಜಿ ವಹಿಸಿ ಕ್ರಮ ಜರುಗಿಸಿದ್ದಾಗಲಿ ಇಲ್ಲ. ಇದರರ್ಥ ಇಡೀ ಸರ್ಕಾರವೇ ಓಟು ಖರೀದಿಯ ಪಾಪಕ್ಕೆ ಕೈಹಾಕಿದೆ.


ಓರ್ವ ಜಿಲ್ಲಾಧಿಕಾರಿಯೇ ಪತ್ರಿಕಾಗೋಷ್ಠಿ ಕರೆದು ಬಿಜೆಪಿಯವರು ಹಂಚಿದ ವಿಷಕಾರಕ ವಿಸ್ಕಿ ಕುಡಿದು ಸಾಯಬೇಡಿ ಎಂದು ಜನಕ್ಕೆ ಮನವಿ ಮಾಡಿಕೊಳ್ಳುತ್ತಾರೆಂದರೆ, ಪೊಲೀಸರು ವಶಪಡಿಸಿಕೊಂಡ ಲಿಕ್ಕರ್ ಮತ್ತು ಸೀರೆಗಳೆಲ್ಲ ಬಿಜೆಪಿಗೇ ಸೇರಿದ್ದೆಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಯೇ ಒಪ್ಪಿಕೊಳ್ಳುತ್ತಾರೆಂದರೆ; ಮುಖ್ಯಮಂತ್ರಿಯ ಮಗನನ್ನೇ ತಾನೇ ಸರ್ಕಾರ ಬಂಧಿಸಬೇಕು?

ಮಂತ್ರಿಯೇ ನಿಂತು ಲಿಕ್ಕರ್ ಹಂಚುತ್ತಾನೆ. ಮುತ್ತಿಗೆ ಹಾಕಿದ ಜನರ ಮೇಲೆ ಮಂತ್ರಿಯ ಗನ್‌ಮ್ಯಾನ್ ಗುಂಡು ಹಾರಿಸುತ್ತಾನೆ. ಮುಖ್ಯಮಂತ್ರಿ ಮಗನೇ ನಿಂತು ಮತದಾರರಿಗೆ ಚಿನ್ನದ ಉಂಗುರ ಕೊಡುತ್ತಾನೆ. ಆರೆಸ್ಸೆಸ್-ಬಿಜೆಪಿಯ ನಾಯಕರ ಮನೆಗಳೇ ಕಳ್ಳ ಲಿಕ್ಕರ್‌ನ ಗೋದಾಮುಗಳಾಗುತ್ತವೆ. ಪೊಲೀಸರೇ ಅಸಹಾಯಕರಂತೆ ಹಿಡಿದುಕೊಟ್ಟವರ ಮೇಲೇ ಕೇಸು ಹಾಕುತ್ತಾರೆಂದರೆ; ಶಿವಮೊಗ್ಗದಲ್ಲಿ ನಡೆಯುತ್ತಿರುವುದು ಚುನಾವಣೆಯಾ ಅಥವಾ ಮುಖ್ಯಮಂತ್ರಿಯೇ ನಿಂತು ನಡೆಸುತ್ತಿರುವ ಗೂಂಡಾಗಿರಿಯಾ?

ಜನ ಯಾರಿಗೆ ದೂರು ಕೊಡಬೇಕು? ಹೆಚ್ಚೂಕಮ್ಮಿ ನೂರು ಕೋಟಿ ಸುರಿದು, ಹೆಂಡದ ಹೊಳೆ ಹರಿಸಿ, ಪೊಲೀಸರ ಮೂಲಕವೇ ದಬ್ಬಾಳಿಕೆ ನಡೆಸಿ ತನ್ನ ಮಗನನ್ನು ಗೆಲ್ಲಿಸ ಹೊರಟ ಮುಖ್ಯಮಂತ್ರಿಗೆ ಕನಿಷ್ಠ ನಾಚಿಕೆಯಿಂಬುದೇ ಇಲ್ಲವೆ?

[illegible] ರದ ಯಾವ ಮುಖ್ಯಮಂತ್ರಿ ಹಾಗೇ [illegible]

ನ್ಯಾಯವಾದಿ ನೌಷಾದ್ ಕೊಲೆ: ಪೊಲೀಸ್ ರಾಜ್ಯವಾಗುತ್ತಿರುವ ಕರ್ನಾಟಕ





ಜೆ.ರಾಜಶೇಖರ
ಕೆ.ಫಣಿರಾಜ್

ರಾಮ್ ಜೇಠ್ಮಲಾನಿ ಭಾರತದ ಪ್ರಖ್ಯಾತ ಕ್ರಿಮಿನಲ್ ವಕೀಲರು. ಅವರು ಭೂಗತ ಲೋಕದ ಪಾತಕಿಗಳೆಂದು ಗುರುತಿಸುವ ಮಂದಿಯ ಪರವಾಗಿ ವಕಾಲತ್ತು ಮಾಡಿದ್ದಲ್ಲದೇ, ಶ್ರೀಮತಿ ಇಂದಿರಾಗಾಂಧಿಯವರ ಹತ್ಯೆಯ ಅಪರಾಧಿಗಳ ಪರವಾಗಿ ವಾದಿಸಿ ಒಬ್ಬನನ್ನು ಆ ಆಪಾದನೆಯಿಂದ ಮುಕ್ತಗೊಳಿಸಿದವರು. ಆ ಕಟ್ಲೆಯನ್ನು ಯಾರೂ ನಿರ್ವಹಿಸಕೂಡದು ಎಂದು ಬಿಜೆಪಿ ತಾಕೀತು ಮಾಡಿದಾಗಲೂ ಜೇಠ್ಮಲಾನಿ ಭಾರತದ ಅಪರಾಧ ನ್ಯಾಯ ಸಂಹಿತೆಯನ್ವಯ 'ಆರೋಪಿತ/ಳ' 'ಅಪರಾಧ' ಸಾಬೀತಾಗದ ಹೊರತು ಅವನು/ಅವಳು 'ಅಪರಾಧಿ'ಯಲ್ಲ; ಈ ಪ್ರಕ್ರಿಯೆಯಲ್ಲಿ 'ಆರೋಪಿತ'ರ ಪರವಾಗಿ ವಾದಿಸಿ ಅವರನ್ನು 'ಅಪರಾಧಿ' ಸ್ಥಾನದಿಂದ ಮುಕ್ತಗೊಳಿಸುವುದು ಭಾರತದ ಸಂವಿಧಾನದಿಂದ ಅಂಗೀಕೃತವಾದ, ಜಾಗತಿಕ ನ್ಯಾಯನಿರ್ಣಯ ಸಂಹಿತೆಗೆ ಸೂಕ್ತವಾಗಿರುವ ನಿಲುವು ಎಂದೇ ಪರಿಗಣಿಸಿ ತಮ್ಮ ವಾದವನ್ನು ಮಂಡಿಸಿದರು.

ನೌಷದ್ ಷಾ

ಮುಂಬೈ ಭಯೋತ್ಪಾದಕ ದಾಳಿಯಲ್ಲಿ ಅಜ್ಮಲ್ ಕಸಬ್‌ನ ಪಾತ್ರವೇನು ಎಂಬುದು ಈಗ ಭಾರತದ ಕೋಟ್ಯಾಂತರ ಜನರಿಗೆ ಗೊತ್ತಿದೆ. ಹಾಗೆಂದು ಅವನನ್ನು ರಸ್ತೆಯಲ್ಲಿ ನಿಲ್ಲಿಸಿ ಗುಂಡಿಕ್ಕಿ ಕೊಲ್ಲುವುದನ್ನು ಭಾರತದ ನ್ಯಾಯಸಂಹಿತೆ ಒಪ್ಪಿಕೊಳ್ಳುವುದಿಲ್ಲ. ಆತ ಎಸಗಿದ ಅಪರಾಧ ಬಗೆಗೆ ನಿಖರವಾದ ಆರೋಪಪಟ್ಟಿಯನ್ನು ಸಿದ್ಧಪಡಿಸಿ 'ಆರೋಪಿ'ಯನ್ನು ನ್ಯಾಯಾಲಯದ ಎದುರು ತರಬೇಕು. ಅಲ್ಲಿ 'ಆರೋಪಿ'ಯ ಪರ-ವಿರೋಧಿ ವಕೀಲರು ಕಟ್ಲೆಯ ಪರ/ವಿರುದ್ಧವಾಗಿ ತಮ್ಮ ವಾದ ಮಂಡಿಸಬೇಕು ಮತ್ತು ಆ ವಾದಗಳ ಹುರುಳು ಹಾಗೂ ಭಾರತದ ದಂಡಸಂಹಿತೆಯ ವಿವೇಚನೆಯ ಆಧಾರದಲ್ಲಿ 'ಅಪರಾಧ' ಸಾಬೀತಾದಲ್ಲಿ ನಿರ್ದಿಷ್ಟ ನ್ಯಾಯಾಲಯ ಮಾತ್ರವೇ ಶಿಕ್ಷೆಯನ್ನು ವಿಧಿಸಬೇಕು. ಈ ವಿವೇಚನೆಯಿಂದಲೇ ಮುಂಬಯಿಯ ನ್ಯಾಯಾಲಯವು ಶಿವಸೇನೆಯ ಫ್ಯಾಸಿಸ್ಟ್ ದುಂಡಾವರ್ತಿಗೆ ಮಣಿಯದೇ ಅಂಜಲಿ ವಾಗ್ಮರೆಯವರನ್ನು ಕಸಬ್‌ನ ಪರವಾಗಿ ವಾದಿಸುವಂತೆ ಆಜ್ಞೆ ಹೊರಡಿಸಿದೆ.



ಪುರುಷೋತ್ತಮ ಪೂಜಾರಿ

ಇದು ನಿಜಕ್ಕೂ ಆಧುನಿಕ ಭಾರತದ ನ್ಯಾಯಪದ್ಧತಿಯ ಗೌರವಾರ್ಹತೆಗೆ ಸಾಕ್ಷಿಯಾಗಬೇಕು. ದುರದೃಷ್ಟವೆಂದರೆ ಈ ನ್ಯಾಯವಿವೇಚನೆ ಇಂದು ನ್ಯಾಯವಾದಿಗಳಿಗೂ, ಪೊಲೀಸರಿಗೂ ಮತ್ತು ಭಾರತದ ಸುಶಿಕ್ಷಿತರು ಹಾಗು ಅಧಿಕಾರಸ್ಥರಿಗೆ ಹೊಲಸು ಒರೆಸಿಕೊಂಡು ಬಿಸಾಡುವ ಟಿಷ್ಯು ಪೇಪರಿನಂತಾಗಿದೆ. ಕರ್ನಾಟಕದ ಕರಾವಳಿಯಲ್ಲಂತೂ ಸಂಘಪರಿವಾರದ ನಂಜು ಪೊಲೀಸರ ಬುದ್ಧಿಯಲ್ಲಿ ಮಾತ್ರವಲ್ಲ, ಪತ್ರಕರ್ತರು ಹಾಗು ಜನಸಾಮಾನ್ಯರ ಬುದ್ಧಿಯಲ್ಲೂ ಏರಿ ಸಂವಿಧಾನಿಕ ಕಾನೂನಿನ ಪರಿಕಲ್ಪನೆ ಚಿಂದಿಯಾಗಿ ಹೋಗಿದೆ. ಇಲ್ಲಿನ ಅಲ್ಪಸಂಖ್ಯಾತರ ಪಾಲಿಗೆ ಇದು ಬರಿ 'ದುರಾದೃಷ್ಟ'ವಾಗಿ ಉಳಿಯದೆ ವಸ್ತುಶಃ ಫ್ಯಾಸಿಸ್ಟರು ಹಾದಿಬೀದಿಯಲ್ಲಿ ಮನಸ್ವೇಚ್ಛೆ ವಿಧಿಸುತ್ತಿರುವ 'ಮರಣದಂಡನೆ'ಯಾಗಿಬಿಟ್ಟಿದೆ. ಮಂಗಳೂರಿನ ತರುಣ ನ್ಯಾಯವಾದಿ ನೌಶಾದ್ ಕಾಶಿಮ್‌ಜಿ ಕೊಲೆ, ಕಳೆದ ಹತ್ತು ವರ್ಷಗಳಿಂದ ಕರಾವಳಿಯಲ್ಲಿ ವಿಧಿಸಲಾಗುತ್ತಿರುವ 'ಮರಣದಂಡನೆ'ಯ ಸರಣಿಯಲ್ಲಿ ತಾಜಾ ಕಂತು.


ನೌಶಾದ್ ಕಾಶಿಮ್‌ಜಿ ಏಪ್ರಿಲ್ 9ರ ಗುರುವಾರ ರಾತ್ರಿ ಅವರ ಮನೆಯ ಸಮೀಪವೇ ಕೊಲೆಯಾಗಿದ್ದಾರೆ. ಆ ಹೊತ್ತಿಗೆ ನೌಶಾದ್, ಭೂಗತ ಲೋಕದ ಡಾನ್ ದಾವೂದ್ ಇಬ್ರಾಹಿಮ್‌ನ ಗ್ಯಾಂಗಿನವನೆಂದು ಪೊಲೀಸರು ಆರೋಪಿಸಿ ಬಂಧಿಸಿದ್ದ ರಶೀದ್ ಮಲ್ಬಾರಿಯ ಪರ ವಕಾಲತ್ತು ವಹಿಸಿಕೊಂಡಿದ್ದರು. ರಶೀದ್ ವರುಣ್ ಗಾಂಧಿ ಮತ್ತು ಪ್ರಮೋದ್ ಮುತಾಲಿಕರ ಹತ್ಯೆ ನಡೆಸಲು ನಿಯೋಜಿತನಾಗಿದ್ದ ಆಸಾಮಿ ಎಂದೂ, ಆ ಕೃತ್ಯವನ್ನೆಸಗುವ ಸಲುವಾಗಿಯೇ ದಕ್ಷಿಣ ಕನ್ನಡ ಜಿಲ್ಲೆಗೆ ಬಂದಿದ್ದನೆಂದೂ, ಹಾಗಾಗಿ ಆತನನ್ನು ಉಳ್ಳಾಲದಲ್ಲಿ ತಾವು ಬಂಧಿಸಿದ್ದೇವೆ ಎನ್ನುವುದು ದ.ಕ. ಪೊಲೀಸರ ವಾದ. ಪೊಲೀಸರ ವಾದದ ಸತ್ಯಾಸತ್ಯತೆ ಏನೇ ಇರಲಿ, ರಶೀದನನ್ನು ಮಂಗಳೂರಿನ 2ನೇ ಜೆ.ಎಮ್.ಎಫ್.ಸಿ. ನ್ಯಾಯಾಲಯದಲ್ಲಿ ಹಾಜರುಪಡಿಸಿದ ದ.ಕ. ಪೊಲೀಸರು ಆತನನ್ನು ಪೊಲೀಸ್ ಕಸ್ಟಡಿಗೆ ತೆಗೆದುಕೊಂಡು 'ವಿಚಾರಣೆ' ನಡೆಸುವ ತರಾತುರಿಯಲ್ಲಿದ್ದರು. ತಮ್ಮ ಕಸ್ಟಡಿಯಲ್ಲಿರುವ ಆರೋಪಿಗಳಿಗೆ ಚಿತ್ರಹಿಂಸೆ ನೀಡಿ ತಮಗೆ ಬೇಕಾದ ಹೇಳಿಕೆಗಳನ್ನು ಪಡೆಯುವುದು; ಬಂಧಿಸಿದ 24 ಗಂಟೆಗಳ ಒಳಗೇ ನ್ಯಾಯಾಲಯದಲ್ಲಿ ಹಾಜರುಪಡಿಸಬೇಕು ಎಂಬ ಕಾನೂನಿದ್ದರೂ ಬಿನಾ ವಾರಂಟ್ ಬಂಧಿಸಿ ಕಾನೂನುಬಾಹಿರವಾಗಿ ಕೂಡಿ ಹಾಕಿ ಹಿಂಸೆ ನೀಡುವ ಮೂಲಕ ಅಪರಾಧವೆಸಗದ ಜನರನ್ನು ಕೇಸ್‌ನಲ್ಲಿ ಫಿಟ್ ಮಾಡುವುದು; 'ಆರೋಪಿ'ಗಳನ್ನು ತಾವೇ 'ಅಪರಾಧಿ' ಎಂದು ಪರಿಗಣಿಸಿ ಎನ್‌ಕೌಂಟರ್ ನೆಪದಲ್ಲಿ ಮುಗಿಸುವುದು- ಈ ಎಲ್ಲ ಕುಖ್ಯಾತಿ ಮಂಗಳೂರಿನ ಪೊಲೀಸರಿಗಿದೆ (ವಿವರಗಳಿಗೆ ಬಾಕ್ಸ್ ನೋಡಿ).



ಜಯಂತ್ ವಿ.ಶೆಟ್ಟಿ

ರಶೀದ್ ಪರವಾಗಿ ವಕಾಲತ್ತು ವಹಿಸಿಕೊಂಡಿದ್ದ ನೌಶಾದ್‌ರಿಗೆ ಮಂಗಳೂರಿನ ಪೋಲಿಸರ 'ವಿಚಾರಣೆ'ಯ ಭಯಾನಕ ವರಸೆಗಳ ಸಂಪೂರ್ಣವಾದ ಅರಿವಿತ್ತು. ಹಾಗಾಗಿ ಅವರು ನ್ಯಾಯಾಲಯಕ್ಕೆ ಹಿಂದಿನ ಪ್ರಕರಣಗಳ ವಿವರಗಳನ್ನು ನೀಡಿ ರಶೀದನನ್ನು ನ್ಯಾಯಾಂಗ ಬಂಧನದಲ್ಲಿಯೇ ಮುಂದುವರೆಸುವಂತೆ ವಾದ ಮಂಡಿಸಿದ್ದರು ಮತ್ತು ನ್ಯಾಯಾಲಯ ಅವರ ವಾದಕ್ಕೆ ಮನ್ನಣೆಯನ್ನೂ ನೀಡಿತ್ತು. ಇಂತಹ ಸನ್ನಿವೇಶದಲ್ಲಿ ನೌಶಾದರ ಕೊಲೆ ನಡೆಯಿತು. ತಕ್ಷಣವೇ ಮಂಗಳೂರಿನ ಪೊಲೀಸರು, ಇದು ದಾವೂದನ ಶತ್ರು ಪಾಳಯದವನಾದ ಚೋಟ ರಾಜನ್‌ನ ಬಂಟ ರವಿ ಪೂಜಾರಿ ಗ್ಯಾಂಗಿನ ಕೃತ್ಯವಿರಬೇಕೆಂದು ಕೊಲೆಯನ್ನು ಭೂಗತಲೋಕದ ಹಿಂಸಾಸರಣಿಯ ಚೌಕಟ್ಟಿನೊಳಗೆ ತುರುಕಿದರು. ಪೊಲೀಸರನ್ನು ಸತ್ಯ ಹರಿಶ್ಚಂದ್ರರಂತೆ ಕಾಣುವ ಮಾಧ್ಯಮಗಳು, ಇದೇ ಕತೆಯನ್ನು ಸತ್ಯಸ್ಯಸತ್ಯವೆಂಬಂತೆ ಪ್ರಕಟಿಸಿದ್ದು ಮಾತ್ರವಲ್ಲದೆ, ರವಿ ಪೂಜಾರಿ ಇದು ತನ್ನ ಗ್ಯಾಂಗಿನ ಕೃತ್ಯವೆಂಬ ಮಾಹಿತಿಯನ್ನು ಮಾಧ್ಯಮಗಳಿಗೆ ಕಳುಹಿಸಿದ್ದಾನೆ ಎಂದೂ ಅಂಗೀಕಾರ ಮುದ್ರೆಯೊತ್ತಿದವು. ನೌಶಾದರ 'ಸೀನಿಯರ್' ಆಗಿರುವ ಮಂಗಳೂರಿನ ಅತ್ಯಂತ ಹಿರಿಯ ವೃತ್ತಿನಿರತ ವಕೀಲರೂ, ಖ್ಯಾತ ಕ್ರಿಮಿನಲ್ ವಕೀಲರೂ ಆಗಿರುವ ಪುರುಷೋತ್ತಮ ಪೂಜಾರಿಯವರು ಮಧ್ಯಪ್ರವೇಶ ಮಾಡದಿದ್ದಲ್ಲಿ ಪೊಲೀಸರು-ಮಾಧ್ಯಮಗಳ ಮೇಳ ತಮ್ಮ ರೋಮಾಂಚಕ ಪತ್ತೇದಾರಿ ಚಿತ್ರಕತೆಗೆ ಒಂದು ಕ್ಲೈಮ್ಯಾಕ್ಸ್ ಕೂಡಿಸಿ ಮುಗಿಸಿಬಿಡುತಿತ್ತು.

ಏಪ್ರಿಲ್ 10ರಂದು ಪುರುಷೋತ್ತಮ ಪೂಜಾರಿಯವರು ಮಂಗಳೂರಿನ ಪಾಂಡೇಶ್ವರ ಠಾಣೆಯಲ್ಲಿ ನೌಶಾದರ ಕೊಲೆಯ ಬಗ್ಗೆ ಸವಿವರವಾದ ದೂರು ದಾಖಲಿಸಿದ್ದಾರೆ. ಆ ದೂರಿನಲ್ಲಿ ಅವರು ನೌಶಾದರ ಕೊಲೆಯಲ್ಲಿ ದ.ಕ. ಜಿಲ್ಲಾ ಅಪರಾಧ ತನಿಖಾ ವಿಭಾಗದ ಮುಖ್ಯಸ್ಥ ವೆಂಕಟೇಶ್ ಪ್ರಸನ್ನ, ಪಣಂಬೂರ್ ಡಿ.ವೈ.ಎಸ್.ಪಿ. ಜಯಂತ ಶೆಟ್ಟಿ, ಉಳ್ಳಾಲ ಠಾಣೆಯ ಎಸ್.ಐ. ಶಿವಪ್ರಕಾಶ್ ಹಾಗು ಪಣಂಬೂರು ಸರ್ಕಲ್ ಇನ್‌ಸ್ಪೆಕ್ಟರ್ ವ್ಯಾಲಂಟೈನ್ ಡಿಸೋಜ ಇವರುಗಳನ್ನು ಮುಖ್ಯ ಆಪಾದಿತರನ್ನಾಗಿ ದಾಖಲಿಸಿದ್ದಾರೆ.



ಶಿವಪ್ರಕಾಶ್

85 ವರ್ಷ ವಯಸ್ಸಿನ ಪುರುಷೋತ್ತಮ ಪೂಜಾರಿಯವರಿಗೆ ಕ್ರಿಮಿನಲ್ ಲಾಯರ್ ಆಗಿ 55 ವರ್ಷಗಳ ಅನುಭವವಿದೆ. ತಾವು ತೆಗೆದುಕೊಳ್ಳುವ ಕೇಸುಗಳು, ಅವುಗಳನ್ನು ಕೋರ್ಟಿನಲ್ಲಿ ವಾದಿಸುವ ಬಗೆ ಹಾಗು ಗೆಲುವುಗಳಿಗಾಗಿ ಅವರು ಮಂಗಳೂರ್ ಬಾರ್‌ನಲ್ಲಿ ಪ್ರಸಿದ್ಧರು. ಹತ್ತು ವರ್ಷಗಳ ಕೆಳಗೆ ಪುತ್ತೂರಿನಲ್ಲಿ ಕಾಲೇಜು ವಿದ್ಯಾರ್ಥಿನಿ ಸೌಮ್ಯ ಕೊಲೆಯಾಗಿತ್ತು. ಆಶ್ರಫ್ ಯಾನೆ ಮಿಲಿಟರಿ ಅಶ್ರಫ್ ಎಂಬ ಯುವಕ ಆಕೆಯ ಮೇಲೆ ಅತ್ಯಾಚಾರ ನಡೆಸುವ ಪ್ರಯತ್ನ ನಡೆಸಿ ಕೊಲೆ ಮಾಡಿದ ಆರೋಪದಲ್ಲಿ ಬಂಧಿತನಾಗಿದ್ದ. ಸಂಘಪರಿವಾರ ಈ ಪ್ರಕರಣವನ್ನು ತನ್ನ ರಾಜಕೀಯಕ್ಕೆ ಬಳಸಿಕೊಳ್ಳುವ ಎಲ್ಲ ತಂತ್ರಗಳನ್ನೂ ಪ್ರಯೋಗಿಸಿತ್ತು. ಆಗ ಪುರುಷೋತ್ತಮ ಪೂಜಾರಿಯವರು ಅಶ್ರಫ್‌ನ ಪರ ವಕಾಲತ್ತು ವಹಿಸಿಕೊಂಡು, ಸಂಘಪರಿವಾರದಿಂದ ಬಂದ ಬೆದರಿಕೆಗಳನ್ನು ಲೆಕ್ಕಿಸದೇ, ಕೇಸನ್ನು ವಾದಿಸಿ ಅಶ್ರಫನನ್ನು ಆರೋಪಮುಕ್ತನನ್ನಾಗಿ ಮಾಡಿದ್ದರು.

ಈ ಕೇಸು ನಡೆಯುವಾಗ ನೌಶಾದ್ ಕಾಶಿಂಜಿ ಇನ್ನೂ ಕಾನೂನು ವಿದ್ಯಾರ್ಥಿಯಾಗಿದ್ದ. ಪೂಜಾರಿಯವರು ಕೇಸನ್ನು ನಡೆಸಿದ ಬಗೆ ಮತ್ತು ಮತಧರ್ಮಗಳನ್ನೂ ಮೀರಿ ಮಾನವಹಕ್ಕುಗಳ ಆಧಾರದಲ್ಲಿ ವಕಾಲತ್ತು ನಡೆಸುವ ಧ್ಯೇಯಗಳಿಂದ ತುಂಬಾ ಪ್ರಭಾವಿತರಾಗಿದ್ದ ನೌಶಾದ್, ತನ್ನ ಓದು ಮುಗಿದದ್ದೇ ಅವರ ಬಳಿ ಕಿರಿಯ ವಕೀಲರಾಗಿ ಸೇರಿಕೊಂಡರು ಹಾಗು ಕೆಲವೇ ದಿನಗಳಲ್ಲಿ ಅವರ ಪ್ರಿಯ ಶಿಷ್ಯನಾದರು. ಪುರುಷೋತ್ತಮ ಪೂಜಾರಿಯವರು ನೀಡಿರುವ ದೂರಿಗೆ ಆಧಾರವೇನು ಎಂದು ತಿಳಿಯಲು ನಾವು ಅವರನ್ನು ಭೇಟಿಯಾದಾಗ ಈ ಸಂಗತಿಗಳನ್ನು ದುಃಖದ ಉಮ್ಮಳಿಕೆಯನ್ನು ನಡುನಡುವೆ ತಡೆದುಕೊಂಡು ಅವರು ನೀಡಿದರು ಮತ್ತು "ಸಾಕಷ್ಟು ಪ್ರಬಲವಾದ ಸಾಂದರ್ಭಿಕ ಸಾಕ್ಷ್ಯಾಧಾರ"ದಲ್ಲಿ ತಮ್ಮ ಆಪಾದನೆಗೆ ವಿವರಗಳನ್ನು ನೀಡಿದರು. ಅವರ ದೂರಿನಲ್ಲಿರುವ ಮುಖ್ಯ ಅಂಶಗಳು:


1. ನೌಶಾದ್ ತನ್ನ ವೃತ್ತಿಜೀವನದ ಉದ್ದಕ್ಕೂ ಮಾನವಹಕ್ಕುಗಳಿಗೆ ಸಂಬಂಧಿಸಿದ ಕೇಸುಗಳನ್ನೇ ಆಯ್ದುಕೊಳ್ಳುತ್ತಿದ್ದರು. ಜನತಾದಳ-ಬಿ.ಜೆ.ಪಿ. ಸಮ್ಮಿಶ್ರ ಸರಕಾರ ಆಡಳಿತಕ್ಕೆ ಬಂದಂದಿನಿಂದ ಸಂಘಪರಿವಾರದ ದಾಂಧಲೆಗಳು ಜಾಸ್ತಿಯಾದವು. ಅಂತಹ ಪ್ರಕರಣಗಳಲ್ಲಿ ನೌಶಾದ್ ಹಿಂಸೆಗೆ ತುತ್ತಾದವರ ಪರವಾಗಿ ಕೇಸು ನಡೆಸುತ್ತಿದ್ದರು ಮತ್ತು ಪೊಲೀಸರು ಕಾನೂನುಬಾಹಿರವಾಗಿ ನಡೆಸುವ ಹಿಂಸೆಯನ್ನು ಬಯಲಿಗೆ ಎಳೆದು ನ್ಯಾಯಾಲಯದ ಮುಂದೆ ತಂದಿದ್ದರು. ವೆಂಕಟೇಶ್ ಪ್ರಸನ್ನ ಮತ್ತು ಶಿವಪ್ರಕಾಶ್

- ಮಂಗಳೂರು, ಉಡುಪಿ ಜಿಲ್ಲೆಗಳ ಹಲವು ಪೊಲೀಸ್ ಠಾಣೆಗಳು ಈಗ ವಸ್ತುಶಃ ಬಜರಂಗಿಗಳ ಅಡ್ಡೆಗಳಾಗಿ ಮಾರ್ಪಟ್ಟಿವೆ. ಅಲ್ಪಸಂಖ್ಯಾತ ಸಮುದಾಯಕ್ಕೆ ಸೇರಿದ ಆರೋಪಿಗಳ ಎಫ್.ಐ.ಆರ್.ಗಳನ್ನು ಬಜರಂಗಿಗಳ ಆಣತಿಯಂತೆ ಸಿದ್ಧಪಡಿಸುವುದೂ ಈಗ ಮಾಮೂಲು.
- ಅಪರಾಧ ತನಿಖೆ ವಿಭಾಗದ ವೆಂಕಟೇಶ್ ಪ್ರಸನ್ನ ಪೊಲೀಸ್ ತರಬೇತಿಗಿಂತ ಮೊದಲು ಸಂಘಪರಿವಾರದಲ್ಲಿ ಬಡಿಗೆಯ ತರಬೇತಿ ಪಡೆದವನು. ಕೆಲವು ತಿಂಗಳ ಹಿಂದೆ ಚರ್ಚ್‌ಗಳ ಮೇಲೆ ದಾಳಿ ನಡೆದ ಸಂದರ್ಭದಲ್ಲಿ ಈತ ಮಂಗಳೂರಿನಲ್ಲಿ ಪ್ರತಿಭಟನೆ ನಡೆಸುತ್ತಿದ್ದ ಕ್ರೈಸ್ತರ ಮೇಲೆಯೇ ಮೃಗೀಯ ದಾಳಿ ನಡೆಸಿದ್ದ, ಠಾಣೆಯಲ್ಲಿ ಮುಸ್ಲಿಮ್ ಆರೋಪಿಗಳಿಗೆ ಚಿತ್ರಹಿಂಸೆ ನೀಡುವುದರಲ್ಲೂ ಈತ ಹೆಸರು ಮಾಡಿದ್ದಾನೆ. ಇತ್ತೀಚೆಗೆ ಕಿನ್ನಿಗೋಳಿಯ ನೂರೂದ್ದೀನ್ ಎಂಬ ತರುಣನನ್ನು ಕೊಲೆಯ ಕೇಸಿನಲ್ಲಿ ಫಿಟ್ ಮಾಡಿದ ವೆಂಕಟೇಶ್ ಪ್ರಸನ್ನ ಆತನಿಗೆ ಮೂರು ದಿನಗಳ ಕಾಲ ರೋಲರ್, ಏರೋಪ್ಲೇನ್ ಮುಂತಾದ ಪೊಲೀಸ್ ಉಪಚಾರಗಳನ್ನು ಮಾಡಿ, ಆತನ ವಿರುದ್ಧ ಯಾವುದೇ ದೂರು ದಾಖಲಿಸದೇ, ನ್ಯಾಯಾಲಯದ ಮುಂದೆ ಹಾಜರುಪಡಿಸದೇ, ಮೂರನೆಯ ದಿನ ಸಂಜೆ ರಸ್ತೆ ಬದಿ ಎಸೆದುಹೋಗಿದ್ದ.
- ಉಳ್ಳಾಲದ ಎಸ್.ಐ. ಶಿವಪ್ರಕಾಶ್ ಕಳೆದ ತಿಂಗಳ 18ರಂದು ರಸ್ತೆಯಲ್ಲಿ ಸೈಕಲ್ ಮೇಲೆ ಹೋಗುತ್ತಿದ್ದ ಶಹಾಬ್ ಇಬ್ರಾಹಿಂ ಎಂಬ ಹುಡುಗ ತನ್ನ ಜೀಪಿಗೆ ಸೈಡು ಕೊಡಲಿಲ್ಲ ಎಂಬ ಕಾರಣಕ್ಕೆ ನಿಲ್ಲಿಸಿ ಅವನ ಹೆಸರು ಕೇಳಿದ. ಹುಡುಗ ತನ್ನ ಹೆಸರು ಹೇಳಿದ್ದೇ ಶಿವಪ್ರಕಾಶ್ ಮೈಮೇಲೆ ದೆವ್ವ ಬಂದವನಂತೆ 10 ವರ್ಷದ ಹುಡುಗನನ್ನು ವಿದ್ಯಾತದ್ವಾ ಬಾರಿಸಿದ.
- ಕಳೆದ ತಿಂಗಳು ಮಂಗಳೂರಿನಲ್ಲಿ ನಡೆದ ಹಿಂದೂ ಸಮಾಜೋತ್ಸವದಿಂದ ವಾಪಸಾಗುತ್ತಿದ್ದವರು ಕಾಪು ಮಸೀದಿ ಎದುರು ದಾರಿಹೋಕರ ಮೇಲೆ ಹಲ್ಲೆ ನಡೆಸಿ, ಮಸೀದಿಯ ಗಾಜಿಗೆ ಕಲ್ಲು ಹೊಡೆದು, ಮಸೀದಿಗೆ ಸೇರಿದ ಕಾಂಪ್ಲೆಕ್ಸ್‌ನಲ್ಲಿದ್ದ ಮೊಬೈಲ್ ಅಂಗಡಿಯನ್ನು ಕೊಳ್ಳೆ ಹೊಡೆದರೂ ಪೊಲೀಸರು ಏಕಪಕ್ಷೀಯವಾಗಿ ಕಾಪು ಮಸೀದಿಯಲ್ಲಿದ್ದ 27 ಜನರನ್ನು ಬಂಧಿಸಿ ಅವರ ಮೇಲೆ ಐ.ಪಿ.ಸಿ.307 ಕೇಸು ಜಡಿದರು. ಈಗ ಅವರಲ್ಲಿ 25 ಜನ ಬೇಲ್ ಮೇಲೆ ಹೊರಗೆ ಬಂದಿದ್ದಾರೆ. ಆದರೆ ಇದೇ ಪ್ರಕರಣಕ್ಕೆ ಸಂಬಂಧಿಸಿದಂತೆ ಕಾಪುವಿನ ಮತ್ತಿಬ್ಬರು ತರುಣರನ್ನು ಬಂಧಿಸಿ, ಯಾವ ಕೇಸು ಹಾಕದೇ, ಪೊಲೀಸರು ಬಂಧನದಲ್ಲಿ ಇರಿಸಿಕೊಂಡಿದ್ದರು. ಈಗ ಅವರನ್ನು ರಶೀದ್ ಮಲ್ಬಾರಿ ಮೇಲಿರುವ ಕ್ರಿಮಿನಲ್ ಕೇಸಿನಲ್ಲಿ ಫಿಟ್ ಮಾಡಲಾಗಿದೆ.



ಹತ್ಯೆಯಾದ ಸ್ಥಳ...





ನೌಷಾದ್ ಕೊಲೆಯನ್ನು ಖಂಡಿಸಿ ಭಟ್ಕಳದಲ್ಲಿ ಬಂದ್

ನೌಶಾದ್ ಕಾಶಿಂಜಿ ಭಟ್ಕಳದ ಸ್ಥಿತಿವಂತ ಕುಟುಂಬದಿಂದ ಬಂದವರು. ರ ಅಣ್ಣ ಭಟ್ಕಳದ ಮುನ್ಸಿಪಾಲಿಟಿ ಪ್ರೆಸಿಡೆಂಟ್. ತಂದೆ, ತಾಯಿ, ಇಬ್ಬರು ಣ್ಣುಮಕ್ಕಳು, ಮೂವರು ಗಂಡು ಮಕ್ಕಳಿರುವ ಕುಟುಂಬ ಅವರದ್ದು. ಪತಿ ನುಸ್ರತ್ ಕಾನೂನು ಪದವಿ ಪಡೆದು ಈಗ ಎಂ.ಎ. ಕಟ್ಟಿ ಗಿಸುವ ಹಂತದಲ್ಲಿದ್ದಾರೆ. ನೌಶಾದ್-ನುಸ್ರತ್ ದಂಪತಿಗಳಿಗೆ ಐದು ದ ಒಬ್ಬ ಮಗ, ಆರು ತಿಂಗಳ ಒಬ್ಬ ಮಗಳು ಇದ್ದಾರೆ. ಆರು ತಿಂಗಳ ಾತಿಯಾದ ನುಸ್ರತ್ ವಿಧವೆಯಾಗುವ ಹೊತ್ತಿಗೆ, ನೌಶಾದ್‌ರಿಗೆ 32 . ನೌಶಾದರ ಕುಟುಂಬದ ಈ ವಿವರಗಳನ್ನು ಮೊದಲಾಗಿ ಕಾಣಿಸುವುದು ತು ಕಾರಣಗಳಿಗೆ ಅಗತ್ಯವಿದೆ.

ಮೊದಲನೆಯದಾಗಿ, ಕರಾವಳಿಯಲ್ಲಿ ನಿತ್ಯವೂ ಚಿತ್ರಹಿಂಸೆ, ಗೊಳಗಾಗುತ್ತಿರುವ ಮುಸಲ್ಮಾನರು ನಮ್ಮ ಹಾಗೆ ಸಂಸಾರಸ್ಥರು ಎಂದು ಯುವ ಬುದ್ಧಿ ಹಿಂಸಾನಿರತರಿಗಂತೂ ಸರಿಯೇ, ಈ ಹಿಂಸೆ ರಣವಾದದ್ದು ಎಂದು ವಾದಿಸುವ ಇಲ್ಲಿನ ಸಾಮಾನ್ಯ ಸಂಸಾರಸ್ಥರಿಗೂ



ನೌಶಾದ್ ಹೋರಾಟದ ಬದುಕು

ನಾಗಿದೆ. ಎರಡನೆಯದಾಗಿ ನೌಶಾದ್ ತಮ್ಮ ತುಂಬು ಸಂಸಾರವನ್ನು ಕೊಂಡೇ, ತಮ್ಮ ವಕೀಲ ವೃತ್ತಿಯ ಆದರ್ಶಗಳನ್ನು ಬೆಂಬತ್ತಿದ ನಕರಾಗಿದ್ದರು; ಹಿಂಸೆಗೆ ತುತ್ತಾದವರ ಪರವಾಗಿ ವಕಾಲತು ವಹಿಸಿಕೊಳ್ಳುವ ಲಕ ಆ ಸಂಸಾರಗಳ ದುಃಖವನ್ನು ಹಗುರ ಮಾಡುವ ಸೂಕ್ಷ್ಮವಾದ 'ಅವರು ಕೈಗೆತ್ತಿಕೊಳ್ಳುತ್ತಿದ್ದ ಪ್ರತಿ ಕೇಸಿನಲ್ಲೂ ಇರುತ್ತಿತ್ತು ಎಂದು ನ್ನು ಹತ್ತಿರದಿಂದ ಬಲ್ಲ ಸ್ನೇಹಿತರು ಅವರು ಜೀವಂತವಿದ್ದಾಗಲೇ ುತ್ತಿದ್ದರು.

ಯುಸಿವರೆಗಿನ ತಮ್ಮ ವಿದ್ಯಾಭ್ಯಾಸವನ್ನು ಭಟ್ಕಳದಲ್ಲಿ ಪೂರೈಸಿದ ದ್, ಐದು ವರ್ಷದ ಕಾನೂನು ಪದವಿ ಪಡೆಯುವ ಸಲುವಾಗಿ ಳೂರಿನ ಎಸ್.ಡಿ.ಎಂ. ಲಾ ಕಾಲೇಜು ಸೇರಿದರು. ಅವರ ಕಾನೂನು ಭ್ಯಾಸದ ಕೊನೆಯ ವರ್ಷವಾದ 1998, ಅವರ ವೈಯಕ್ತಿಕ ಜೀವನದಲ್ಲೂ, ವಳಿಯ ಜನರ ಸಾರ್ವಜನಿಕ ಧೋರಣೆಯಲ್ಲೂ ತೀವ್ರವಾದ ಾವಣೆಯನ್ನು ತಂದ ವರ್ಷವಾಗಿತ್ತು. ಸಾಮಾನ್ಯ ಜನ ವರ್ಷಾಂತರಗಳಿಂದ ಗೆ ಬದುಕಿದ್ದ ತಮ್ಮ ನೆರೆಹೊರೆಯ ಮುಸಲ್ಮಾನರನ್ನು 'ಅನ್ಯ ಮನವರು' ಎಂದು ಕಾಣುವ ವರಸೆಯನ್ನು ತೋರಿಸಲು ಶುರುಮಾಡಿದ ವಿದು.

ಹಾಗೆಯೇ, ಆ ವರ್ಷ ಪುತ್ತೂರಿನ ಸೌಮ್ಯ ಕೊಲೆ ಪ್ರಕರಣದಲ್ಲಿ ಪಿಯಾಗಿದ್ದ ಮಿಲಿಟರಿ ಆಶ್ರಫನ ಪರವಾಗಿ ಮಂಗಳೂರಿನ ಖ್ಯಾತ ಕ್ರಿಮಿನಲ್ ವಕೀಲರಾದ ಪುರುಷೋತ್ತಮ ಪೂಜಾರಿಯವರು ವಕಾಲತ್ತು ವಹಿಸಿಕೊಂಡು, ಕೇಸನ್ನು ನಡೆಸಿದ ರೀತಿಯು ವಿದ್ಯಾರ್ಥಿಯಾಗಿದ್ದ ನೌಶಾದ್‌ರ ಮೇಲೆ ಎಂಥ ಪ್ರಭಾವ ಬೀರಿತ್ತೆಂದರೆ, 1998ರಲ್ಲಿ ಕಾನೂನು ಪದವಿ ಪಡೆದದ್ದೇ ಬಾರ್ ಕೌನ್ಸಿಲ್‌ನಲ್ಲಿ ತಮ್ಮ ಹೆಸರನ್ನು ನೋಂದಾಯಿಸಿ, ನೇರ ಪೂಜಾರಿಯವರ ಬಳಿ ಹೋಗಿ ತಮ್ಮನ್ನು ಕಿರಿಯ ವಕೀಲನನ್ನಾಗಿ ನೇಮಿಸಿಕೊಳ್ಳಬೇಕು ಎಂದು ವಿನಂತಿಸಿಕೊಂಡರು. ಪುರುಷೋತ್ತಮ ಪೂಜಾರಿಯವರು ತಮ್ಮ ಬಳಿ ಸಾಕಷ್ಟು ಕಿರಿಯ ವಕೀಲರು ಈಗಾಲೇ ಇರುವುದರಿಂದ ನೌಶಾದರ ಅವಶ್ಯಕತೆ ಇಲ್ಲ ಎಂದು ವಾಪಸು ಕಳುಹಿಸಿದ್ದರು. ತಾನು ವಕೀಲಿ ವೃತ್ತಿ ಮಾಡುವುದಾದರೆ ಪೂಜಾರಿಯವರ ಶಿಷ್ಯನಾಗಿ ಮಾತ್ರವೇ ಎಂದು ನಿರ್ಧರಿಸಿಬಿಟ್ಟಿದ್ದ ನೌಶಾದ್, ಪೂಜಾರಿಯವರ ಹತ್ತಿರದ ಸ್ನೇಹಿತರಾದ ವಕೀಲ ಮಾಧವರಾವ್ ಅವರಿಂದ ಹೇಳಿಸಿ ಪೂಜಾರಿಯವರ ಬಳಿ ಕಿರಿಯ ವಕೀಲರಾಗಿ ಸೇರಿದರು. ಪೂಜಾರಿಯವರ ಗರಡಿಯಲ್ಲಿ ಪಳಗಿ, ಆಶ್ರಫ್ ಕೇಸಿನಲ್ಲಿ ಪೂಜಾರಿಯವರು ಮಾಡಿದ ಹಾಗೆ, ಕಾನೂನು ತಿರುಚಿ, ಮಾನವ ಹಕ್ಕುಗಳನ್ನು ಉಲ್ಲಂಘಿಸಿ, ಕೇಸಿನಲ್ಲಿ ಫಿಟ್ ಮಾಡಲಾದ ಆರೋಪಿಗಳ ಪರವಾಗಿ ನ್ಯಾಯಾಲಯದಲ್ಲಿ ಸೆಣೆಸುವುದು ಅವರ ಆದರ್ಶವಾಗಿಬಿಟ್ಟಿತ್ತು. ಅಲ್ಲಿಂದ ಅವರು ಹಿಂದಿರುಗಿ ನೋಡಲಿಲ್ಲ. ಆ ಬಳಿಕ ಅವರು ನಿರ್ವಹಿಸಿದ ಕೇಸುಗಳೇ ಇದಕ್ಕೆ ಸಾಕ್ಷಿಯಾಗಿವೆ.

ಮುಲ್ಕಿ ಸುಖಾನಂದ ಶೆಟ್ಟಿ ಹತ್ಯೆ ಕೇಸಿನಲ್ಲಿ ಅತಿಕ್ ಹಾಗು ರಫೀಕ್ ಪರವಾಗಿ, ಉಡುಪಿ ಶಾಸಕ ರಘುಪತಿ ಭಟ್ ಪತ್ನಿ ಪದ್ಮಪ್ರಿಯ ವಿವಾದಾಸ್ಪದ ಸಾವಿನ ಕೇಸಿನಲ್ಲಿ ಅತುಲ್‌ರಾವ್ ಪರವಾಗಿ, 2006ರ ಮಂಗಳೂರು ಗಲಭೆಯ ವೇಳೆ ಪೊಲೀಸರ ಕಾನೂನುಬಾಹಿರ ಹಿಂಸೆಗೆ ಈಡಾದ ಉಳ್ಳಾಲದ ಮುಸಲ್ಮಾನ ಕುಟುಂಬಗಳ ಪರವಾಗಿ ವಕೀಲಿ ನಡೆಸಿದ್ದು ಅವರ ವೃತ್ತಿ ಜೀವನದ ಮೈಲಿಗಲ್ಲುಗಳು. ಇದಲ್ಲದೇ ಮಂಗಳೂರಿನ ಪೊಲೀಸರು ಚೆಡ್ಡಿನಿಷ್ಠೆ ತೋರಿ, ವಿನಾಕಾರಣ ಅಲ್ಪಸಂಖ್ಯಾತರ ಮೇಲೆ ಕಾನೂನುಬಾಹಿರವಾಗಿ ನಡೆಸುವ ಪೊಲೀಸ್ ಹಿಂಸೆಯನ್ನು ನಿಷ್ಠೂರವಾಗಿ ನ್ಯಾಯಾಲಯದ ಕಟ್ಟೆಗೆ ತಂದ ನ್ಯಾಯವಾದಿ ನೌಶಾದ್.

ಸುಖಾನಂದ ಶೆಟ್ಟಿ ಕೊಲೆ ಕೇಸಿನಲ್ಲಿ ಬಂಧಿತರಾಗಿದ್ದ ಆತಿಕ್ ಹಾಗು ಮುಲ್ಕಿ ರಫೀಕರನ್ನು ಪೊಲೀಸರು ತಮ್ಮ ಕಸ್ಟಡಿಗೆ ತೆಗೆದುಕೊಂಡು ನಡೆಸಬಹುದಾದ ಹಿಂಸೆಯನ್ನು ಮುಂಗಂಡು ನ್ಯಾಯಾಲಯದಲ್ಲಿ ನೌಶಾದ್ ವಾದಿಸಿದ್ದರು. ಆದರೆ ಇಬ್ಬರು ಆರೋಪಿಗಳನ್ನೂ ಪೊಲೀಸ್ ಕಸ್ಟಡಿಗೆ ತೆಗೆದುಕೊಳ್ಳುವಲ್ಲಿ ಸಫಲವಾದ ಪೊಲೀಸರು ಇಬ್ಬರನ್ನೂ ನಕಲಿ ಎನ್‌ಕೌಂಟರ್‌ನಲ್ಲಿ ಖತಮ್ ಮಾಡಿದರು. ರಫೀಕ್‌ನ ಕೇಸಿನಲ್ಲಿ ನೌಶಾದ್, ಆತನ ಹೆಂಡತಿಯಿಂದ ದೂರು ಕೊಡಿಸಿ, ತಾನು ಸಹ ಸಾಕ್ಷ್ಯ ನೀಡಿದ್ದರು. ನೌಶಾದರ ಈ ಬಗೆಯ 'ಲೀಗಲ್ ಆಕ್ಟಿವಿಸಂ' ಮಂಗಳೂರಿನ ಪೊಲೀಸರಿಗೆ ಅಪಥ್ಯವಾಗಿತ್ತು. ಮಂಗಳೂರಿನ ಪೊಲೀಸರು ತನ್ನನ್ನು ಗುರಿಮಾಡಿಕೊಂಡಿದ್ದಾರೆ ಎಂದು ನೌಶಾದ್ ಹತ್ತಿರದ ಸ್ನೇಹಿತರ ಬಳಿ ಕೆಲವು ಸಾರಿ ಹೇಳಿಕೊಂಡಿದ್ದರು.

ಕರಾವಳಿಯಲ್ಲೀಗ ಹಿಂಸೆಗೆ ತುತ್ತಾದ ಅಲ್ಪಸಂಖ್ಯಾತರನ್ನೇ ಅಪಾದಿತರನ್ನಾಗಿಸಿ, ಕೇಸು ಜಡಿದು ಹಿಂಸೆ ನಡೆಸುವುದು ನಿತ್ಯದ ಪರಿಪಾಠವಾಗಿ ಹೋಗಿದೆ. ಆದರೂ ಹಿಂಸೆಗೊಳಗಾದವರ ಕೇಸನ್ನು ಬೇರೆ ಯಾವ 'ಹಿಂದೂ ವಕೀಲರು' ತೆಗೆದುಕೊಳ್ಳುವುದಿಲ್ಲ, ನೌಶಾದ್ ಈ ಕೇಸುಗಳನ್ನೆಲ್ಲ ತಮ್ಮ ಉಡಿಗೆ ಹಾಕಿಕೊಂಡು ಹೋರಾಟ ಮಾಡುತ್ತಿದ್ದರು. ಈಗ ಅವರೂ ಇಲ್ಲದೇ ಹೋಗಿ, ಕರಾವಳಿಯ ಅಲ್ಪಸಂಖ್ಯಾತರಿಗೆ ನ್ಯಾಯಾಲಯದ ಬಾಗಿಲುಗಳು ಮುಚ್ಚಿ ಹೋಗಿವೆ. ■

ದುಬಾಹಿರ ವರ್ತನೆಗಳನ್ನು ನ್ಯಾಯಾಲಯ ಮತ್ತು ಮಾನವಹಕ್ಕು ಗಗಳ ಮುಂದೆ ತಂದು ಅವರ ವಿರುದ್ಧ ವಾದಿಸಿ, ಈ ಇಬ್ಬರು ರಗಳ ವಿರೋಧ ಕಟ್ಟಿಕೊಂಡಿದ್ದರು.

ರಶೀದನನ್ನು 29.3.2009ರಂದು ಬಂಧಿಸಿ ಮಂಗಳೂರಿನ 2ನೇ ್.ಎಫ್.ಸಿ. ನ್ಯಾಯಾಲಯದ ಮುಂದೆ ಹಾಜರುಪಡಿಸಿದ (ಮೇಲೆ ದುವ) ಪೊಲೀಸು ಅಧಿಕಾರಿಗಳು, ಆತನನ್ನು 10 ದಿನ ತಮ್ಮ ಕೊಡಬೇಕೆಂದು ವಿನಂತಿಸಿಕೊಂಡರು. ಆದರೆ ನೌಶಾದ್ ಈ ಯನ್ನು ವಿರೋಧಿಸಿ ವಾದಿಸಿದರು. ನ್ಯಾಯಾಲಯ ಅವರ ವಾದ ರಶೀದನನ್ನು 3 ದಿನಗಳ ಕಾಲ ಜ್ಯುಡಿಷಿಯಲ್ ಕಸ್ಟಡಿಯಲ್ಲಿಡಲು ಸಿತು. 3ನೇ ದಿನ ನ್ಯಾಯಾಲಯ 12 ಶರತ್ತುಗಳನ್ನು ವಿಧಿಸಿ ದಿನಗಳ ಮಟ್ಟಿಗೆ ರಶೀದನನ್ನು ಪೊಲೀಸ್ ಕಸ್ಟಡಿಗೆ ಒಪ್ಪಿಸಲಾಯಿತು. .4.2009ರಂದು ರಶೀದನನ್ನು ನ್ಯಾಯಾಲಯದ ಮುಂದೆ ಪಡಿಸಿದಾಗ, ಪಣಂಬೂರು ಸರ್ಕಲ್ ಇನ್‌ಸ್ಪೆಕ್ಟರ್ ವ್ಯಾಲಂಟೈನ್ 10 ವರ್ಷಗಳ ಹಿಂದೆ ನಡೆದ ಜೋಡಿ ಕೊಲೆ ಪ್ರಕರಣ ಲ್ಲಿ ರಶೀದ್ ಪೊಲೀಸರಿಗೆ ಬೇಕಾದ ಆಸಾಮಿಯಾಗಿದ್ದಾನೆ ಎಂದು ಜೆ.ಎಮ್.ಎಫ್.ಸಿ. ನ್ಯಾಯಾಲಯಕ್ಕೆ ತಿಳಿಸಿ ಆತನನ್ನು ಪೊಲೀಸ್ ನೀಡಲು ಮತ್ತೆ ಮನವಿ ಮಾಡಿಕೊಂಡರು. ನೌಶಾದ್ ಈ ಮನವಿಯನ್ನು ವಿರೋಧಿಸಿ, ರಶೀದನನ್ನು ಪೊಲೀಸ್ ಒಪ್ಪಿಸಿದಲ್ಲಿ ಆತನ ಜೀವಕ್ಕೆ ಅಪಾಯವಿದೆ ಎಂದು ದರು. ಮತ್ತೆ ಅದೇ 12 ಶರತ್ತುಗಳ ಆಧಾರದಲ್ಲಿ ನ್ಯಾಯಾಲ ರಶೀದನನ್ನು 3 ದಿನಗಳ ಮಟ್ಟಿಗೆ ಪೊಲೀಸರಿಗೆ ಒಪ್ಪಿಸಿ, 2009ರಂದು ನ್ಯಾಯಾಲಯದ ಮುಂದೆ – ಶರತ್ತುಗಳಿಗೆ ಕುಂದೂ ಆಗದಂತೆ – ಹಾಜರುಪಡಿಸಬೇಕು ಎಂದು ತಾ. 9.4.2009 ರಂದು ರಶೀದನನ್ನು ನ್ಯಾಯಾಲಯದಲ್ಲಿ ಪಡಿಸಿದಾಗ ಪೊಲೀಸರು ತಮ್ಮ ಹಳೆಯ ಮನವಿಯನ್ನೇ ದರು. ನೌಶಾದ್ ಹಳೆಯ ಪ್ರಕರಣಗಳ ವಿವರಗಳೊಂದಿಗೆ ನವಿಯ ವಿರುದ್ಧ ವಾದಿಸಿದರು. ನ್ಯಾಯಾಲಯವು ಪೊಲೀಸರ ಮನ್ನು ತಿರಸ್ಕರಿಸಿ ರಶೀದನನ್ನು 23.4.2009ರ ವರೆಗೆ ಜ್ಯುಡಿಷಿಯಲ್ ಒಪ್ಪಿಸಿತು. ಹೀಗೆ ಈ ಪ್ರಕರಣದ ಎಲ್ಲ ಹಂತಗಳಲ್ಲೂ ನೌಶಾದ್ ಪೊಲೀಸ್ ಅಧಿಕಾರಿಗಳ ಉದ್ದೇಶಕ್ಕೆ ಮುಳ್ಳಾಗಿದ್ದರು. ತಾ. 9.4.2009ರ ಈ ತೀರ್ಮಾನದ ನಂತರ ನೌಶಾದ್ ನ್ಯಾಯಾಲಯದಿಂದ ಹೊರ ಗ ಪಣಂಬೂರು ಡಿ.ವೈ.ಎಸ್.ಪಿ. ಜಯಂತ ಶೆಟ್ಟಿ ನೌಶಾದ್ ಕಡೆ



ತಿರುಗಿ ''ಇವತ್ತಿನದು ನಿನ್ನ ಕಡೆಯ ವಾದ'' ಎಂದು ಹೇಳಿದ್ದರು. ಅದೇ ದಿನ ರಾತ್ರಿ ನೌಶಾದ್‌ರ ಕೊಲೆಯಾಯಿತು.

ದೂರಿನಲ್ಲಿ ದಾಖಲಿಸಿರುವ ಈ ಅಂಶಗಳ ಜೊತೆಗೆ, ಪುರುಷೋತ್ತಮ ಪೂಜಾರಿಯವರು, ನೌಶಾದ್ ಸಾವಿಗೆ ಬಂದೂಕಿನಿಂದ ಹಾರಿದ ಗುಂಡುಗಳು ಖಂಡಿತ ಕಾರಣವಲ್ಲ, ತಲೆಗೆ ತಲವಾರಿನ ಮಂಡು ಕೊನೆಯಿಂದ ಚಚ್ಚಿರುವುದೇ ಕಾರಣವಿರಬೇಕು ಎಂದೂ, ಶವದ ಮರಣೋತ್ತರ ಪರೀಕ್ಷೆಯನ್ನು ಬೆಳಗ್ಗೆ ಮಾಡುತ್ತೇವೆ ಎಂದಿದ್ದ ಪೊಲೀಸರು ತರಾತುರಿಯಲ್ಲಿ ರಾತ್ರಿಯೇ ಕೆಲಸ ಪೂರೈಸಿರುವುದು ತೀರಾ ಸಂದೇಹಾಸ್ಪದವಾಗಿದೆ ಎಂದೂ ತಿಳಿಸಿದರು. "ಮರಣೋತ್ತರ ಪರೀಕ್ಷೆಯನ್ನು ಕತ್ತಲಾದ ನಂತರ ಮಾಡಕೂಡದು ಎಂದು ಕಾನೂನಿದೆಯಲ್ಲವೇ?'' ಎಂದು ಕೇಳಿದ್ದಕ್ಕೆ ಪೂಜಾರಿಯವರು "ಇದೆ, ಕಾನೂನಿನಲ್ಲಿ ಬೇಕಾದಷ್ಟಿದೆ! ಆದರೆ ಇವರು ಆಡಿದ್ದೇ ಆಟವಾಗಿದೆಯಲ್ಲ!'' ಎಂದರು. ಜೀವಕ್ಕೇ ಬೆಲೆ ಇಲ್ಲದ ಈ ಊರಲ್ಲಿ ನ್ಯಾಯಕ್ಕೆ ಬೆಲೆ ಉಂಟೇ?

ನೌಶಾದ್ ಕೊಲೆಯ ತನಿಖೆ ನಡೆಸಲು ಈಗ ವೆಂಕಟೇಶ್ ಪ್ರಸನ್ನ ಮತ್ತು ಜಯಂತ್ ಶೆಟ್ಟಿಯವರ ನೇತೃತ್ವದಲ್ಲಿ ಎರಡು ವಿಶೇಷ ತಂಡಗಳನ್ನು ನಡೆಸಲಾಗಿದೆ. ಅಂದರೆ ಪುರುಷೋತ್ತಮ ಪೂಜಾರಿಯವರ ದೂರಿನ ತನಿಖೆಯನ್ನೂ ಅವರ ತಂಡಗಳೇ ಮಾಡುತ್ತವೆ! ನಿಜಕ್ಕೂ ಈ ಬಗೆಯ ಅಪರಾಧ ತನಿಖೆ ಅಭೂತಪೂರ್ವವಾದದ್ದು! ಪುರುಷೋತ್ತಮ ಪೂಜಾರಿಯವರೂ ಹಾಗು ಮಂಗಳೂರು ಮತ್ತು ಉಡುಪಿಯ ಬಾರ್ ಅಸೋಸಿಯೇಷನ್‌ಗಳೂ, ತನಿಖೆ ನಡೆಸುತ್ತಿರುವ ಪೊಲೀಸ್ ಅಧಿಕಾರಿಗಳ ಮೇಲೆಯೇ ಆರೋಪವಿರುವುದರಿಂದ ಈ ತನಿಖೆ ನಿಷ್ಪಕ್ಷಪಾತವಾಗಿರಲು ಸಾಧ್ಯವಿಲ್ಲ, ಹಾಗಾಗಿ ಪ್ರಕರಣವನ್ನು ಸಿಬಿಐಗೆ ಒಪ್ಪಿಸಬೇಕು ಎಂದು ಒತ್ತಾಯಿಸುತ್ತಿದ್ದಾರೆ.

10ರಂದು ಬೆಳಗ್ಗೆ ಪುರುಷೋತ್ತಮ ಪೂಜಾರಿಯವರು ಪತ್ನಿ ಸಮೇತವಾಗಿ ನೌಶಾದ್ ಜೊತೆ ನೌಶಾದರ ಅಕ್ಕನ ಮಗಳ ಮದುವೆಗೆ ಭಟ್ಕಳಕ್ಕೆ ಹೋಗುವವರಿದ್ದರು. ಪೂಜಾರಿಯವರು, ಹತ್ತು ವರ್ಷಗಳ ಕಾಲದ ತಮ್ಮ ಹಾಗು ನೌಶಾದರ ಕುಟುಂಬಗಳ ನಡುವೆ ಬೆಳೆದ ನಂಟನ್ನು ಜ್ಞಾಪಿಸಿಕೊಳ್ಳುತ್ತ ''ನಾನು ಹಿಂದೂ, ನನ್ನ ಹೆಂಡತಿಯೂ ಹಿಂದೂ. ಆದರೆ ಅವನ ಮತ್ತು ಅವನ ಮನೆಯವರ ಜೊತೆ ಅನೋನ್ಯವಾಗಿರಲು ನಮ್ಮ ಧರ್ಮ ನಮಗೆ ಅಡ್ಡಿಯಾಗಿರಲೇ ಇಲ್ಲ!'' ಎಂದರು. ಈ ಮಾತುಗಳು ತೋರಿಕೆಯವಾಗಿರಲಿಲ್ಲ, ಆದರೂ ಅವು ಝಳ ಬಡಿದು ಕರಟಿ ಹೋದ ಹೂವಿನಂತೆ ನಿಸ್ಸಾರವಾಗಿ ಕೇಳಿದವು. ಹೂಂ! ಇಲ್ಲೀಗ ಆಡುವ ಮಾತಿಗೂ ■

ಲಂಕೇಶ್



ಕಲಾಗುರು ರಮೇಶ್ ಇನ್ನು ನೆನಪು ಮಾತ್ರ...

ಕೈಯಲ್ಲಿ ಬಿಳಿಹಾಳೆಗಳ ಕಂತೆ, ಜೇಬಿನಲ್ಲಿ ಪೆನ್ನು, ಸದಾ ಚಿತ್ರರಚನೆಯಲ್ಲಿ ತಲ್ಲೀನ. ಕಲಾಶಾಲೆಯಲ್ಲಿದ್ದಾಗ್ಯೂ ಸೋಂಭೇರಿತನ ತೋರದ ಪ್ರಯೋಗಶೀಲ ವ್ಯಕ್ತಿ. ಇವರು ರಚಿಸಿದ ರೇಖಾಕೃತಿಗಳು ಒಂದೂ ಅವರ ಬಳಿಯಲಿಲ್ಲ, ಯಾಕೆಂದರೆ ಅವೆಲ್ಲಾ ಒಂದಲ್ಲಾ ಒಂದು ರೀತಿಯಲ್ಲಿ ವಿದ್ಯಾರ್ಥಿಗಳ ಬ್ಯಾಗ್ ಸೇರುತ್ತಿದ್ದವು. ಅಷ್ಟು ಆಕರ್ಷಕ ಮತ್ತು ಕೌಶಲಯುತವಾಗಿರುತ್ತಿದ್ದವು. ಅವು ಅಂತಹ ಕೃತಿಗಳ ಕಲಾಕಾರ ನಮ್ಮ ರಮೇಶ್ ಮೇಷ್ಟ್ರು.

ನಾನು ಕೆನ್ ಕಲಾ ಶಾಲೆಯ ವಿದ್ಯಾರ್ಥಿಯಾಗಿದ್ದಾಗ ಬಹುಶಃ ಕಲಾಗುರು ನಾಡೋಜ ಆರ್.ಎಂ.ಹಡಪದ್‌ರೊಂದಿಗಿನ ಚರ್ಚೆ ಮತ್ತು ಉಪನ್ಯಾಸವನ್ನು ಹೊರತುಪಡಿಸಿದರೆ ರಮೇಶ್ ಮೇಷ್ಟ್ರ ಜೊತೆಯಲ್ಲೇ ಹೆಚ್ಚು ಹೊತ್ತು ಇದ್ದದ್ದು, ತುಂಬಾ ಸರಳವಾದ ಮನುಷ್ಯ. ಎಲ್ಲರೊಂದಿಗೆ ಸಮಭಾವದಲ್ಲಿ ಬೆರೆಯುತ್ತಿದ್ದ ವ್ಯಕ್ತಿ. ಎಂದೂ ತಾನೊಬ್ಬ ಕಲಾವಿದ, ಮೇಷ್ಟ್ರು ಎಂಬ ಅಹಂ ಪ್ರದರ್ಶಿಸಿದ್ದಿಲ್ಲ. ಆರ್.ಎಂ.ಹಡಪದ್ ಅವರು ಕಲಾಗುರುಗಳಾದರೆ ಉಪನ್ಯಾಸಕರಾದ ರಮೇಶ್‌ಕುಮಾರ್ ಆತ್ಮೀಯ ಗುರು-ಗೆಳೆಯರಾಗಿದ್ದರು.

ಪ್ರತಿಯೊಂದು ವಿಚಾರದಲ್ಲೂ ಸರಳತೆ, ನೇರವಂತಿಕೆ. ಅನೇಕ ಮಂದಿ, ಸಿಕ್ಕ ಸಣ್ಣ ಪ್ರಶಸ್ತಿಯನ್ನೇ ರಾಷ್ಟ್ರ ಮಟ್ಟದ್ದು ಎಂಬ ಭ್ರಮೆಯಲ್ಲಿ ತಮ್ಮ ವಿಸಿಟಿಂಗ್ ಕಾರ್ಡ್‌ಗಳಲ್ಲಿ ಮುದ್ರಿಸಿಕೊಳ್ಳುತ್ತಿರುವ ಈ ಕಾಲದಲ್ಲಿ ಉಪನ್ಯಾಸಕರಾಗಿ ನೌಕರಿ ದೊರೆಯುವ ಮುನ್ನವೇ ಪಡೆದ ಕರ್ನಾಟಕ ಲಲಿತಕಲಾ ಅಕಾಡೆಮಿ ಪ್ರಶಸ್ತಿ ಇವರ ತಲೆಯನ್ನೇನೂ ತಿರುಗಿಸಿರಲಿಲ್ಲ. ಹಾಗಾಗಿಯೇ ರಮೇಶ್ ಮೇಷ್ಟ್ರು ಮತ್ತು ಅವರ ವ್ಯಕ್ತಿತ್ವ ಎಲ್ಲರ ಮೆಚ್ಚುಗೆಗೆ ಕಾರಣವಾಯಿತು.

ಹಡಪದರ ಕಾಲದಲ್ಲಿ ಕೆನ್ ಶಾಲೆ ಗುರುಕುಲದಂತಿತ್ತು. ಅಲ್ಲಿ ಮುಕ್ತವಾದ ಸ್ವಾತಂತ್ರ್ಯವೂ ಇತ್ತು. ದೈನಂದಿನ ಟೈಮ್‌ಟೇಬಲ್ ಪಠ್ಯಕ್ರಮದಂತೆ ಅಭ್ಯಾಸ ಮಾಡಬೇಕೆಂಬ ನಿಯಮವನ್ನು ಅವರೆಂದೂ ಹೇರಿದವರಲ್ಲ, ಅಂತೆಯೇ ರಮೇಶ್ ಮೇಷ್ಟ್ರು ಸಹ ವಿದ್ಯಾರ್ಥಿಗಳ ಮೂಡ್ ನೋಡಿಯೇ ಪಾಠ ಮಾಡುತ್ತಿದ್ದುದು. ಕೆನ್ ಸೇರಿದ ಪ್ರಥಮ ಮತ್ತು ದ್ವಿತೀಯ ವರ್ಷದ ವಿದ್ಯಾರ್ಥಿಗಳಿಗೆ ಬಹುಮುಖ್ಯವಾಗಿ ನೀಡಬೇಕಿದ್ದ ಡ್ರಾಯಿಂಗ್ ತರಬೇತಿಯನ್ನು ನೀಡುತ್ತಿದ್ದುದೇ ರಮೇಶ್ ಮೇಷ್ಟ್ರು. ಮನೆಗೆ ಅಡಿಪಾಯ ಎಷ್ಟು ಮುಖ್ಯವೋ ಕಲಾಭ್ಯಾಸಕ್ಕೆ ಡ್ರಾಯಿಂಗೂ ಅಷ್ಟೇ ಮುಖ್ಯ. ವಿದ್ಯಾರ್ಥಿಗಳಲ್ಲಿ ಇಂತಹ ಭದ್ರ ಅಡಿಪಾಯ ಹಾಕುತ್ತಿದ್ದವರು ರಮೇಶ್ ಮೇಷ್ಟ್ರು.



ರಮೇಶ್‌ಕುಮಾರ್ ಚಿತ್ರಿಸಿದ ನೀಲಸೋಗೆ ಚಿತ್ರ

ಕಲಾ ಪಠ್ಯಾಭ್ಯಾಸದ ಹೊರತಾಗಿಯೂ ರಮೇಶ್ ಮೇಷ್ಟ್ರು ಭಾವಜೀವಿ. ಗಝಲ್, ಕವನಗಳಿಗೆ ಅಭಿವ್ಯಕ್ತಿದಾಯಕ ಭಾವಜೀವ ರೇಖೆಗಳನ್ನು ತುಂಬುತ್ತಿದ್ದರು. ಜಲವರ್ಣದಲ್ಲಂತೂ ಸಿದ್ಧಹಸ್ತರು. ಲ್ಯಾಂಡ್‌ಸ್ಕೇಪ್ ರಚಿಸಲು ಶುರುಮಾಡಿದರೆಂದರೆ ಅಲ್ಲಿ ಪ್ರಕೃತಿದಾಯಕ ವರ್ಣ ಮೇಳವೇ ಸೃಷ್ಟಿಯಾದಂತಹ ಅನುಭವ. ರೋಮಾಂಚನ ವಿದ್ಯಾರ್ಥಿಗಳಲ್ಲಿ. "ಯೋ ರಮೇಶ, ಹುಡುಗರನ್ನೆಲ್ಲ (ಅಂದರೆ ವಿದ್ಯಾರ್ಥಿಗಳನ್ನ) ಹಾಕ್ಕೊಂಡು ಏನಯ್ಯ ಮಾಡ್ತೀಯಾ ಹೊರಗೆ" ಎಂದು ಹಿರಿಯ ಉಪನ್ಯಾಸಕರೊಬ್ಬರು ಕೇಳಿದ್ದು ಈಗಲೂ ನನ್ನ ನೆನಪಿನಲ್ಲಿ ಅಚ್ಚಳಿಯದೇ ಉಳಿದಿದೆ.

ರಮೇಶ್ ಮೇಷ್ಟ್ರ ಸಾವಿನ ಸುದ್ದಿ ತಿಳಿಯುತ್ತಲೇ ಹಳೇ ವಿದ್ಯಾರ್ಥಿಗಳಿಂದ ಹಿಡಿದು ನಿನ್ನೆ-ಮೊನ್ನೆಯ ಹೊಸ ವಿದ್ಯಾರ್ಥಿಗಳ ದಂಡೇ ಅವರನ್ನು ಕೊನೆ ಬಾರಿ ನೋಡಲು ನೆರೆದಿತ್ತು. ಇದು ಅವರ ಗುರು-ಶಿಷ್ಯರ ಅವಿನಾಭಾವ ಸಂಬಂಧದ ಪ್ರತೀಕವಲ್ಲವೇ? ಇಂದು ಅವರು ನಮ್ಮೊಂದಿಗಿಲ್ಲ, ಸಾಯುವ ವಯಸ್ಸು ಅವರದಾಗಿರಲಿಲ್ಲ, ಕ್ರೂರ ವಿಧಿ ಅವರನ್ನು ನಮ್ಮಿಂದ ದೂರ ಮಾಡಿದೆ. ಆದರೆ ಅವರ ಮಾತು ಕೃತಿ ಎಲ್ಲವೂ, ಎಲ್ಲರಲ್ಲೂ ನೆನಪಾಗಿದೆ

● ಮಂಜುನಾಥ ನಿಲಸೋಗೆ

ಮಂಡ್ಯ: ಅಂಬರೀಶ್ ಕಡೇ ಆಟ ಸ್ವಪಕ್ಷೀಯರಿಂದಲೇ ಗೂಟ



ಈ ಹಿಂದೆ ಪ್ರತಿ ಸಲ ಅಂಬರೀಷ್ ಗೆದ್ದಾಗಲೂ ಲಕ್ಷಾಂತರ ಮತಗಳ ಅಂತರ ಇರುತ್ತಿತ್ತು. ಆದರೆ ಇವತ್ತಿನ ಪರಿಸ್ಥಿತಿ ನೋಡಿದರೆ ಅಷ್ಟೇ ಮತಗಳ ಅಂತರದಲ್ಲಿ ಅಂಬರೀಷಣ್ಣ ಸೋತರೂ ಆಶ್ಚರ್ಯವಿಲ್ಲ. ಹೀಗಿದ್ದೂ ಈಗ ಕಣದಲ್ಲಿರುವ ಎಲ್ಲಾ ಅಭ್ಯರ್ಥಿಗಳು ಒಂದೇ ಸಮನೆ ಅಂಬರೀಷ್ ಸಂಸದನಾಗಿ ಮಂಡ್ಯಕ್ಕೆ ಮಾಡಿದ್ದೇನು ಎಂದು ಹುಯಿಲೆಬ್ಬಿಸಿದ್ದಾರೆ. ಅಂಬರೀಷ್ ಬಗ್ಗೆ ಮಂಡ್ಯ ಜಿಲ್ಲೆಯ ಮತದಾರರು ಅಂತಿಮವಾಗಿ ಸಾಫ್ವಾಗಿ ಬಿಟ್ಟು ಓಟು ಗುದ್ದುಬಿಡಬಹುದು ಎಂಬ ಭಯವೇ ಅದಕ್ಕೆ ಕಾರಣ.

ಮಂಡ್ಯ ಲೋಕಸಭೆಯ ಚುನಾವಣೆಯ ಕಾವು ಶುರುವಾಗಿದ್ದೇ ಅಂಬರೀಷ್ ಫೀಲ್ಡಿಗಿಳಿದ ಮೇಲೆ. ಆದರೆ ಹಿಂದೆಲ್ಲಾ ಸುಲಭವಾಗಿ ಗೆದ್ದು ಬರುತ್ತಿದ್ದ ಅಂಬಿಯ ಜಯ ಈಗ ಕಷ್ಟವಾಗುತ್ತಿದೆ. ಈ ಹಿಂದೆ ಪ್ರತಿ ಸಲ ಅಂಬರೀಷ್ ಗೆದ್ದಾಗಲೂ ಲಕ್ಷಾಂತರ ಮತಗಳ ಅಂತರ ಇರುತ್ತಿತ್ತು. ಆದರೆ ಇವತ್ತಿನ ಪರಿಸ್ಥಿತಿ ನೋಡಿದರೆ ಅಷ್ಟೇ ಮತಗಳ ಅಂತರ ದಲ್ಲಿ ಅಂಬರೀಷಣ್ಣ ಸೋತರೂ ಆಶ್ಚರ್ಯವಿಲ್ಲ. ಹೀಗಿದ್ದೂ ಈಗ ಕಣದಲ್ಲಿರುವ ಎಲ್ಲಾ ಅಭ್ಯರ್ಥಿಗಳು ಒಂದೇ ಸಮನೆ ಅಂಬರೀಷ್ ಸಂಸದನಾಗಿ ಮಂಡ್ಯಕ್ಕೆ ಮಾಡಿದ್ದೇನು ಎಂದು ಹುಯಿಲೆಬ್ಬಿಸಿದ್ದಾರೆ. ಅಂಬರೀಷ್ ಬಗ್ಗೆ ಮಂಡ್ಯ ಜಿಲ್ಲೆಯ ಮತದಾರರು ಅಂತಿಮವಾಗಿ ಸಾಫ್ವಾಗಿ ಬಿಟ್ಟು ಓಟು ಗುದ್ದುಬಿಡಬಹುದು ಎಂಬ ಭಯವೇ ಅದಕ್ಕೆ ಕಾರಣ. ಇದನ್ನು ಚೆನ್ನಾಗಿ ಬಲ್ಲ ಅಂಬಿ, ಹೋದ ಕಡೆಯಲ್ಲೆಲ್ಲಾ ತಾನು ಮಂಡ್ಯದ ಮಗ; ಮಂಡ್ಯದ ಹಿರಿಮೆಯನ್ನು ನೋಡಿಯೇ ಸೋನಿಯಾ ಗಾಂಧಿ ತನಗೆ ಟಿಕೆಟ್ ಕೊಟ್ಟಿದ್ದು, ಇತ್ಯಾದಿ ಡೈಲಾಗ್ ಹೊಡೆಯುತ್ತಿದ್ದಾರೆ.





ಆತ್ಮಾನಂದ




ಇದುವರೆಗೆ ನಡೆದಿರುವ ತಯಾರಿ ಮತ್ತು ಪ್ರಚಾರದ ಅಬ್ಬರವನ್ನು ನೋಡಿದರೆ ಚೆಲುವರಾಯಸ್ವಾಮಿ ಎಂಬ ದಳಪತಿ ಮತ್ತು ಸರ್ವೋದಯ ಕರ್ನಾಟಕದ ಪುಟ್ಟಣ್ಣಯ್ಯನವರೇ ಅಂಬಿಗಿಂತ ಮುಂದಿರುವುದು ಗೊತ್ತಾಗುತ್ತದೆ. ಪುಟ್ಟಣ್ಣಯ್ಯ ದಿನನಿತ್ಯ ನಡೆಸುತ್ತಿರುವ ಸಮಾವೇಶಗಳು ಮತ್ತು ಪೇಪರ್‌ಗಳಲ್ಲಿ ಬರುತ್ತಿರುವ ಫೋಟೋಗಳು ರೈತಸಂಘ ಹಿಂದೆಂದಿಗಿಂತಲೂ ಆಕ್ಟಿವ್ ಆಗಿರುವುದನ್ನು ತೋರುತ್ತದೆ. ಆದರೂ, ಪುಟ್ಟಣ್ಣಯ್ಯನವರು ಗೆಲ್ಲುವ ಕ್ಯಾಂಡಿಡೇಟ್ ಅಲ್ಲ ಎಂಬುದು ಜನಕ್ಕೆ ಗೊತ್ತಿರುವುದರಿಂದ ಅವರೆಲ್ಲಾ ಗೆಲುವಿಗೆ ಸನಿಹದಲ್ಲಿರುವ ಚೆಲುವರಾಯಸ್ವಾಮಿಗೆ ಮತ ಹಾಕುವ ಸಾಧ್ಯತೆಯೇ ಹೆಚ್ಚು. ಇನ್ನು ದೊಡ್ಡ ಬಾಯಿಯಲ್ಲಿ ಕಿರುಚುತ್ತಿರುವ ಎಲ್.ಆರ್.ಶಿವರಾಮೇಗೌಡನೆಂಬ ಲಾಳನಕೆರೆ ಲೀಡರ್‌ಗೆ ಬಜೆಪಿಯವರೇ ಒಳೇಟು ಕೊಡಲು ತಯಾರಿ ಮಾಡಿಕೊಂಡಿದ್ದಾರೆ.

ಅಂಬಿಯ ಕಾಲೆಳೆಯುತ್ತಿರುವವರು ಕಾಂಗ್ರೆಸ್ಸಿಗರೆ!

ಯಾವ್ಯಾವುದೋ ಲೆಕ್ಕಾಚಾರವಿಟ್ಟುಕೊಂಡು ಒಬ್ಬರನ್ನೊಬ್ಬರು ಕಾಲೆಳೆಯುವುದು ಕಾಂಗ್ರೆಸ್ಸಿನ ರಕ್ತಗುಣ. ಈಗದು ಅಂಬಿಯ ವಿಚಾರದಲ್ಲೂ ಸ್ಪಷ್ಟವಾಗಿ ಕಾಣುತ್ತಿದೆ. ಮಂಡ್ಯ ವಿಧಾನಸಭಾ ಕ್ಷೇತ್ರದಲ್ಲಿ ಕಳೆದ ಎಂಎಲ್‌ಎ ಚುನಾವಣೆಯ ಸಮಯದಲ್ಲಿ ಪ್ರಿಯಾ ಹೋಲ್‌ಸೇಲ್ ನಾಗಣ್ಣನ ವಿಧವಾ ಪತ್ನಿ ವಿದ್ಯಾ ನಾಗೇಂದ್ರ ತನ್ನ ಇಡೀ ಟೀಮ್ ಕಟ್ಟಿಕೊಂಡು ಬಜೆಪಿಗೆ ಜಿಗಿದಿದ್ದರು. ಈಗ ವಿದ್ಯಾರನ್ನು ಮುಡಾ ಅಧ್ಯಕ್ಷೆ ಮಾಡಿರುವುದರಿಂದ ಅವರ ಇಡೀ ಟೀಮ್ ಈಗ ಬಜೆಪಿಯಲ್ಲಿ ಭದ್ರವಾಗಿ ತಳವೂರಿದೆ.

ಇನ್ನೊಬ್ಬ ಕಾಂಗ್ರೆಸ್ ಟಿಕೆಟ್ ವಂಚಿತ ಆತ್ಮಾನಂದರದ್ದು ಅನಾದಿ ಕಾಲದಿಂದಲೂ ಒಳೇಟಿನ ರಾಜಕೀಯವೇ. ಎಸ್.ಡಿ.ಜಯರಾಂ ಸತ್ತಾಗ ನಡೆದ ಉಪಚುನಾವಣೆಯಲ್ಲಿ ತನಗೆ ಕಾಂಗ್ರೆಸ್‌ನ ಟಿಕೆಟ್ ಕೊಡಲಿಲ್ಲವೆಂದು ಎಂ.ಬಿ. ಶ್ರೀಕಾಂತ್ ವಿರುದ್ಧ ಕೆಲಸ ಮಾಡಿ ಪ್ರಭಾವತಿ ಜಯರಾಂರನ್ನು ಗೆಲ್ಲಿಸಿದ್ದರಿಂದ ಮೊದಲ್ಗೊಂಡು ಇಲ್ಲಿಯತನಕ ಅವರು ಮಾಡುತ್ತಿರುವುದು ಇದನ್ನೆ. ಒಂದೇ ಕುಟುಂಬದಲ್ಲಿ ಎಂಎಲ್‌ಸಿ, ನಗರಸಭಾಧ್ಯಕ್ಷ, ಎಂಎಲ್‌ಎ, ಸಚಿವ, ಮಂತ್ರಿ ಎಲ್ಲರೂ ಆಗಿದ್ದ ಈ ಪರಂಪರಾಗತ ಕಾಂಗ್ರೆಸ್ ಕುಟುಂಬ ಇತ್ತೀಚೆಗಂತೂ ಕಾಂಗ್ರೆಸ್‌ಗೆ ಬಗಣಿ ಗೂಟ ಬಡಿಯುವ ಕಾರ್ಯದಲ್ಲಿ ಬ್ಯುಸಿಯಾಗಿದೆ. ಎಂಎಲ್‌ಎ ಟಿಕೆಟ್ ಕೊಡದೆ ಇದ್ದಾಗ ಮುಂದಿನ ಎಂಪಿ ಕ್ಯಾಂಡಿಡೇಟ್ ನೀವೇ ಎಂದು ಆತ್ಮಾನಂದರಿಗೆ ಹೇಳಲಾಗಿತ್ತು. ಸಿದ್ದರಾಮಯ್ಯ ಹೈಕಮಾಂಡ್‌ಗೆ ಕಳಿಸಿದ್ದ ಪಟ್ಟಿಯಲ್ಲೂ ಆತ್ಮಾನಂದರ ಹೆಸರಿತ್ತು. ಆದರೆ ಮಂಡ್ಯ ನಗರದಲ್ಲಾಗಲೀ ಅಥವಾ ಹಳ್ಳಿಗಳಲ್ಲಾಗಲೀ ಯಾವುದೇ ಬೇಸ್ ಉಳಿಸಿಕೊಳ್ಳದ ಅವರಿಗೆ ಟಿಕೆಟ್ ಸಿಕ್ಕಲಿಲ್ಲ. ಸದ್ಯಕ್ಕೆ ಬಜೆಪಿ ಬೆಂಬಲಿತ ಆಪರೇಷನ್ ಕಮಲ ನಗರ ಸಭಾಧ್ಯಕ್ಷೆಯನ್ನೂ ಒಳಗೊಂಡಂತೆ ತಮ್ಮ ಅಳಿದುಳಿದ ಬೆಂಬಲಿಗರಿಗೆ ಬಜೆಪಿ ಅಥವಾ ದಳದ ಪರವಾಗಿ ಕೆಲಸ ಮಾಡಲು ಆತ್ಮಾನಂದ ಹುಕುಂ ನೀಡಲಿದ್ದಾರೆ ಎನ್ನುವುದು ಖುದ್ದು ಅಂಬಿಗೂ ಗೊತ್ತಿರುವ ಸತ್ಯ.

ಇದಕ್ಕಿಂತ ಐನಾತಿ ಕೇಸು, ಎಚ್.ಬಿ. ರಾಮುದು. ಅಂಬರೀಷ್‌ನ ಪಾದದ ಬಳಿಯಲ್ಲೇ ಕೂರುತ್ತಿದ್ದ ಅವರ ಎಲ್ಲಾ ಆಟೋಪಗಳಲ್ಲಿ ಸಹಚರನಾಗಿದ್ದ ರಾಮು ಸದ್ಯಕ್ಕೆ ಸೋತು ಮಲಗಿರುವ 'ಎಮ್ಮೆ'ಲ್ಲೆ ಎಲೆಕ್ಷನ್ ಬಂದಾಕ್ಷಣ ಎದ್ದು ಕಣ್ಣೊರೆಸಿಕೊಂಡ ಈತ ಅಂಬಿಗೆ ಕಾಂಗ್ರೆಸ್ ಟಿಕೆಟ್ ಸಿಗೊಲ್ಲ ಎಂದುಕೊಂಡು ಈಗ್ಗೆ 15 ದಿನಗಳ ಹಿಂದಷ್ಟೇ ಕಾಂಗ್ರೆಸ್‌ಗೆ 'ಕೈ' ಕೊಟ್ಟು ಹೊರೆಹೊತ್ತ ಮಹಿಳೆಯ ಕಾಲಿಗೆ ಬಿದ್ದ. ಈಗ ನೋಡಿದರೆ ಅಂಬಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕುಬಿಟ್ಟಿದೆ. ಅಂತೆಯೇ ರಾಮುಗೆ ಈಗ ಫಜೀತಿ ಶುರುವಾಗಿದೆ. ಮೊನ್ನಿನ ಎಲೆಕ್ಷನ್‌ನಲ್ಲಿ ಮೂರನೇ ಸ್ಥಾನ ಪಡೆದುಕೊಂಡ ಈತ ಯಾವ ಪಕ್ಷಕ್ಕೆ ಸಪೋರ್ಟ್ ಮಾಡಿದರೂ ಆಗೋ ಲಾಭ ಅಷ್ಟಕ್ಕಷ್ಟೆ.



ಶ್ರೀರಂಗಪಟ್ಟಣದಲ್ಲಿ ರವೀಂದ್ರ ಶ್ರೀಕಂಠಯ್ಯರಿಗೆ ಸಿಗಬೇಕಾದ ಟಿಕೆಟ್ ಕಿತ್ತುಕೊಂಡು ಸೋತು ಸುಣ್ಣವಾಗಿದ್ದ ಅಂಬರೀಷ್ ವಿರುದ್ಧ ಅವರು ಈಗ ಕತ್ತಿ ಮಸೆಯುತ್ತಿದ್ದಾರೆ. ಪತ್ರಿಕಾಗೋಷ್ಠಿ ನಡೆಸಿ ನೇರವಾಗಿ ಅಂಬಿಗೆ ಹಿಗ್ಗಾಮುಗ್ಗಾ ಝಾಡಿಸಿರುವ ರವೀಂದ್ರ ಕಳೆದ ಬಾರಿಯಂತೆ ಈ ಸಲವೂ ಜೆಡಿಎಸ್ ಅನ್ನು ಬೆಂಬಲಿಸುತ್ತಿದ್ದಾರೆ. ಅವರಿಗೆ ಚೆಲುವರಾಯಸ್ವಾಮಿಯನ್ನು ಗೆಲ್ಲಿಸಬೇಕೆಂಬ ಇರಾದೆಗಿಂತಲೂ ಅಂಬಿಯನ್ನು ಸೋಲಿಸಬೇಕೆಂಬ ಮಹತ್ವಾಕಾಂಕ್ಷೆಯಿರುವುದು ಸುಳ್ಳಲ್ಲ.

ಮದ್ದೂರಿನಲ್ಲಿ ತಮ್ಮಣ್ಣ ಬಜೆಪಿ ಕಡೆ ಜಿಗಿದ ಮೇಲೆ ಕಾಂಗ್ರೆಸ್ಸಿಗೆ ಉಳಿದಿರುವುದು ಎಸ್ಸೆಂ ಕೃಷ್ಣ ಫ್ಯಾಮಿಲಿ ಮಾತ್ರ. ಇದುವರೆಗೆ ಕೃಷ್ಣ ಮಂಡ್ಯದತ್ತ ತಲೆಯೇ ಹಾಕಿಲ್ಲ. ಅವರನ್ನು ನಂಬುವ ಸ್ಥಿತಿಯಲ್ಲೂ ಅಂಬಿಯಿಲ್ಲ. ಹಾಗಾಗಿ ಆಸರೆಗಾಗಿ ನೆಚ್ಚಿಕೊಂಡರೆ ಮಾದೇಗೌಡರನ್ನೇ ನೆಚ್ಚಿಕೊಳ್ಳಬೇಕಷ್ಟೆ. ಆದರೆ ಸ್ವತಃ ಮಾದೇಗೌಡರೇ ಮೊನ್ನೆ ಹೇಳಿದಂತೆ ಅವರಿಗೆ ಯಾರನ್ನೂ ಸೋಲಿಸುವ ಶಕ್ತಿ ಇಲ್ಲ. ಇನ್ನು ಅಂಬರೀಷ್‌ರನ್ನು ಗೆಲ್ಲಿಸುವ ಮಾತು ದೂರವೇ ಉಳಿಯಿತು. ಮಳವಳ್ಳಿಯಲ್ಲಿ ಕಾಂಗ್ರೆಸ್ಸಿಗರೆಲ್ಲರೂ ನರೇಂದ್ರಸ್ವಾಮಿಯ ಜೊತೆಗಿದ್ದಾರೆ. ಮರಳು ಮಿನಿಸ್ಟರ್ ನರೇಂದ್ರಸ್ವಾಮಿ ಬಜೆಪಿ ಪರ ತುಂಬಾ ಆಕ್ಟಿವ್ ಆಗಿ ಕೆಲಸ ಮಾಡದಿದ್ದರೂ ಕಾಂಗ್ರೆಸ್‌ಗೆ ಬಹಿರಂಗ ಬೆಂಬಲವನ್ನಂತೂ ಕೊಡಲಾರ. ಪಕ್ಷೇತರ ಸಚಿವರಿಂದ ಈಗಾಗಲೇ ಯಡ್ಡಿ ಸಚಿವ ಪದವಿ ಕಿತ್ತುಕೊಳ್ಳುವ ಬೆದರಿಕೆ ಹಾಕಿರುವುದರಿಂದ ಅಲ್ಲಿ ಅಂಬರೀಷ್‌ಗೆ ಏನಿದ್ದರೂ ಮೂರನೇ ಸ್ಥಾನವೇ.

ನಾಗಮಂಗಲದಲ್ಲಿ ಕಾಂಗ್ರೆಸ್ ಶಾಸಕ ಸುರೇಶ್ ಗೌಡ ಸದ್ಯಕ್ಕೆ ಸ್ಟ್ರಾಂಗೇ. ಆದರೆ ಬಜೆಪಿ, ದಳದ ಇಬ್ಬರು ಕ್ಯಾಂಡಿಡೇಟ್‌ಗಳೂ ನಾಗಮಂಗಲದವರಾಗಿರುವಾಗ ಕುರುಬರ ಓಟು ಮಾತ್ರ ಅಂಬರೀಷ್‌ಗೆ ಬೀಳಬಹುದಷ್ಟೇ. ಹೀಗಾಗಿ, ಅಂಬರೀಷ್ ಪಾಂಡವಪುರದ ಪುಟ್ಟರಾಜು ಮತ್ತು ಕೆ.ಆರ್.ಪೇಟೆಯ ಕಾಂಗ್ರೆಸ್ ಅನ್ನು ನೆಚ್ಚಿಕೊಳ್ಳಬೇಕಷ್ಟೇ. ಆದರೆ ಪುಟ್ಟರಾಜುವನ್ನು ಬುಟ್ಟಿಗೆ ಹಾಕಿಕೊಳ್ಳುವುದು ಅಂಬಿಗೆ ಅಷ್ಟು ಸುಲಭವಲ್ಲ. ಮೂಲತಃ ಜೆಡಿಎಸ್‌ನವರಾದ ಪುಟ್ಟರಾಜು ತಮ್ಮದೇ ಪಕ್ಷದ ಚೆಲುವರಾಯಸ್ವಾಮಿ ವಿರುದ್ಧ ಕೆಲಸ ಮಾಡುತ್ತಾರೆ, ಕಾಂಗ್ರೆಸ್‌ನ ಅಂಬಿಗೆ ನೆರವಾಗುತ್ತಾರೆ ಎಂದೇ ಹಲವರು ಎಣಿಸಿದ್ದು ನಿಜ. ಆದರೆ ಚೆಲುವನೋ, ಚಿನ್ನಿಗನೋ, ಯಾರಾದರೂ ಸರಿ ಒಂದೊಂದು ಎಂಪಿಯೂ ಸಹ ಎಚ್‌ಡಿಕೆಯನ್ನು ಸೆಂಟ್ರಲ್ ಮಿನಿಸ್ಟರ್ ಮಾಡಲು ತುಂಬಾ ಅಗತ್ಯ ಎಂಬುದನ್ನು ಅರಿತಿರುವ ದೊಡ್ಡ ಗೌಡರು ಈಗಾಗಲೇ ಪುಟ್ಟರಾಜುವಿಗೆ ಹುಕುಂ ಹೊರಡಿಸಿದ್ದಾರೆ ಎಂಬುದು ದಳದ ಒಳಗಿನವರ ಮಾತು. ದೊಡ್ಡ ಗೌಡರ ಮಾತನ್ನು ಮೀರುವಷ್ಟು ದೊಡ್ಡವರಲ್ಲ ಪುಟ್ಟರಾಜು.

ಪುಟ್ಟರಾಜು ಸಹ "ಚೆಲುವರಾಯನನ್ನು ಎಂಪಿ ಮಾಡಿ ಡೆಲ್ಲಿಗೆ ಕಳಿಸಿಬಿಟ್ಟರೆ ಮಂಡ್ಯದ ದಳಕ್ಕೆ ನಾನೇ ಕಿಂಗ್" ಎಂಬ ಆಲೋಚನೆಯಲ್ಲಿರುವಂತಿದೆ. ಈ ಆಶೆ ಅವರನ್ನು ಚೆಲುವರಾಯಸ್ವಾಮಿಯ ಪರ ಪ್ರಚಾರ ಮಾಡುವುದಕ್ಕೆ ಪ್ರೇರೇಪಿಸಿದೆ.

ಇನ್ನು ಪುಟ್ಟಣ್ಣಯ್ಯ ಕಳೆದ ಚುನಾವಣೆಯಷ್ಟಲ್ಲದಿದ್ದರೂ ಗಮನಾರ್ಹವಾಗಿ ಪಾಂಡವಪುರದಲ್ಲಿ ಓಟು ಕೀಳುತ್ತಾರೆ. ಕೆ.ಆರ್.ಪೇಟೆ ಮತ್ತು ಮೈಸೂರು ಜಿಲ್ಲೆಯ ಕೆ.ಆರ್.ನಗರ ಎರಡು ಕಡೆ ಅಂಬರೀಷ್ ವಿರುದ್ಧ ಕೆಲಸ ಮಾಡುವ ಕಾಂಗ್ರೆಸ್ಸಿಗರು ಇಲ್ಲ ಅಷ್ಟೆ. ಆದರೆ ಕೆ.ಆರ್.ನಗರದ ವಿಶ್ವನಾಥ್ ಮೈಸೂರಿನ ಕಾಂಗ್ರೆಸ್ ಕ್ಯಾಂಡಿಡೇಟ್. ಅಂಬಿಗೆ ಅಲ್ಲಿ ಅಂತಹ ವರ್ಚಸ್ಸಿಲ್ಲ.

ಪುಟ್ಟಣ್ಣಯ್ಯ ಫ್ಯಾಕ್ಟರ್

ಪುಟ್ಟಣ್ಣಯ್ಯರಿಗೆ ಬರುವ ಓಟೆಷ್ಟು ಎಂಬುದು ಸದ್ಯಕ್ಕೆ ಮಂಡ್ಯದಲ್ಲಿ ನಡೆಯುತ್ತಿರುವ ಚರ್ಚೆಗಳಲ್ಲೊಂದು. ಕನಿಷ್ಠ ಒಂದು ಲಕ್ಷ ಬಂದೇ ಬರುತ್ತದೆ ಎಂದು ಅವರ ಅಭಿಮಾನಿಗಳು ಹೇಳಿದರೆ ಪಾಂಡವಪುರದ ಎಂಎಲ್‌ಎ ಎಲೆಕ್ಷನ್‌ನಲ್ಲಿ ಬಂದಷ್ಟೂ ಬರಲಾರದು ಎಂದು ಸಿನಿಕರು ಹೇಳುತ್ತಾರೆ. ಆದರೆ, ಪುಟ್ಟಣ್ಣಯ್ಯ ಗೆದ್ದೇ ಗೆಲ್ಲುತ್ತಾರೆಂದು ಯಾರೂ ಹೇಳುತ್ತಿಲ್ಲ, ಖುದ್ದು ಅವರ ಬೆಂಬಲಿಗರೂ ಕೂಡ!



ಸಮಾಜದ ಹಿತದೃಷ್ಟಿಯಿಂದ ನೋಡಿದರೆ ನಿಂತಿರುವ ಎಲ್ಲಾ ಕ್ಯಾಂಡಿಡೇಟ್‌ಗಳಲ್ಲಿ ಪುಟ್ಟಣ್ಣಯ್ಯನವರೇ ಬೆಸ್ಟ್. ಸಂಸತ್ತಿಗೇ ಹೋಗದ ಅಂಬರೀಷ್‌ಗಿಂತ ಸದನದಲ್ಲಿ ಜನರ ಪರವಾಗಿ, ರೈತರ ಪರವಾಗಿ ದನಿಯೆತ್ತಬಲ್ಲ ಪುಟ್ಟಣ್ಣಯ್ಯನವರೇ ವಾಸಿ ಎಂಬುದರಲ್ಲಿ ಅನುಮಾನವೇ ಇಲ್ಲ. ಆದರೆ ಅವರ ಈ ಇಮೇಜು ಓಟುಗಳಾಗಿ ಪರಿವರ್ತನೆಗೊಳ್ಳುತ್ತಿಲ್ಲ. ಎಲ್ಲರಿಗಿಂತ ಮುಂಚೆ ಘೋಷಿಸಿ ಅಖಾಡಕ್ಕಿಳಿದ ಪುಟ್ಟಣ್ಣಯ್ಯನವರು ಯಾವಾಗಲೂ ಗೆಲ್ಲುವ ಕುದುರೆ ಆಗಿರಲೇ ಇಲ್ಲ. ಆದರೆ ಈ ಬಾರಿ ಪ್ರಚಾರದ ಅಬ್ಬರದಲ್ಲಿ ಗಿಮಿಕ್‌ಗಳಲ್ಲಿ ಅವರೇ ಮುಂದಿದ್ದಾರೆ.





ಶಿವರಾಮೆಗೌಡರಿಗೆ ಬಿಜೆಪಿಗರೇ ಅಡ್ಡಗಾಲು

ಕಾಲೆಳೆಯುವ ಗುಣ ಬಜೆಪಿಗೂ ಹೊರತಾದುದೇನಲ್ಲ. ಮಂಡ್ಯದಲ್ಲಿ ಕಾಂಗ್ರೆಸ್ಸಿಗರೇ ಅಂಬಿಯ ಕಾಲೆಳೆಯುತ್ತಿರುವಂತೆ ಬಜೆಪಿಗರೇ ಶಿವರಾಮೇಗೌಡರ ಕಾಲೆಳೆಯುತ್ತಿದ್ದಾರೆ.

ಬಜೆಪಿ ಮಂಡ್ಯದಲ್ಲಿ ಜನ ಬೆಂಬಲವಿರದ ಪಕ್ಷ. ಅದಕ್ಕಿಂತ ಹೆಚ್ಚಾಗಿ ಅದು ಸರಿಯಾಗಿ ಹುಟ್ಟಿ ಮೈದಳೆಯುವ ಮೊದಲೇ ಆಂತರಿಕ ಕಚ್ಚಾಟವೆಂಬ ರೋಗ ತಗುಲಿಬಿಟ್ಟಿದೆ. ಕಾಂಗ್ರೆಸ್‌ನಲ್ಲಿ ಟಿಕೆಟ್ ಸಿಗದೆ ಶಿವರಾಮೇಗೌಡ ಬಜೆಪಿಯಿಂದ ಸ್ಪರ್ಧಿಸಿದ್ದಾರಾದರೂ ಅವರಿಗೆ ಮೂರು ಅಥವ ನಾಲ್ಕನೇ ಸ್ಥಾನ ಗ್ಯಾರಂಟಿ. ಟಿಕೆಟ್ ಆಕಾಂಕ್ಷಿಗಳಾಗಿದ್ದ ಬಜೆಪಿ ಜಿಲ್ಲಾಧ್ಯಕ್ಷ ಹೆಚ್.ಹೊನ್
ಅನಾದಿಕಾಲದಿಂದಲೂ ಸ್ಪರ್ಧಿಸುತ್ತಲೂ, ಸ್ಪರ್ಧಿ
ಸೋಲುತ್ತಲೂ ಬಂದಿರುವ ಡಿ.ರಾಮಲಿಂಗಯ್ಯ ಇತ
ಮೂಲ ಬಜೆಪಿಗಳು ಶಿವರಾಮೆಗೌಡರ ವಿರುದ್ಧ
ಗೊಳಗೆ ಕುದಿಯುತ್ತಿದ್ದಾರೆ. ಒಂದು ವೇಳೆ ಶಿವರಾಮೆಗ
ಗೆದ್ದುಬಿಟ್ಟರೆ ಅನಾದಿಕಾಲದಿಂದಲೂ ಬಜೆಪಿಯಲ್ಲಿ ಮ
ಹೊತ್ತಿರುವ ಇವರೆಲ್ಲಾ ಮೂಲೆಗುಂಪಾಗಿ ನಿನ್ನೆ ಮೊ
ಬಂದ ಶಿವರಾಮೆಗೌಡ ಲೀಡರ್ ಆಗಿಬಿಡುತ್ತಾರೆ
ಭಯ ಅವರೆಲ್ಲರಿಗೂ ಇದ್ದೇ ಇದೆ. ಪರಿಸ್ಥಿತಿ ಹೀ
ಮೇಲೆ ಅವರೆಲ್ಲಾ ಶಿವರಾಮೆಗೌಡರನ್ನು ಗೆಲ್ಲಿಸುವು
ಪ್ರಯತ್ನಿಸುತ್ತಾರೋ ಅಥವ ಸೋಲಿಸುವುದಕ್ಕೆ ಶ್ರಮಿ
ತ್ತಾರೋ ಎಂಬುದು ಯಾರಿಗಾದರೂ ಅರ್ಥವಾಗ
ವಿಚಾರ.

ಮಂಡ್ಯದ ಬಹುತೇಕ ದಳದ ಎಂಎಲ್‌ಎಗಳು fix
mass base ಮತ್ತು ಒಕ್ಕಲಿಗರ ಓಟುಗಳಿಂದ ಗ
ಬರುತ್ತಿದ್ದಾರೆ. ಇವತ್ತಿಗೂ ಅದು ಅಲ್ಲಾಡಿ
ಕಾಂಗ್ರೆಸ್‌ನಿಂದ ಸಾಲುಸಾಲಾಗಿ ಬಜೆ
ವಲಸೆ ಹೋದರೂ, ಮಂಡ್ಯ ನ
ಹೊರತುಪಡಿಸಿ ಬೇರೆಲ್ಲೂ ದಳಕ್ಕೆ ಹಿನ್
ಯಾಗಿಲ್ಲ. ಆದರೆ ಈ ಜಿಲ್ಲೆಗೆ ಇವರುಗ
ಕಡಿದು ಗುಡ್ಡೆ ಹಾಕಿದ್ದು ಅಷ್ಟರಲ್ಲೇ ಇ
ಇಂದಿಗೂ ಕಬ್ಬಿಗೆ ರೇಟ್ ಫಿಕ್ಸ್ ಮಾ
ಬೇಕೆಂದರೆ ರೈತರು ಚಳವಳಿ ಮಾಡಬೇ
ಹೊರತು ಇವರ್‍ಯಾರೂ ತಲೆಕೆಡಿಸಿಕೊ
ಉದಾಹರಣೆಗಳಿಲ್ಲ. ಸಂಸತ್ತಿಗೇ ಹೋ
ಅಂಬರೀಷ್ ಬದಲಿಗೆ, ಚೆಲುವರಾಯಸ್ವಾ
ಡೆಲ್ಲಿಗೆ ಹೋದರೂ ಮಂಡ್ಯಕ್ಕೆ ಒಳ್ಳೆಯದಾ
ವುದು ಅಷ್ಟರಲ್ಲೇ ಇದೆ.


ದಳದ ಎಲ್ಲಾ ಎಂಎಲ್‌ಎಗಳು ಚೆಲು
ರಾಯಸ್ವಾಮಿಯ ಪರ ಕೆಲಸ ಮಾಡಬೇಕೆಂ
ಕುಮಾರಸ್ವಾಮಿಯೇ ಬಂದು ಕಂಕಣತೊ
ಹೋಗಿದ್ದಾರೆ. ಪ್ರತಿನಿತ್ಯ ಈ ಎಂಎಲ್‌ಎಗ
ಹುರುಪಿನಿಂದ ಓಡಾಡುತ್ತಿದ್ದಾರೆ. ಕಲ್ಪ
ಸಿದ್ದರಾಜು ಮಾತ್ರ ಅನಿತಕ್ಕನ ಜೊತೆ ಮ
ಗಿರಿಗೆ ಹೋಗಿಬಿಟ್ಟಿದ್ದಾರೆ. ಮಂಡ್ಯ ನಗರದಲ
ಆಪರೇಷನ್ ಮಲ ತಿಂದಿದ್ದ ನಗರಸ
ಸದಸ್ಯರುಗಳು ಒಬ್ಬೊಬ್ಬರಾಗಿ ತಮ್ಮ ಮಾ
ಪಕ್ಷಗಳಿಗೆ ವಾಪಸ್ಸು ಬರುತ್ತಿದ್ದಾರೆ. ಹಲ
ಕೌನ್ಸಿಲರ್‌ಗಳು ಬಜೆಪಿಗೆ ಹೋಗಿದ್ದರ
ಶಿವನಂಜು, ಶ್ರೀಧರ್ ಮತ್ತಿತರರು ದಳದ ಬೇಸ್‌ಅ
ಭದ್ರವಾಗಿ ಹಿಡಿದುಕೊಂಡಿದ್ದಾರೆ.

ಸಾರಾಂಶದಲ್ಲಿ ಹೇಳುವುದಾದರೆ ಚೆಲುವರಾಯಸ್ವಾ
ಮೊದಲ ಸ್ಥಾನದಲ್ಲಿದ್ದರೆ, ಅಂಬರೀಷ್ ಎರಡ
ಸ್ಥಾನ ದಲ್ಲಿದ್ದಾರೆ. ಮೂರನೇ ಸ್ಥಾನಕ್ಕೆ ಪುಟ್ಟಣ್ಣ
ಮತ್ತು ಶಿವರಾಮೇಗೌಡರ ನಡುವೆ ಪೈಪೋಟಿ ನಡೆ
ತ್ತಿದೆ.

● ಲಕ್ಷ್ಮಣ್ ಚೀರನಹ

ಬೆಂಗಳೂರು ಉತ್ತರ : ಜಾಫರ್ ಷರೀಫ್‌ಗೆ ಸಾಧನೆಯೇ ಶ್ರೀರಕ್ಷೆ

ಟೆಗೆ ಲಿಪ್‌ಸ್ಟಿಕ್ ಮೆತ್ತಿಕೊಂಡು, ಮುಖಕ್ಕೆ ರ್ ಬಳಕೊಂಡು, ಗರಿಗರಿ ಕೋಟು ತೊಟ್ಟು ಮುದಿ ಗರತಿಯಂತೆ ಕಂಗೊಳಿಸುವ ಡಿ.ಬಿ. ಗೌಡರನ್ನು ಕಂಡಿದ್ದೇ ಬೆಂಗಳೂರು ದ ಮತದಾರರು ಮುಖ ಮುಚ್ಚ ತ್ತಿದ್ದಾರೆ.



ಬಂಗಾರಪ್ಪ ಮುಖ್ಯಮಂತ್ರಿಯಾಗಿದ್ದಾಗ ಧ ಪಕ್ಷದ ನಾಯಕನ ಹುದ್ದೆಯನ್ನೇ ಟ್ಟಿವರು ಡಿ.ಬಿ. ಚಂದ್ರೇಗೌಡ. ಣ ಕಾಂಗ್ರೆಸ್ಸೇ ಗತಿಯೆಂದರು. ಯೂ ಆದರು. ಕಾಂಗ್ರೆಸ್ಸಿನ ಅನ್ನ ಬಾಬಾಬುಡನ್‌ಗಿರಿಗೆ ಹೋಗಿ ಜೆಗೆ ಕೂತು ಬಿಜೆಪಿಗೆ ನೆರವಾದರು. ಅಧಿಕಾರಕ್ಕೆ ಬರುತ್ತಿದ್ದಂತೆ ಡಿಬಿಸಿಯ ನಿಷ್ಠೆ ಸೆಕ್ಯೂಲರ್ ತತ್ವನಿಷ್ಠೆ ಎಲ್ಲವೂ ಕೆಂಭೂತದ ಕಳಚಿಬಿದ್ದಂತೆ ಉದುರಿಬಿತ್ತು. ಈಗ ಹೊಸ ವಲ್ಲಿ ಕೇಸರಿ ರುಮಾಲು ಧರಿಸಿದ್ದಾರೆ. ಪಕ್ಕಾ ನಾಚಿಕೊಳ್ಳುವಂತೆ ಆರೆಸ್ಸೆಸ್ ಭಜನೆಗಿಳಿದಿದ್ದಾರೆ. ವರೆ ಮತದಾರನೇನೂ ಬಕರಾ ಅಲ್ಲವಲ್ಲ. ಗೌಡರ ಮುಖ ಕಂಡಿದ್ದೇ ಬೆಂಗಳೂರಿನ ಮತದಾರನಿಗೆ ರೇಜಿಗೆ ಹುಟ್ಟುತ್ತಿದೆ. ಕಾಂಗ್ರೆಸ್ಸಿನ ಜಾಫರ್ ಶರೀಫರೆಲ್ಲಿ ದಿನಕ್ಕೊಂದು ಬಣ್ಣ ಹಾಕುವ ಚಂದ್ರೇಗೌಡರೆಲ್ಲಿ?

ಸದ್ಯ ಬೆಂಗಳೂರು ಉತ್ತರದ ಮಟ್ಟಿಗೆ ಬಿಜೆಪಿಗೇ ಹೆಚ್ಚು ಶಕ್ತಿಯಿರುವಂತೆ ಕಾಣುವುದು ಸಹಜವೆ. ಹೆಬ್ಬಾಳದ ಕಟ್ಟಾ, ಯಶವಂತಪುರದಲ್ಲಿ ಕರಂದ್ಲಾಜೆ, ದಾಸರಹಳ್ಳಿಯಲ್ಲಿ ಭೂಕಂಟಕ ಮುನಿರಾಜು, ಕೃಷ್ಣರಾಜಪುರದಲ್ಲಿ ಲ್ಯಾಂಡ್ ಗ್ರಾಬರ್ ನಂದೀಶ್ ರೆಡ್ಡಿಯಂಥ ಘಟಿಂಗರೇ ಗೆದ್ದು ಎಮ್ಮೆಲ್ಲೆಯಾಗಿದ್ದಾರೆ ನಿಜ. ಹಾಗೆ ಮಲ್ಲೇಶ್ವರದ ಅಶ್ವತ್ಥನಾರಾಯಣ ಕೂಡ ಬಿಜೆಪಿಯೇ.

ಪುಲಕೇಶಿ ನಗರದಲ್ಲಿ ಕೆ.ಜೆ. ಜಾರ್ಜ್, ಮಹಾಲಕ್ಷ್ಮಿ ಲೇಔಟಿನ ನರೇಂದ್ರ ಬಾಬು ಮತ್ತು ಬ್ಯಾಟರಾಯನಪುರದಲ್ಲಿ ಕೃಷ್ಣ ಭೈರೇಗೌಡರಂಥ ಮೂವರು ಕಾಂಗ್ರೆಸ್ ಶಾಸಕರಿದ್ದು ಉಳಿದ ಐವರು ಬಿಜೆಪಿ ಶಾಸಕರ ಮುಂದೆ ಹೇಗೆ ಜಾಫರ್ ಶರೀಫ್ ಗೆಲ್ಲಲು ಸಾಧ್ಯ ಎಂಬುದೇ ಅಸಲೀ ಪ್ರಶ್ನೆ. ಜೆಡಿಎಸ್‌ನಿಂದ ಕೋಟ್ಯಾಧಿಪತಿ ಸುರೇಂದ್ರಬಾಬು ಕಣಕ್ಕಿಳಿದು ಕಾಂಗ್ರೆಸ್ ಮತ್ತು ಬಿಜೆಪಿಗಳೆರಡರ ನಿದ್ದೆ ಕೆಡಿಸಿರುವುದೂ ಅಷ್ಟೇ ಸತ್ಯ.

ಆದರೆ ಬೆಂಗಳೂರು ಉತ್ತರದ ಒಳಮರ್ಮವೇ ಬೇರೆ. ಸರಿಸುಮಾರು ಐದು ಲಕ್ಷದಷ್ಟಿರುವ ಇಲ್ಲಿನ ಒಕ್ಕಲಿಗ ಮತದಾರರಿಗೆ ಮುದಿ ಗರತಿ ಚಂದ್ರೇಗೌಡರಿಗಿಂತಲೂ ದೇವೇಗೌಡರೇ ಮುಖ್ಯವಾಗುತ್ತಾರೆ. ಜೆಡಿಎಸ್‌ನ ಸುರೇಂದ್ರಬಾಬು ಓಟು ಕಿತ್ತಷ್ಟೂ ಅದು ಚಂದ್ರೇಗೌಡ ಪಾಲಿಗೆ ಮುಳುವಾಗುತ್ತದೆ. ಎರಡೂ ಮುಕ್ಕಾಲು ಲಕ್ಷದಷ್ಟಿರುವ ಮುಸ್ಲಿಮರು ಮತ್ತು ಒಂದು ಲಕ್ಷದಷ್ಟಿರುವ ಕ್ರಿಶ್ಚಿಯನ್ನರು ಸಾರಾಸಗಟಾಗಿ ಶರೀಫರನ್ನು ಬೆಂಬಲಿಸುತ್ತಾರೆ. ಎರಡೂವರೆ ಲಕ್ಷದಷ್ಟಿರುವ ಕುರುಬರು ಮತ್ತು 70 ಸಾವಿರದಷ್ಟಿರುವ ಗೊಲ್ಲರ ಪೈಕಿ ಅರ್ಧಕ್ಕರ್ಧದಷ್ಟಾದರೂ ಶರೀಫರಿಗೆ ಗ್ಯಾರಂಟಿ.



ಹೇಳಿಕೇಳಿ ಜಾಫರ್ ಷರೀಫ್ ಮತ್ತು ದೇವೇಗೌಡರು ಆ ಕಾಲದ ಸ್ನೇಹಿತರು. ದೇವೇಗೌಡ ರೇನಾದರೂ ಕೊನೇಗಳಿಗೆಯಲ್ಲಿ ಷರೀಫರ ಬೆನ್ನಿಗೇ ನಿಂತ ರೆಂದರೆ ಒಕ್ಕಲಿಗ ಮತದಾರರ ಪೈಕಿ ಒಂದು ಗುಂಪು ಷರೀಫ್ ಬೆನ್ನಿಗೆ ನಿಲ್ಲುತ್ತದೆ. ಅಷ್ಟಕ್ಕೂ ಡಿ.ಬಿ. ಚಂದ್ರೇಗೌಡರೆಲ್ಲಿ ಕನ್ನಡಿಗರ ಪಾಲಿನ ರೈಲ್ವೇ ಪಿತಾಮಹ ಜಾಫರ್ ಷರೀಫರೆಲ್ಲಿ?

ಈಗಾಗಲೇ ಬಿಜೆಪಿ ಶಾಸಕರಾದ ನಂದೀಶ್ ರೆಡ್ಡಿ, ದಾಸರಹಳ್ಳಿ ಮುನಿರಾಜು, ಕಟ್ಟಾನಾಯ್ಡು ಮುಂತಾದವರ ಮೇಲೆ ಮತದಾರನಿಗೆ ಹೇಸಿಗೆ ಹುಟ್ಟಾಗಿದೆ. ಯಡ್ಡಿ ಸರ್ಕಾರದ ದುರಾಡಳಿತ ಮತ್ತು ಭ್ರಷ್ಟಾಚಾರ ವೊಂದೇ ಬಿಜೆಪಿಯನ್ನು ಅರ್ಧ ಮುಳುಗಿಸುತ್ತದೆ. ಕನ್ನಡಿಗರ ಪಾಲಿಗೆ ಆವತ್ತು ಶಿಶುನಾಳ ಶರೀಫರಿದ್ದಂತೆ ಇವತ್ತು ಜಾಫರ್ ಷರೀಫರು ಎಂಬುದು ಕೇವಲ ಕಾಂಗ್ರೆಸ್ ಘೋಷಣೆಯಿರಬಹುದು. ಉತ್ಪ್ರೇಕ್ಷೆ ಎನಿಸಬಹುದು. ಆದರೆ ಜಾಫರ್ ಷರೀಫ್ ಬೇರೆಲ್ಲ ಪುಢಾರಿಗಳಂತಲ್ಲ. ಕರ್ನಾಟಕಕ್ಕೆ ರೈಲ್ವೇ ತಂದರು. ಅಚ್ಚು ಮತ್ತು ಗಾಲಿ ಕಾರ್ಖಾನೆ ಕೊಟ್ಟರು. ಒಂದಿಷ್ಟಾದರೂ ಕನ್ನಡಿಗರಿಗೆ ರೈಲ್ವೇಯಲ್ಲಿ ಕೆಲಸ ಅಂತ ಸಿಕ್ಕಿದ್ದು ಜಾಫರ್ ಷರೀಫ್ ಕಾಲದಲ್ಲೇ.

ರೈಲ್ವೇ ಪಿತಾಮಹ ಜಾಫರ್ ಷರೀಫರೆಲ್ಲಿ ದಿನಕ್ಕೊಂದು ಸೋಗು ಹಾಕುವ ಚಂದ್ರೇಗೌಡರೆಲ್ಲಿ? ಕರ್ನಾಟಕದ ಅಭಿವೃದ್ಧಿಯ ಹಿತಾಸಕ್ತಿಯಿಂದಾದರೂ ಜಾಫರ್ ಷರೀಫ್ ಗೆಲ್ಲಬೇಕಿದೆ.

● ರಾ. ಸೋಮನಾಥ್

"ಮೋದಿ ಮುದುಕಿರ್ಗೆ ರೆಸ್‌ಪೆಕ್ಟ್ ಕೊಡದ ಕಲ್ತಗಬೇಕು"

ಚುನಾವಣಾ ಅಭ್ಯರ್ಥಿಗಳ ಆಸ್ತಿ ಘೋಷಣೆ ಯನ್ನು ಉಗ್ರಿ ಮಾತನಾಡುತ್ತಿದ್ದಾಗ ಸಿಟ್ಟುಗೊಂಡ ವ,

ಕಳ್ಳ ಸೂಳೆ ಮಕ್ಕಳ ಸುದ್ದಿ ಏನು ಮಾತಾಡಿ, ರ್ಜ ಅತ್ತಗೆ" ಎಂದ.

ನಕಂಡೇನ್ ಮಾಡಂಗಿದ್ದೀ?".

ಮ್ಮಂದ ಗಳಿಸಿರೊ ಆಸ್ತಿ ವಿವರ ನಾವು ತಿಳಕಬೇಕು ವ".

ದು ಮಾಡದೆಯಿದ್ರುವೆ ಅವುನೋಗ್ತಿ ಏನು ಅನ್ನದು ಸ್ತುದೆ."

ಬ್ಲಾ, ಚಲುವರಾಯಸ್ವಾಮಿ, ಅಂಬರೀಸನಿಗಿಂತ ನಾಸ್ತಿನೆ ಜಾಸ್ತಿ ಅದಲ್ಲಾ ಅದೆಲ್ಲಿ ದುಡುದಾ?"

ಅಂತ?" ಎಂದ ಸೀರ.

"ನೀನು ಹುಟ್ಟು ದಡ್ಡ ಕಣೊ ಮಾವ."

"ಯಾಕ್ಲ ಅಂಗಂತೀ?"

"ಚಲುವರಾಯಸ್ವಾಮಿ ಸಾರಿಗೆ ಮಂತ್ರಿಯಾಗಿದ್ದ. ಒಂದು ಸತಿ ಸಾರಿಗೆ ಮಂತ್ರಿಯಾದ ಅಂದ್ರೆ ತಿರಗ ಮಂತ್ರಿಯಾಗದೇ ಬ್ಯಾಡವಂತೆ."

"ಆಟೊಂದಾದಾಯ ಬಂದತೆ?"

"ಬಂದತೆ ಅಂತ ಕೇಳ್ತಿಯಾ? ಇದೇ ಪಿ.ಜಿ.ಆರ್. ಸಿಂಧ್ಯಾ ಜನತಾ ಪಾರ್ಟಿ ಆಫೀಸ್ ಕಸಗುಡಿಸಿಗಂಡು ಯಾರಾರ ಲೀಡ್ರು ಬಂದ್ರೆ ಇಡ್ಲಿ ಸಾಂಬಾರ್ ಕೊಡುಸ್ತರೆ ಅಂತ ಕಾಯ್ತಿದ್ದನಂತೆ. ಅಂಥೋನು ಸಾರಿಗೆ ಸಚಿವನಾದ ಮ್ಯಾಲೆ ದ್ಯಾವೇಗೌಡುನ್ನೆ ಸೋಲಿಸಿದ್ದ ಗೊತ್ತೆ?"

ಯು ಲು ಸೀ ಮೆ

ಹೊಟ್ಟೆಪುರಾಣ

▶ಬಿ. ಚಂದ್ರೇಗೌಡ

"ಚಲುವರಾಯಸ್ವಾಮಿ ಬಾಳು ಅಂಗೆ ಇತ್ತಂತಲ್ಲ, ಭದ್ರಾವತಿಲಿರೊ ಅವುರಕ್ಕ ಉಪ್ಪು ಮೆಣಸಾದಿಯಾಗಿ ರೇಸನ್ನು ಕಳುಸ್ತಿದ್ಲಂತೆ" ಎಂದಳು ಜುಮ್ಮಿ.

"ನಿನಿಗ್ಯಾರೆ ಹೇಳಿದೋರು?"

"ನಂಜವ್ವ ಅಂಗಂದ್ಲು ಕಂಡ್ಯ."

"ನಂಜವ್ವ ಶಿವರಾಮನ ಸಮ್ಮಂದಿ. ಅದ್ಕೆ ಅಂಗಂದವ್ಳೆ ತಗೊ."

"ಅವುಳಂದದ್ದ ಹೇಳ್ತಿನಿ ಕಂಡ್ಯ. ಅಕ್ಕ ಭದ್ರಾವತಿಯಿಂದ ಸಕಲಿಸ್ಟನೂ ಕಳಿಸಿ ತಮ್ಮದಿರ ಸಾಕಿದಳಂತೆ. ಅದ್ಕೆ ಚಲುವ, ಅವುರಣ್ಣ ಅಕ್ಕನ ಮಕ್ಕಳನೇ ಮದಿವಾದರಂತೆ. ಮದಿವಾದಾಗ ಕರಿಮಣಿ ಸರ ಬುಟ್ರೆ ಇನ್ನೇನು ಇರಲಿಲವಂತೆ. ಇವತ್ತು ಅವುರು ಕೊಳ್ಳ ನೋಡಕ್ಕಾಗದಿಲವಂತೆ. ನೆಕ್ಲೇಸು, ಚೈನು, ಸರ, ಉಳೊ ಹಗ್ಗದ ಗಾತ್ರ ಸರಹಾಯ್ಕಂಡಿದ್ದರಂತೆ. ನಿಜವೇನ್ಲ?" ಎಂದಳು ಜುಮ್ಮಿ.

ರ.

ಮು ಕಂಡಂಗೆ ಅವುರಪ್ಪ ಒಂದಸನೂ, ಯಮ್ಮೆನೂ ದು ಆರುಡುತಿದ್ದ. ನಾನಾಗ ಭರ್ಜರಿ ಎತ್ತನೇ " ಎಂದ ಕಾಳಮಾವ.

ದಿವತ್ತು ಅಂಗೆಯಿದ್ದಿ ನೀನು. ಯಾಕಂಗಿದ್ದಿ ನ್ನ ವಲದಲ್ಲಿ ನೀನೇ ಉತ್ತು, ಬಿತ್ತು, ಬ್ಯಳದು ವಳಗದ್ದ ಮಾರಿ ಹಬ್ಬ ಮಾಡಿದ್ದಿ, ಅಂಗಿ ದಿದ್ದಿ, ಮಗಳ ಮದುವೆ ಮಾಡಿದ್ದಿ. ಅದು ಈ ರೈತನ ಬದುಕು. ರಾಜಕಾರಣಿನೂ ನಿನ್ನಂಗೆ ದತೆ? ದಿನಕ್ಕೆ ಹತ್ತು ಹದಿನೈದು ಸವುರ ಕ್ಯಾಶೆ ಗೆ" ಎಂದ ಉಗ್ರಿ.

ಟ್ಟೊಂದು ಬೇಕೇನ್ಲ?" ಎಂದಳು ಜುಮ್ಮಿ.

ಓ ಕಡಮೆ ಕಣೆ. ದಿನಕೆ ಐವತ್ತು ಸವುರ ಮಾಡೋರವುರೆ. ಅಂಬುರೀಸನಿಗೇನು ಮಸಿಬೇಕೆ?"

ಸಿನುಮದಲ್ಲಿ ಆಕ್ಟಸ್ ಮಾಡ್ತಯಿಲ್ಲವಲ್ಲಾ ದ ದುಡ್ಡು ಬತ್ತದೇ?" ಎಂದ ಸೀರ.

ಮ ತಗಂಡು ತಿಯೇಟ್ರಿಗೆ ಬುಡ್ತನಂತೆ ಕಣೊ. ಆದಾಯ ಬಂದತೆ? ಅದೊಂತರ ಕಮಿಷನ್ ಕೆಲಸ."

ಳ್ಳಿ ಯಾಪಾರ ಅನ್ನು"

ಚೆನಾಗಿ ಅನ್ನದೇನು ಬ್ಯಾಡ, ಕಮಿಷನ್ ಅನ್ನಬವುದು."

ಬುರೀಸೇನೊ ಸಿನುಮದಲ್ಲಿ ದುಡುದ. ಷ್ಟ ಕಂತ್ರಾಟಾಗಿದ್ದ, ಸರಿ. ಚಲುವರಾಯಸ್ವಾಮಿ ಟು ತೋರಿದನಂತಲ್ಲಾ, ಅದೆಲ್ಲಿ ದುಡುದಾ

"ಅದೇನೊ ನಿಜ. ಆದ್ರೆ ಚಲುವರಾಯಸ್ವಾಮಿ ತುಂಡುಗುತ್ತಿಗೆ ಮಾಡ್ತಿದ್ದ. ದ್ಯಾವೇಗೌಡನ ಕಣ್ಣು ಅವುನ ಮ್ಯಾಲೆ ಬಿತ್ತು. ಇವತ್ತಿರಂಗಾದ. ಆದ್ರೆ ಅವುನು ತೋರಿಸಿಗಂಡಿರೊ ಏಳು ಕೋಟಿ ಸುಳ್ಳು ಕಣೆ. ಅದರತ್ತು ಪಟ್ಟು ಆಸ್ತಿ ಮಾಡ್ಯವುನೆ" ಎಂದ ಉಗ್ರಿ.

"ಅದ್ಯಂಗೆ ದುಡಿತರ್ಲ?" ಎಂದ ಸೀರ.

"ಅದ ಅವುನು ಸಿಕ್ಕಿದಾಗ್ಲೆ ಕೇಳಬೇಕು. ಆದ್ರು ಒಂದು ಕ್ಲೂ ಕೊಡ್ತಿನಿ ಸೋಡು. ಇಲ್ಲಿಂದ ಶ್ರವಣಬೆಳಗುಳಗಂಟ ರಸ್ತೆ ಮಾಡ್ತರೆ ಅಂತ ಇಟಗೊ. ಮೂರು ಕೋಟಿ ಸ್ಯಾಕ್ಷನ್ ಆಯ್ತದೆ. ಅದರಲ್ಲಿ ಅನಾಮತ್ತು ಒಂದೂವರೆ ಕೋಟಿನೆ ತೂದಿತ್ತಗೆ ಯಸಗಂಡು ಬುಡ್ತರೆ. ಇದು ಕಂತ್ರಾಟು ಕತೆ ಆಯ್ತು, ಇನ್ನ ಸಾರಿಗೆ ಮಂತ್ರಿ ಆದ್ರೆ ಏನು ಮಾಡ್ತರಪ್ಪ ಅಂದ್ರೆ, ಬಸ್ಸು ತಗಳವಾಗ ಕಮಿಷನ್ ಬತ್ತದೆ. ಟೈರ್ ತಗಳವಾಗ ಬತ್ತದೆ. ಡಿಜೇಲ್ ತಗಳವಾಗ ಬತ್ತದೆ. ಟ್ರಾನ್ಸ್‌ಫರ್ ಮಾಡುವಾಗ ಬತ್ತದೆ. ಸುತ್ತಮುತ್ತ ಕೈ ಹಾಕಿದ ಜಾಗದಲ್ಲೆಲ್ಲ ದುಡ್ಡೆಯ. ಎಷ್ಟು ದುಡ್ಡು ಅಂದ್ರೆ ಚೀಲ ತುಂಬ ನಿಟ್ಟು ಇಡಿತಾಯಿರಬೇಕಾಯ್ತದೆ."

"ಅಯ್ಯೋ, ಅಯ್ಯೋ ರಾಮ ಹೋಗತ್ತಗೆ!"



"ದ್ಯಾವೇಗೌಡ ಏಟು ತೋರಿದ್ದನ್ಲ."

"ಅವುನು ಖಾಲಿ ಜುಬ್ಬದ ಜೇಬು ತೋರಿದನಂತೆ ಕಣಮಾವ."

"ಅಣಕ ವಡಿಬ್ಯಾಡ, ಸರಿಯಾಗೇಳ್ಳ."

"ಅವುನ ಪ್ರಾಪರ್ಟಿ ಮ್ಯಾಟ್ರು ತಗಂಡು ಏನು ಮಾಡಂಗಿದ್ದಿ ದ್ವಡಪ್ಪ? ನೀನೇನು ಚುನಾವಣೆ ಅಧಿಕಾರಿನೆ?" ಎಂದು ಪಾಟಿಸ್ಸೆ ಬಂದ.

"ಸುಮ್ಮನೆ ಕೇಳಿದೆ ಕಂಡ್ಯ."

"ನೈನ್‌ಟೀನ್ ಸಿಕ್ಸ್‌ಟಿ ಟೂನಲ್ಲಿ ನೀನ್ಯಂಗಿದ್ಯೊ ಅಂಗೆ ಅವುನು ಇದ್ದ. ಆದ್ರಿವತ್ತು ಇಡೀ ಹಾಸನ ಜಿಲ್ಲೆನೆ ಕೊಂಡಕಳ್ಳಂಗಾಗ್ಯವುನೆ. ಅದೆ ನೀನು ನಮ್ಮೂರು ಕೊಂಡಕಳಂಗಿದ್ದಿಯಾ?"

"ಊರೇನು ಮಾಡಕ್ಲ? ಶ್ಯಾಮಾಚಾರಿ ಗದ್ದೆ ತಗಂಡ್ರು ಸಾಕಾಗ್ಯದೆ."

"ನಿನಿಗ್ಯಂಗೆ ಸಾಯೋ ಕಡೆಸತಿ ಶಾಮಚಾರಿ ಆಸ್ತಿ ಕೊಂಡಕಳೊ ದುರಾಸೆ ಬಂದದೊ, ಅದೇ ತರ ದ್ಯಾವೇಗೌಡನಿಗೂ ಸಾಯೋ ಕಡೇ ಸತಿ ಸಂಸತ್ತಿಗೋಗನ ಅನ್ನಿಸ್ಯದೆ. ನೋಡಿದ್ಯಂಗದೆ?"

"ಯಾರಾರ ಹರೇದುಡ್ರಿಗೆ ಬುಟ್ಟು ಕೊಡಬವುದಿತ್ತು."

"ನಮ್ಮ ದ್ವಡಪ್ಪ ಮನೆ ಯಜಮಾನಿಕೆನ ಇವತ್ತು ಯಂಗೆ ಕೈಲಿಟಗಂಡವ್ರುನೊ, ಅದೇತರ ದ್ಯಾವೇಗೌಡನುವೆ."

"ಈ ಜನಕೆ ವಯಿಸಾದ ಮ್ಯಾಲೆ ಆಸೆ, ಹಟ, ಜಾಸ್ತಿಯೇನಪ್ಪ."

"ನೀವು ನ್ಯಟ್ಟಗೆ ಕ್ವಸಿಯದಾದ್ರೆ ನಾವ್ಯಾಕೆ ವರೆಯುಳಿಯಕ್ಕೋಯ್ತಿವುಲ?" ಎಂದು ಕಾಳಮಾವ ಸಿಟ್ಟಾದ.

"ಸಿಟ್ಟಾಗ ಬ್ಯಾಡ ದ್ವಡಪ್ಪ, ವಯಿಸಾದೋರಿಗೆ ಗೌರವ, ಬ್ಯಲೆ, ರೆಸಪೆಕ್ಟ್ ಕೊಡದು ನಮಿಗೂ ಗೊತ್ತದೆ. ಆ ಮೋದಿ ಮುಂಡೆ ಮಗನಿಗೆ ಗೊತ್ತಿಲ್ಲ."

"ಅವುನ್ಯಾನ ಮುದುಕರಿಗೆ ಅವುಮಾನ ಮಾಡಿದ್ದನ್ಲ?"

"ನೋಡಕ್ಕ, ಮೇಲಗ್ಯಾರ ಅಮಾಸೆ ಅನ್ನ ಅಳಿ, ಜಗಲಿ ಮ್ಯಾಲೆ ಕುಂತವ್ಳೆ. ನೂರೈದೊರಸವಂತೆ. ಅವುಳ ನೋಡಿದ್ರೆ ಒಂದು ಶತಮಾನ ನೋಡಿದಂಗಾಯ್ತದೆ. ಕೈ ಮುಗಿಯನ ಅನ್ನುಸ್ತದೆ. ಈ ಮೋದಿ ಅನ್ನೊ ಫ್ರೂಲಿಷ್‌ಫೆಲೊ ಕಾಂಗ್ರೆಸ್ ಮುದುಕಿ ಅಂದವ್ರುನೆ. ಅಂಗರೆ ಮುದುಕಿರ್ಗೆ ಬಿಜೆಪಿಲಿ ಬ್ಯಲೆನೆ ಇಲವೆ?"

"ಅದಕುತ್ತರ ಕೊಟ್ಟಳಲ್ಲೊ ಪ್ರಿಯಾಂಕ. ಅಂಗೆ ಮೆಟ್ನಲ್ಲಿ ವಡದಂಗೆ ಉತ್ತರ ಕೊಟ್ಟಳಪ್ಪ" ಎಂದ ಉಗ್ರಿ.

"ಏನಂತ ಕೊಟ್ಳೊ?" ಎಂದಳು ಜುಮ್ಮಿ.

"ಆ ಮೋದಿ ಕಾಂಗ್ರೆಸ್ ನೋಡಿದ್ರೆ ಮುದುಕಿ ನೋಡಿದಂಗಾಯ್ತದೆ ಅಂದ. ಅದ್ಕೆ ಸೋನಿಗಾಂಧಿ ಮಗಳು ಪ್ರಿಯಾಂಕ ನಾನು ಮುದುಕಿನಾ ಅಂದ್ಲು."

"ಅಲ್ಲಿಗೆ ಅವುಳೆ ಕಾಂಗ್ರೆಸ್ಸು ಅಂದಂಗಾಯ್ತು."

"ಆ ಮಾತು ಅಲ್ಲಿಗೇ ಬತ್ತು. ನೂರ ಇಪ್ಪತ್ತೈದು ವರ್ಸಾಗಿರೊ ಕಾಂಗ್ರೆಸ್ ಪ್ರಿಯಾಂಕನ ತರ ಇದ್ರೆ, ಒಂದು ಮುವ್ವತ್ತು ವರುಸದ ಬಿಜೆಪಿ ಅದ್ವಾನಿ ತರ ಅದೆ ಅನ್ನದಾದ್ರೆ ಆ ಮುಸುಡಿಗಳ ನೋಡಕ್ಯಾದತೆ?"

"ಅವುನಿಗಿಂತ ಮೋದಿ ಮುಸುಡಿ ನೋಡಬೇಕು ನೀನು. ಅಂತ ಮುಂಡೆ ಮಕ್ಕಳ್ಳಲ್ಲ ಕಾಂಗ್ರೆಸ್ ಮುದುಕಿಯಂಗದೆ ಅಂದ್ರೆ ಏನ್ಹೇಳನ?"

"ಆ ರಾಮಚಂದ್ರೇಗೌಡ, ಶಂಕರಮೂರ್ತಿ, ಎಡೂರ, ಅದ್ವಾನಿ ಇವುರ್ಯಲ್ಲರ್ನು ನೋಡಿ ಪ್ರಿಯಾಂಕ ಬಿದ್ದು ಬಿದ್ದು ನಗಾಡಿ ನೀವೇನಾಗಿದ್ದಿರಿ ಅಂದವಂತೆ."

"ಅವುಳೇನಾರ ಬಂದ್ರೆ ಇವುರ್ಯಲ್ಲ ಅದಿಗೋಯ್ತರೆ."

"ಬಂದೇ ಬತ್ತಳೆ ಕಣೊ ಉಗ್ರಿ. ಅವುಳು ಹೋಯ್ತಾಯಿದ್ರೆ ಅಂಗೆ ಜನಗಳಿಗೆ ಕರಂಟು ಪಾಸಾಯ್ತವೆ. ಒಂದಲ್ಲಾ ಒಂದಿನ ಅವುರವ್ವನ ಜಾಗದಲ್ಲಿ ನಿಂತು ಗೆದ್ದು ಬತ್ತಳೆ."

"ಬರ್ಲಿ, ಆದ್ರೆ ಅವುರಜ್ಜಿಯಂಗಾದೆಯಿದ್ರು ಸಾಕು."

"ಕ್ಲಾಸ್ ಬ್ರೀಡು ನೋಡು, ಅಂಗಾಗದಿಲ್ಲ!"

" !?"

–ಬಿ. ಚಂದ್ರೇಗೌಡ

ಪಕ್ಷಾಂತರಿಗಳ ಸಮೂಹಗಾನ ೨೦೦೯

೧. ಎಲ್ಲ ಪಕ್ಷಗಳ ಪಕ್ಷಾಂತರಿಗಳೆ,
ನಮ್ಮ ಪಕ್ಷವನೆ ಕಟ್ಟೋಣ.
ಹಣಹದ್ದುಗಳೇ, ರಣರಂಗದಲಿ
ಹೆಣದ ರಾಶಿಗಳ ಒಡ್ಡೋಣ.

೨. ನಮ್ಮ ಹಣೆ ಮೇಲೆ ಬರೆದಿದೆ ನೋಡಿರಿ.
ಇದು ಇವತ್ತಿನ ರೇಟು.
ಮುಂದಿನ ಗಿರಾಕಿ ಕಾಯ್ದಿದ್ದಾನೆ.
ನೋಡಿರಿ ಹಿಂದಿನ ಗೇಟು.

೩. ನೀವು ಕೊಡುವ ಹಣ ನಿಮ್ಮದೊ ಪರರದೊ
ಅದು ನಿಮ್ಮ ನಿಮ್ಮ ಕರ್ಮ
ತಿನಿಸುವವರೆಗೂ ನಾವು ನಿಮ್ಮವರು.
ಇದು ನಮ್ಮ ಧರ್ಮ.

೪. ನಮ್ಮ ವಂಶವೇ ಶನಿಸಂತಾನ.
ಬೇವಾರ್ಸಿಗಳ ತಂಡ.
ತಾಳಿ ಕಟ್ಟಿದರೆ ನೀನೇ ಗಂಡ.
ಇಟ್ಟುಕೊಂಡರೆ ಮಿಂಡ.

೫. ಕೆಸರಿನ ಕಮಲವೊ ಹುಲ್ಲಿನ ಹೊರೆಯೋ
ಕುತ್ತಿಗೆ ಹಿಚುಕುವ ಕೈಯೋ.....
ನಮ್ಮ ಮಾತುಕತೆ ಯಶಸ್ವಿಯಾಗಲಿ.
ಜನ ಹೊಯ್ಕೊಳ್ಳಲಿ-ಅಯ್ಯೋ.

೬. ನಮ್ಮನ್ನಾರಿಸಿ ಕಳಿಸಿದ ಜನರೇ,
ನೀವೇ ಮಾಡಿದ ಪಾಪ.
ತುಂಬಿದ ಕೊಡವದು ತುಳುಕಲೆ ಬೇಕು.
ಪಡಿರ್ರಿ ಪಶ್ಚಾತ್ತಾಪ.


೭. ಪ್ರಜಾತಂತ್ರದಲಿ ಪ್ರಭುಗಳೆ ನಾವು.
ಪ್ರಜೆಗಳ ಚಟ್ಟವನೆತ್ತೋಣ.
ನಮ್ಮ ವಂಶವೇ ಚಿರಾಯುವಾಗಲಿ.
ನಮ್ಮ ಬೀಜಗಳ ಬಿತ್ತೋಣ.

೮. ನಡೆದಾಡುವ ದೇವರ ಆಣತಿಯಂತೆ
ಜಾರು ಅಂದಕಡೆ ಜಾರೋಣ.
ಅದು ಇದು ಎಡವಟ್ಟಾದರೆ ಕೊನೆಗೆ
ಅವರ ಮಠವನ್ನೇ ಸೇರೋಣ.

● ಚಂಪಾ



ಗಂಗೆ, ಕಾವೇರಿಯನ್ನು ಹಿಂಬಾಲಿಸಿ



ಇವರಲ್ಲಿ ಒಬ್ಬರು ವೈದ್ಯರು, ಹೆಸರು ಡಾ. ನಾಗರಾಜ್. ಇನ್ನೊಬ್ಬರು ಪರಿಸರ ಇಂಜಿನಿಯರ್- ಇವರ ಹೆಸರು ರಾಜಶೇಖರ ಮೂರ್ತಿ. ಮೂರನೆಯವರು ಶ್ರೀಪತಿ ರಾಜು-ಇವರು ಅರ್ಥಶಾಸ್ತ್ರಜ್ಞ.

ಮೂವರೂ ಅಮೆರಿಕಾದಿಂದ ಆಗಾಗ ಬಂದು 'ಗಂಗಾ-ಕಾವೇರಿ ಟ್ರಸ್ಟ್' ಎಂಬ ಸಂಸ್ಥೆ ರೂಪಿಸಿಕೊಂಡು ಭಾರತದ ಜನಕ್ಕೆ ಏನಾದರೂ ಸಹಾಯ ಮಾಡಬೇಕೆಂಬ ಕಳಕಳಿ ಉಳ್ಳವರು.


ಮೂವರೂ ಕನ್ನಡಿಗರೆಂಬುದು ವಿಶೇಷ. ಶ್ರೀಪತಿ ರಾಜು ಶಿವಮೊಗ್ಗೆಯ ಹತ್ತಿರದ ತ್ಯಾವಣಗಿ ಎಂಬ ಹಳ್ಳಿಯಲ್ಲಿ ಹುಟ್ಟಿದವರು; ನಾಗರಾಜ್ ಟಿ. ನರಸೀಪುರದ ಹತ್ತಿರದ ಹಳ್ಳಿಯಲ್ಲಿ ಹುಟ್ಟಿದವರು. ರಾಜಶೇಖರ್ ಮೂರ್ತಿ ಬೆಂಗಳೂರಿನವರು.

ಇವರು ನಾವೆಲ್ಲ ಗಂಗಾ-ಕಾವೇರಿಯ ವಿಚಾರ ಮಾತಾಡುತ್ತಿರುವುದು, ಪ್ರಧಾನಿಗೆ ಮನವಿಪತ್ರ ಸಲ್ಲಿಸಿದ್ದು-ಇದೆಲ್ಲದರ ಬಗ್ಗೆ ಕೇಳಿ ನಮ್ಮನ್ನು ಸಂಪರ್ಕಿಸಿದ್ದರು. ಇಂಥ ದಿನ ಬಂದು ನಿಮ್ಮೊಂದಿಗೆ ಮಾತಾಡುತ್ತೇವೆ ಎಂದು ತಿಳಿಸಿದರು. ಅಮೆರಿಕದ ಈ ಭಾರತೀಯರನ್ನು ಕಂಡರೆ ನನಗೆ ಅನುಮಾನ; ಇಲ್ಲಿಂದ ಹೋಗಿ ಅಮೆರಿಕದಲ್ಲಿ ನೆಲೆಸಿದ ಬಹುಪಾಲು ಜನ ಚೆನ್ನಾಗಿ ದುಡ್ಡು ಮಾಡಿ ಸುಖಜೀವನ ನಡೆಸುತ್ತಾ ತಮ್ಮ ದೇಶದ ಬಗ್ಗೆ ಉಪಚಾರಕ್ಕಾಗಿ ಕನಸು ಕಂಡು ಅಮೆರಿಕದಲ್ಲಿ ದೊಡ್ಡದೊಡ್ಡ ಈಶ್ವರ, ವಿಷ್ಣು ಗಣಪತಿ ದೇವಾಲಯ ಕಟ್ಟುವವರು. ಈ ಭಾರತೀಯ-ಅಮೆರಿಕನ್ನರಿಗೆ ಈ ದೇಶದಲ್ಲಿ ಇಲ್ಲದೇ ಇದ್ದ ದೈವಭಕ್ತಿ ಸಂಪ್ರದಾಯಶ್ರದ್ಧೆ ಅಮೆರಿಕದಲ್ಲಿ ಹುಟ್ಟಿಕೊಳ್ಳುತ್ತದೆ. ತಮ್ಮ ವೈಭವದ ಬದುಕಿಗೆ ಭಾರತೀಯ ಸಂಪ್ರದಾಯ ಕೂಡ ಸೇರಿದರೆ ತಮ್ಮ ಬದುಕು ಸಾರ್ಥಕವೆಂದು ತಿಳಿಯುತ್ತಾರೆ.

ಆದರೆ ನಾಗರಾಜ್, ರಾಜು ಮತ್ತು ಮೂರ್ತಿ ಆ ತರಹದವರಲ್ಲ, ಅವರಿಗೆ ಸ್ವಂತದ ಸುಖ ಮಾತ್ರ ಸಾಲದು. ಭಾರತದಲ್ಲಿ ಒಂದು ಕಡೆ ಮರುಭೂಮಿ, ಇನ್ನೊಂದು ಕಡೆ ಜಲಕ್ಷಾಮ, ಮತ್ತೊಂದು ಕಡೆ ಪ್ರವಾಹದ ಹೊಡೆತ. ಇಲ್ಲಿಯ ಜನ ಇಡೀ ಜಗತ್ತಿನಲ್ಲಿ ನಿರ್ಗತಿಕರೂ ಅಸಹಾಯಕರೂ ಆದವರು. ಪ್ರವಾಹದ ನೀರು ಕ್ಷಾಮದ ಜನರಿಗೆ ದಕ್ಕುವಂತೆ ಮಾಡಿದರೆ, ತಾವು ಕಲಿತದ್ದರಿಂದ ಭಾರತದ ಜನಕ್ಕೆ ಕಿಂಚಿತ್ತಾದರೂ ಒಳ್ಳೆಯದನ್ನು ಮಾಡುವಂತಾದರೆ....ಎಂದು ತವಕಿಸುವವರು.

ಈ ಮೂವರೂ ಭಾರತದ ಬುದ್ಧಿಜೀವಿಗಳನ್ನೂ, ಜನಸಾಮಾನ್ಯರನ್ನೂ, ಅಧಿಕಾರಿಗಳನ್ನೂ, ರಾಜಕಾರಣಿಗಳನ್ನೂ ಕಂಡು ಗಂಗಾ-ಕಾವೇರಿಯ ಬಗ್ಗೆ ಇಲ್ಲಿ ತಾವು ಆರಂಭಿಸಬಹುದಾದ ಚಟುವಟಿಕೆಗಳ ಬಗ್ಗೆ ಮಾತಾಡಿದ್ದಾರೆ. ದಸ್ತಗೀರ್ ಎಂಬ ಪಾರ್ಸಿ ವೈಮಾನಿಕ ಕಳೆದ ಎರಡು ದಶಕದಿಂದ ಗಂಗಾ-ಕಾವೇರಿಯ ಬಗ್ಗೆ ತಲೆ ಕೆಡಿಸಿಕೊಂಡು ಓಡಾಡಿ ತಯಾರಿಸಿದ ವರದಿಯನ್ನು ಅಭ್ಯಸಿಸಿದ್ದಾರೆ.

"ನಾವು ಸಾಮಾನ್ಯರು. ಗಂಗಾ-ಕಾವೇರಿಯ ಬಗ್ಗೆ ನಮಗೆ ಕಾಳಜಿ ಇದೆ. ಅದನ್ನು ಯಾವ ರೀತಿಯಲ್ಲಿ ಸಾಧ್ಯಗೊಳಿಸಬಹುದು ಎಂದು ನೋಡುತ್ತಿದ್ದೇವೆ. ಒಮ್ಮೊಮ್ಮೆ ಇದೆಲ್ಲ ಆಗದ ಕೆಲಸ ಅನ್ನಿಸುತ್ತದೆ" ಎಂದು ಒಬ್ಬರು ಹೇಳಿದರೆ ಡಾ. ಮೂರ್ತಿ ಹೇಳುತ್ತಾರೆ, "ನಮ್ಮೆದುರು ಇರುವ ಎಲ್ಲ ಅಡೆತಡೆ, ಕಷ್ಟಗಳನ್ನೂ ಅರಿತು ಮುಂದುವರಿದರೆ ಒಳ್ಳೆಯದು. ಇವತ್ತು ಒಂದು ಅಣೆಕಟ್ಟು ಕಟ್ಟುವುದು, ಒಂದು ನದಿಯನ್ನು ಇನ್ನೊಂದಕ್ಕೆ ಸೇರಿಸುವುದು ಸುಲಭವಲ್ಲ-ಪರಿಸರವಾದಿಗಳು ಪ್ರತಿಭಟಿಸುತ್ತಾರೆ. ಅವರ ಮನಸ್ಸು ಗೆದ್ದು, ಗಂಗಾ ಹರಿಯುವ ರಾಜ್ಯಗಳ ಮನವೊಲಿಸಿ, ರಾಜಕಾರಣಿಗಳನ್ನೂ ಒಪ್ಪಿಸಿ, ಜನರು ಹುಮ್ಮಸ್ಸಿನಿಂದ ಜಾಗೃತರಾಗುವಂತೆ ಮಾಡಬೇಕಾಗಿದೆ.... ಇದು ಬೃಹತ್ ಕೆಲಸ. ಆದ್ದರಿಂದ ಸಣ್ಣಪುಟ್ಟ ಕೆಲಸಗಳಿಂದ ಶುರುಮಾಡುವುದೇ ಒಳ್ಳೆಯದೆನ್ನಿಸುತ್ತದೆ."



ಹೊರಗಿನಿಂದ ಇಲ್ಲಿಗೆ ಬಂದವರಿಗೆ ಅನೇಕ ಬಗೆಯ ಆತಂಕಗಳಿರುತ್ತದೆ. ವಿದೇಶೀಯರನ್ನು ಕಂಡೊಡನೆ ಅವರಿಂದ ವಿದೇಶಯಾತ್ರೆ ಗಿಟ್ಟಿಸಿಕೊಳ್ಳುವ, ಅವರ ಹಣಕ್ಕಾಗಿ ಬಾಯಿಬಿಡುವ, ಹೇಗಾದರೂ ಮಾಡಿ ಮೇಲೆ ಬರುವ ಜನರೇ ಇಲ್ಲಿ ಹೆಚ್ಚು. ಅವರು ಗಂಗಾ-ಕಾವೇರಿ ಬಗ್ಗೆ ಚರ್ಚಿಸಲು ಅಂತರ್ರಾಷ್ಟ್ರೀಯ ಸಭೆ ಕರೆಯುವ ಮಾತಾಡಿದರು. ನಾನೆಂದೆ, "ಕರೆಯಿರಿ, ಚರ್ಚಿಸಿ... ನಮ್ಮಲ್ಲಿರುವ ವಿಷಯಗಳನ್ನೆಲ್ಲ ಕಳಿಸಿಕೊಡುತ್ತೇವೆ. ಅಲ್ಲಿ ಏನಾಯಿತು ಎಂದು ನಮಗೆ ತಿಳಿಸಿ. ಅಷ್ಟೆ."


ನಾವು ವಿಚಿತ್ರ ಜನ ಎಂದು ಅವರಿಗೆ ಅನ್ನಿಸಿರಬೇಕು.

-ಜುಲೈ 14, 1991

ಮಣ್ಣ ಮನೆ ಹುಡುಗಿ ಸುಪ್ರಭ

ಪ್ರೀತಿಯ ಗೌರಿ,
ಬಡಕುಟುಂಬದಿಂದ ಬಂದು
ಅತ್ಯಂತ ಪರಿಶ್ರಮದಿಂದ
ಕಲಿಯುತ್ತಿದ್ದ, ಅತ್ಯುತ್ತಮ
ವಿದ್ಯಾರ್ಥಿನಿಯಾಗಿದ್ದ ನನ್ನ
ವಿದ್ಯಾರ್ಥಿನಿ ಸುಪ್ರಭ ನಿನ್ನೆ
ಮನೆಯ ಜಗಲಿ ಮೇಲೆ
ಓದುತ್ತ ಕುಳಿತಿದ್ದಾಗ
ಬರಸಿಡಿಲು ಬಡಿದು
ತೀರಿಹೋದಳು. ಆ
ಸಂಕಟವನ್ನು ಹಂಚಿಕೊಳ್ಳಲು
ಸುಪ್ರಭಾಳಿಗೆ
ಶ್ರದ್ಧಾಂಜಲಿಯಾಗಿ ಈ
ಕವಿತೆ ಬರೆದು
ಕಳುಹಿಸುತ್ತಿದ್ದೇನೆ. ಸುಪ್ರಭ
ಇದೀಗ ಮೊದಲ ಬಿಬಿಎಂ
ಪದವಿ ತರಗತಿಯ
ಮೊದಲ ಸೆಮಿಸ್ಟರನ್ನು
ಮಾತ್ರ ಮುಗಿಸಿದ್ದಳು
ಇಲ್ಲಿಯ ಶ್ರೀ ಭುವನೇಂದ್ರ
ಕಾಲೇಜಿನಲ್ಲಿ.
ಸಾಹಿತ್ಯದಲ್ಲೂ ಆಸಕ್ತಿಯಿದ್ದು
ಬೆಳೆಯುತ್ತಿದ್ದವ ಳು.


ಸಪೂರ ನಸುಗಪ್ಪು ದೇಹದ
ಹೊಳಪು ಕಣ್ಣುಗಳ ಸುಪ್ರಭಾಳಿಗೆ
ಪ್ರತಿ ಕ್ಷಣವೂ ಅಚ್ಚರಿಯಾಗಿತ್ತು
ಬೇಂದ್ರೆ ಪದ್ಯ 'ಚಿಗರೆ ಕಂಗಳ ಚೆಲುವಿ'ಗೆ
ಇವಳನ್ನು ಹೋಲಿಸಬಹುದಾಗಿತ್ತು
ಈಗ ನನ್ನ ಕಂಗಳ ಹನಿಯ ತೇವದ ರೂಪಕವಾಗಿರುವಳು.
ಕನ್ನಡ-ಸಾಹಿತ್ಯ-ವಾಣಿಜ್ಯ ಎಲ್ಲವೂ
ಅವಳ ಮೆಚ್ಚಿನ ವಿಷಯಗಳು
ಅದರಲ್ಲೂ ಕನ್ನಡಕ್ಕೆ ಸ್ವಲ್ಪ ಪ್ರೀತಿ ಜಾಸ್ತಿ
ತಾಯಿ ಕರುಳು ಮಿಡಿವ ಧ್ವನಿಯ ಕೇಳುತ್ತಿದ್ದಳು
ತಂದೆಯಿಲ್ಲದ ಮನೆಯ ತಾಯಿಯೇ ದಿಕ್ಕಾದ
ತಮ್ಮಂದಿರಿದ್ದ ಸುಪ್ರಭಾಳಿಗೆ
ಮುಂದೆ ಮನೆಗೆ ತಾನೇ ತಂದೆಯಾಗಿ
ದಿಕ್ಕಾಗಬೇಕೆಂಬ ಮಹದಾಸೆ ಮಾತ್ರವಿತ್ತು.....
ತರಗತಿಗೆ ಅವಳೇ ಮೊದಲು.
ಕೂಲಿ ಮಾಡಿ ಬೆವರು ಸುರಿಸಿ
ಮಕ್ಕಳನ್ನು ಶಾಲೆಗೆ ಕಳುಹಿಸುವ ತಾಯಿಯ
ಒಬ್ಬಳೇ ಮಗಳು ದೊಡ್ಡ ಮಗಳು ಸುಪ್ರಭಾ
ನಿನ್ನೆ ಇಲ್ಲೇ ತನ್ನ ಮಣ್ಣ ಮನೆಯ
ಜಗಲಿ ಮೇಲೆ ತನ್ನ ಪುಸ್ತಕವೆಂಬ
ಕನಸನ್ನು ಹರಡಿಕೊಂಡು ಪರೀಕ್ಷೆಗಾಗಿ
ಕಲಿಯಲು ಕೂತಿದ್ದಳು; ಬರಸಿಡಿಲಿನ
ಕಿಂಚಿತ್ ಅರಿವೂ ಇಲ್ಲದೆ ಪುಸ್ತಕದಲ್ಲಿ
ಕಣ್ ನೆಟ್ಟಿದ್ದಳು-ಮೈ ಮರೆತಿದ್ದಳು
ನಿಷ್ಕರುಣೆ ಸಿಡಿಲಪ್ಪಳಿಸಿ ಸುಟ್ಟು ಕರಕಲಾದಳು
ಮಣ್ಣ ಮನೆಯ ಹುಡುಗಿ ಸುಪ್ರಭಾ
ಸುಡುವ ಬಾಳ ಪುಸ್ತಕದ ಪಾಠವಾದಳು-



● ಜ್ಯೋತಿ ಗುರುಪ್ರಸಾದ್

ಕಡಿದಾಳು ಶಾಮಣ್ಣ

ಕಾಡ ತೊರೆಯ ಜಾಡು 17



ಅಕ್ಷರ ರೂಪ: **ಅಕ್ಷತಾ ಕೆ.**

ಗೋಲಿಬಾರ್ ನಂತರ...

ದೇವಸ್ಥಾನದ ಒಳಗೆ ಬಂದು ನಿಂತವನಿಗೆ ...ತಾಮ್ಯಾಗ್ಲಿಲ್ಲ ಆಳೂ ಆಗ್ಲಿಲ್ಲ, ಏನಾಗ್ತಿದೆ ಅನ್ನೋದು ...ವಿಗೆ ಬರ್ತಿಲ್ಲ, ದೇಹದಲ್ಲಿ ಪ್ರಜ್ಞೆಯೇ ಇಲ್ಲವೇನೋ ...ಸ್ಥಿತಿಯಲ್ಲಿದ್ದೆ. ನನ್ನೊಬ್ಬನದೇ ಅಲ್ಲ, ದೇವಸ್ಥಾನದ ...ಗೆ ಸೇರಿಕೊಂಡ ಬಹುತೇಕರ ಸ್ಥಿತಿಯೂ ಹಾಗೆ ...ತ್ತು. ಕತ್ತಲು ಕವಿದ ಹಾಗೆ ಗುಂಡಿನ ಶಬ್ದ ಬೂಟಿನ ...ಗಳು ನಿಂತುಹೋದವು. ಆದರೆ ಪೊಲೀಸರು ...ವ ಹೊತ್ತಿಗಾದರೂ ಬಂದು ಗುಂಡು ಹಾರಿಸುವ, ...ಸ್ಟ್ ಮಾಡುವ ಸಾಧ್ಯತೆಗಳು ಇದ್ದೇ ಇದ್ದವು. ...ತು ಹರಿಯುವತನಕ ನಮ್ಮ ನಮ್ಮ ಜಾಗ್ರತೆ ...ತ್ರ ಮಾಡಿಕೊಳ್ಳೋಣ, ಬೆಳಕು ಹರಿದನಂತರ ...ಂದೇನು ಎಂದು ಆಲೋಚಿಸೋಣ ಎಂದು ...ವಸ್ಥಾನದಿಂದ ಒಬ್ಬೊಬ್ಬರು ಒಂದೊಂದು ದಿಕ್ಕಿಗೆ ...ದೆವು. ಕೆಲವರ ಕೈಕಾಲಿಗೆ ಗುಂಡೇಟು ...ಲಿದ್ದರಿಂದ ಅವರನ್ನು ಭದ್ರಾವತಿ, ಶಿವಮೊಗ್ಗ ...ತ್ರೆಗೆ ಕರೆದೊಯ್ಯಲಾಯಿತು. ಮಂಗೋಟೆಯ ಬಳಿ ... ಅಣ್ಣ ಡಾ. ಹಾಲಪ್ಪನವರ ತೋಟವಿದ್ದು, ಅಲ್ಲಿನ ...ಟದ ಮನೆಯಲ್ಲಿ ಕಡಿದಾಳಿನ ಸಿದ್ದಚಾರಿ ...ಪತಿಗಳು ನೆಲೆಸಿದ್ದರು. ಆ ರಾತ್ರಿ ನಾನು ಅಲ್ಲಿಗೆ ...ಗಿ ಸಿದ್ದಚಾರಿಗೆ ವಿಷಯ ತಿಳಿಸಿದೆ. "ಈ ರಾತ್ರಿ ...ಲ್ಲೂ ಹೋಗೋದು ಬೇಡ. ನೀವು ಇಲ್ಲೆ ಉಳ್ಕೊಳಿ. ...ು ಭಗವತಿಕೆರೆಗೆ ಹೋಗಿ ನೀವು ನಮ್ಮನೆಯಲ್ಲಿ ...ಕುವಾಗಿದ್ದೀರೆಂದು ವಿಷಯ ತಿಳಿಸಿಬರುತ್ತೇನೆ'' ...ು ಸಿದ್ದಚಾರಿ ಭಗವತಿಕೆರೆಗೆ ಹೋದ.

...ಗೋಲಿಬಾರ್‌ನಲ್ಲಿ ಮೂರು ಜನ ಸತ್ತಿದ್ದರೂ ...ಲೀಸರ ದೌರ್ಜನ್ಯ ಅಲ್ಲಿಗೆ ನಿಲ್ಲಲಿಲ್ಲ. ಆ ದಿನ ...ಲೀಸರು ಮತ್ತೆ ನಾಗಸಮುದ್ರ, ಸನ್ಯಾಸಿಕೋಡುಮಗ್ಗೆ ...ತರ ಗ್ರಾಮಗಳಿಗೆ ರಾತ್ರೋರಾತ್ರಿ ನುಗ್ಗಿ ಮನೆಗಳಲ್ಲಿ ...ಗಿದ್ದವರನ್ನ ಬಲವಂತವಾಗಿ ಹಿಂಸೆ ಮಾಡಿ ಬಂಧಿಸಿ ...ಲೀಸ್ ಸ್ಟೇಷನ್‌ಗೆ ಕರೆದೊಯ್ದರು. ಜನರಲ್ಲಿ ...ವಾಗಿ ಭಯ, ಆತಂಕ ಶುರುವಾಯಿತು. ಪೊಲೀಸರು ...ನ್ನ ಬಿಡಲ್ಲ ಅನ್ನೋ ಭಯದಿಂದ ಗಂಡಸರೆಲ್ಲ ಆ ...ಯೇ ಊರುಬಿಟ್ಟು ನೆಂಟರ ಮನೆ, ಅವರಿವರ ...ಸೇರಿಕೊಂಡರು. ನನ್ನನ್ನು ಬಂಧಿಸಲು ಪೊಲೀಸರು ...ಕಾದಿದ್ದರಾದರೂ ನಾನು ಅವರ ಕೈಗೆ ಸಿಕ್ಕಿರಲಿಲ್ಲ. ...ತಿಕೆರೆಯಲ್ಲಿದ್ದರೆ ನನ್ನನ್ನು ಬಂಧಿಸುವ ಎಲ್ಲ ಸಾಧ್ಯತೆ ...ದ್ದರಿಂದ ನಾನು ಅಲ್ಲಿಗೆ ಹೋಗದೆ ಸಿದ್ದಚಾರಿಯ ...ತೆಯೇ ಅವನ ಮನೆಯಲ್ಲಿ ಉಳಿದುಕೊಂಡಿದ್ದೆ.

...ಡಾಳಿ ಲಕ್ಷ್ಮಿಬಾಯಿ ಎನ್ನುವ ಹೆಂಗಸು ನಮ್ಮ ...ಯು ಗದ್ದೆ ಕೆಲಸಕ್ಕೆ ಬರುತಿದ್ದಳು. ಒಮ್ಮೆ ಅವಳ ...ಗೆ ಬೆಂಕಿ ಬಿದ್ದು ಅವಳ ನಾಲ್ಕೈದು ಎಮ್ಮೆಗಳು ...ಗೆ ಸಿಕ್ಕಿ ಸುಟ್ಟು ಗಾಯಗೊಂಡಿದ್ದವು. ಅವುಗಳ ...ಕೆಗೆ ಮೀನೆಣ್ಣೆ ಬೇಕಾಗಿತ್ತು, ಆದರೆ ಅಷ್ಟು ಮೀನೆಣ್ಣೆ ...ರೀದಿಸುವ ಶಕ್ತಿ ಆಕೆಗಿರಲಿಲ್ಲ. ನಾನೆ ದುಡ್ಡು ಕೊಟ್ಟು ...ವಸಿದಷ್ಟು ಮೀನೆಣ್ಣೆಯನ್ನು ತರಿಸಿಕೊಟ್ಟಿದ್ದೆ. ಇದರಿಂದ ...ು ಎಮ್ಮೆಗಳು ಬದುಕಿಕೊಂಡವು. ಆ ಉಪಕಾರವನ್ನು ...ವಾಗಲೂ ಲಕ್ಷ್ಮಿಬಾಯಿ ನೆನೆಯುತ್ತಿದ್ದಳು. ನಾಗ...ದ್ರ ಘಟನೆ ನಡೆದ ದಿನ "ಪೊಲೀಸರು ಗುಂಡು ...ಡು ಅಯ್ಯನೋರನ್ನ (ನನ್ನನ್ನು) ಸಾಯಿಸಿಬಿಟ್ರಂತೆ'' ಎಂದು ಯಾರೋ ಲಕ್ಷ್ಮಿಬಾಯಿಗೆ ಸುಳ್ಳು ಸುದ್ದಿ ಹೇಳಿದ್ದು, ಇದನ್ನು ಕೇಳಿದ ಲಕ್ಷ್ಮಿಬಾಯಿ ಅಳುತ್ತಾ ಊಟ ತಿಂಡಿ ಎಲ್ಲ ಬಿಟ್ಟು ಕೂತಿದ್ದಾಳೆ. ಇದರಿಂದ ಅವಳ ಮನೆಯವರಿಗೆ ಆತಂಕವಾಗಿ ಅವರು ಶ್ರೀದೇವಿಗೆ ಈ ವಿಷಯ ತಿಳಿಸಿದ್ದಾರೆ. ಶ್ರೀದೇವಿ ಹೋಗಿ "ಅಯ್ಯನೋರಿಗೆ ಏನೂ ಆಗಿಲ್ಲ, ಪೊಲೀಸರು ಅರೆಸ್ಟ್ ಮಾಡಬಹುದು ಅಂತ ಮನೆಗೆ ಬಂದಿಲ್ಲ'' ಎಂದು ಪರಿಪರಿಯಾಗಿ ಹೇಳಿದರೂ "ಇಲ್ಲ ನಾನು ಅಯ್ಯನೋರ ಮುಖ ನೋಡೋತನಕವೂ ಒಂದು ತೊಟ್ಟು ನೀರು ಬಾಯಿಗೆ ಹಾಕಲ್ಲ'' ಎಂದು ಲಕ್ಷ್ಮಿಬಾಯಿ ಹಠ ಹಿಡಿದಳಂತೆ. ಅವಳ ಸ್ಥಿತಿ ನೋಡಲಾರದೆ ಶ್ರೀ ಹೇಗಾದರೂ ಮಾಡಿ ಒಂದುಕ್ಷಣ ಬಂದು ಹೋಗಿ ಎಂದು ನಂಗೆ ಕರೆ ಕಳಿಸಿದಳು. ನಾನು ಯಾವುದ್ಯಾವುದೋ ದಾರಿಯಲ್ಲಿ ಸುತ್ತಿ ಬಳಸಿ ಊರಿಗೆ ಬಂದು ಅರೆಕ್ಷಣ ಲಕ್ಷ್ಮಿಬಾಯಿಗೆ ಮುಖ ತೋರಿಸಿ ಮತ್ತೆ ಹಾಲಪ್ಪಣ್ಣನ ತೋಟದ ಮನೆಗೆ ಹೋದೆ. ಒಂದೆರಡು ದಿನ ಹೀಗೆ ಮುಖ ಮರೆಸಿಕೊಂಡೆ ಓಡಾಡಿದೆ. ಅಷ್ಟೊತ್ತಿಗೆ ಎಂ.ಡಿ. ನಂಜುಂಡಸ್ವಾಮಿ, ಸುಂದರೇಶ್, ರುದ್ರಪ್ಪನೋರು ಜೈಲಿಗೆ ಹೋಗಿ ಬಂಧಿತ ರೈತರಿಗೆ ಧೈರ್ಯ ಹೇಳಿ ಬಂದಿದ್ದರು. ನಾಗಸಮುದ್ರಕ್ಕೂ ಬಂದು ಗ್ರಾಮಸ್ಥರಿಗೆ ಧೈರ್ಯದ ಮಾತು ಹೇಳಿದರು. ಈ ಸಂದರ್ಭದಲ್ಲಿ ನನ್ನನ್ನು ಕಂಡಕೂಡಲೇ ರುದ್ರಪ್ಪನವರು "ಏನು ಶಾಮಣ್ಣ ಗೋಲಿಬಾರ್ ನಡೆದ ದಿನ ನೀನಿರಲಿಲ್ಲವಾ?'' ಎಂದು ಕೇಳಿದಾಗ ನನಗೆ ದುಃಖ ತಡೆದುಕೊಳ್ಳಲಾಗದೆ ಅವರ ಎರಡೂ ಕೈಗಳನ್ನು ಒತ್ತಿ ಹಿಡಿದು ಜೋರಾಗಿ ಅಳಲಿಕ್ಕೆ ಹತ್ತಿದೆ. ನಾಗಸಮುದ್ರದ ರೈತ ಸಂಘದ ಅಧ್ಯಕ್ಷರಾಗಿದ್ದ ಮಲ್ಲಪ್ಪಗೌಡ್ರು ಬಂದು ನನಗೆ ಸಮಾಧಾನ ಹೇಳಿದರು.

ನಾಗಸಮುದ್ರದಲ್ಲಿ ಬಹುಪಾಲು ಗಂಡಸರು ಊರು ಬಿಟ್ಟಿದ್ದು, ಪೊಲೀಸರು ಊರೊಳಗೆ ಯಾವ ಹೊತ್ತಿಗಾದರೂ ದಾಳಿ ಮಾಡಿ ಯಾರನ್ನಾದರೂ ಬಂಧಿಸಬಹುದು ಎಂದೆಲ್ಲ ಗಾಳಿ ಸುದ್ದಿ ಹಬ್ಬಿದ್ದರಿಂದ ಅವರು ಮತ್ತೆ ಊರಿಗೆ ವಾಪಸು ಬರಲು ಹೆದರುತ್ತಿದ್ದರು. ಊರಿನಲ್ಲಿ ಹೆಂಗಸರು, ವಯಸ್ಸಾದವರು ಭಯದಿಂದ ದಿನ ಕಳೆಯುತಿದ್ದರು. ಇದನ್ನೆಲ್ಲ ನೋಡಿಕೊಂಡು ಹೆದರಿಕೊಂಡು ಸುಮ್ಮನಿರಲು ಸಾಧ್ಯವಿರಲಿಲ್ಲ. ನಾಗಸಮುದ್ರ ಮತ್ತು ಕೋಡುಮಗ್ಗೆಯ ಮನೆಮನೆಗೂ ಹೋಗಿ ನೊಂದವರಿಗೆ ಸಮಾಧಾನ ಹೇಳಲು ಪ್ರಾರಂಭಿಸಿದೆ. ಊರೊಳಗೆ ಎತ್ತಿನ ಗಾಡಿಯ ಮೆರವಣಿಗೆ ನಡೆಸಿದೆವು. ಅಕ್ಕ ಪಕ್ಕದ ಊರಿನವರನ್ನೆಲ್ಲ ನಾಗಸಮುದ್ರ ಮತ್ತು ಕೋಡುಮಗ್ಗೆಯಲ್ಲಿ ಸೇರಿಸಿ ಗೋಲಿಬಾರ್‌ನಲ್ಲಿ ಮಡಿದ ಹುತಾತ್ಮರಿಗೆ ಮತ್ತು ರೈತಸಂಘಕ್ಕೆ ಜಯಕಾರ ಹಾಕುತ್ತಾ ರಾತ್ರಿಯಿಡೀ ಗಸ್ತು ತಿರುಗಲಾರಂಭಿಸಿದೆವು. ಇದರಿಂದ ರಾತ್ರಿ ವೇಳೆ ಬಂದು ಅರೆಸ್ಟ್ ಮಾಡಿಕೊಂಡು ಹೋಗುವ ಸಂಚಿನಲ್ಲಿದ್ದ ಪೊಲೀಸರಿಗೆ ಭಯ ಶುರುವಾದರೆ ಊರು ಬಿಟ್ಟಿದ್ದ ಗ್ರಾಮಸ್ಥರಿಗೆ ಭಯ ತೊಲಗಿ ಅವರೆಲ್ಲ ಒಬ್ಬೊಬ್ಬರಾಗಿ ಮರಳಿ ಊರಿಗೆ ಬರತೊಡಗಿದರು. ಹಾಸನ ಜಿಲ್ಲೆಯ ರೈತ ಸಂಘದ ಅಧ್ಯಕ್ಷ ಮಂಜುನಾಥದತ್ತ ಇಲ್ಲಿಯೇ ಬೀಡುಬಿಟ್ಟು ಸಭೆ, ವಿಚಾರಗೋಷ್ಠಿ, ಮೆರವಣಿಗೆ ನಡೆಸಿ ಜನರಲ್ಲಿ ವಿಶ್ವಾಸ ತುಂಬುವಲ್ಲಿ ನಿರತರಾದರು. ಶ್ರೀದೇವಿ ಕೂಡ ಈ ಕೆಲಸದಲ್ಲಿ ಸಂಪೂರ್ಣವಾಗಿ ನನ್ನ ಜೊತೆ ನಿಂತಳು.

ಗೋಲಿಬಾರ್‌ನಲ್ಲಿ ಸತ್ತಿದ್ದ ಬಾಲಕ ನಟರಾಜ, ಬಸವನಗೌಡ, ಮಲ್ಲಪ್ಪರ ಮನೆಗೆ ಮತ್ತೆ ಮತ್ತೆ ಹೋಗಿಬಂದು ಮಾಡುತ್ತಾ ಅವರ ನೋವಿಗೆ ಕೊರಳಾದೆವು. ಒಂದು ವಾರದಲ್ಲಿ ನಾಗಸಮುದ್ರ ಮತ್ತೆ ಮೊದಲಿನ ಸ್ಥಿತಿಗೆ ಮರಳತೊಡಗಿತು.

ಪೊಲೀಸರು ರಾತ್ರೋರಾತ್ರಿ ತಮ್ಮ ಕಸ್ಟಡಿಗೆ ತೆಗೆದುಕೊಂಡಿದ್ದರಲ್ಲ ಇಪ್ಪತ್ತೊಂಬತ್ತು ಜನರನ್ನ ಅವರ ಬಗ್ಗೆ ಚಿಂತೆಯಾಗತೊಡಗಿತು. ಅವರನ್ನು ಜಾಮೀನಿನ ಮೇಲೆ ಬಿಡುಗಡೆ ಮಾಡಲು ಸಾಧ್ಯವೇ ಆಗದಂತೆ ಪೊಲೀಸರು ಅವರುಗಳ ಮೇಲೆ ಬಲವಾದ ಎಫ್‌ಐಆರ್ ಲಾಡ್ಜ್ ಮಾಡಿದ್ದರು. ಈ ಸಂದರ್ಭದಲ್ಲಿ ವಕೀಲರಾದ ರವಿವರ್ಮ ಕುಮಾರ್ ಬಂಧಿತ ರೈತರ ಪರವಾಗಿ ಬಲವಾದ ವಾದ ಮಂಡಿಸಿ ರೈತರ ಬಿಡುಗಡೆಗೆ ಕಾರಣರಾದರು.

ನಾಗಸಮುದ್ರದಲ್ಲಿ ಗೋಲಿಬಾರ್‌ಗೆ ಬಲಿಯಾದ ಮೂವರು ರೈತರ ಸ್ಮರಣಾರ್ಥ ರೈತಹುತಾತ್ಮ ದಿನಾಚರಣೆಯನ್ನು ಹಮ್ಮಿಕೊಂಡೆವು. ಹುತಾತ್ಮ ರೈತರಾದ ವೃದ್ಧ ಮಲ್ಲಪ್ಪ ಯುವಕ ಬಸವನಗೌಡ, ಬಾಲಕ ನಟರಾಜರ ನೆನಪಿಗಾಗಿ ಮೂರು ವೀರಗಲ್ಲುಗಳನ್ನು ಅವರ ಸಮಾಧಿ ಸ್ಥಳದಲ್ಲಿ ನೆಡಲಾಯಿತು. ಅಂದು ಮುಖ್ಯ ಅತಿಥಿಯಾಗಿ ತಮಿಳುನಾಡಿನ ರೈತ ಮುಖಂಡರಾದ ನಾರಾಯಣಸ್ವಾಮಿ ನಾಯ್ಡು ಆಗಮಿಸಿದ್ದರು. ಈ ಸಮಾರಂಭಕ್ಕೆ ಒಂದು ಲಕ್ಷಕ್ಕಿಂತ ಹೆಚ್ಚು ಜನ ಆಗಮಿಸಿ ಹುತಾತ್ಮ ರೈತರಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ರೈತರ ಒಗ್ಗಟ್ಟನ್ನು ನೋಡಿ ಸರ್ಕಾರವೇ ಹೆದರುವಂತಾಯ್ತು.

ಈ ಸಂದರ್ಭದಲ್ಲೆ ರೈತ ಸಂಘದಿಂದ ಎರಡು ನಿರ್ಧಾರವನ್ನು ಕೈಗೊಂಡೆವು. ಒಂದು: ಅಧಿಕಾರಿಗಳೇ ರೈತರ ಪ್ರಾಣಕ್ಕೆ ಎರವಾದ ಮೇಲೆ ಊರೊಳಗೆ ರೈತರ ಒಪ್ಪಿಗೆ ಇಲ್ಲದೆ ಅಧಿಕಾರಿಗಳನ್ನು ಬಿಟ್ಟುಕೊಳ್ಳಬಾರದು ಎಂದು ನಿರ್ಧರಿಸಿದೆವು. ರೈತರ ಒಪ್ಪಿಗೆ ಇಲ್ಲದೆ ಗ್ರಾಮದಲ್ಲಿ ಅಧಿಕಾರಿಗಳಿಗೆ ಪ್ರವೇಶ ಇಲ್ಲ ಎಂದು ಬೋರ್ಡ್ ಬರೆಸಿ ಹಾಕಿದೆವು. ಈ ನಿಯಮವನ್ನು ಹಲವಾರು ವರ್ಷ ರೈತರು ಪಾಲಿಸಿದರು. ಎರಡು: ನಾಗಸಮುದ್ರ ಗೋಲಿಬಾರ್ ಘಟನೆಯನ್ನು ನ್ಯಾಯಾಂಗ ತನಿಖೆಗೆ ಒಪ್ಪಿಸುವಂತೆ ಮಾಡುವುದು. ಮೊದಲಿಗೆ ಮೀನಾಮೇಷ ಎಣಿಸಿದ ಸರ್ಕಾರ ರೈತರ ಒತ್ತಾಯಕ್ಕೆ ಮಣಿದು ನ್ಯಾಯಾಂಗ ತನಿಖೆಗೆ ಒಪ್ಪಿ ನ್ಯಾಯಮೂರ್ತಿ ಆಸಿಫ್ ಅವರನ್ನು ನ್ಯಾಯಾಂಗ ತನಿಖಾ ಸಮಿತಿಯ ಅಧ್ಯಕ್ಷರನ್ನಾಗಿ ನೇಮಿಸಿತು.

ತನಿಖೆಯ ಸಂದರ್ಭದಲ್ಲಿ ನಮ್ಮನ್ನೆಲ್ಲ ವಿಟ್‌ನೆಸ್ ಬಾಕ್ಸ್‌ಗೆ ಕರೆಸಿ ಹೇಳಿಕೆ ಪಡೆದರು. ಬಹಳಷ್ಟು ರೈತರು ಪೊಲೀಸ್ ಸ್ಟೇಷನ್, ಕೋರ್ಟು ಎಂದು ಕೇಳಿದರೆ ಹೆದರುತ್ತಿದ್ದು ಅವರನ್ನೆಲ್ಲ ಸಾಕ್ಷಿಗೆ ಕರೆದರೆ ವಿಟ್‌ನೆಸ್ ಬಾಕ್ಸ್ ಮುಂದೆ ಭಯದಿಂದ ತತ್ತರಿಸುತ್ತಾ ನಿಲ್ಲುತ್ತಿದ್ದರು. ನಟರಾಜನ ಅಪ್ಪ ತಿಮ್ಮಣ್ಣ ಅವರಿಗಂತೂ ಸಾಕ್ಷಿಗೆ ಹೋಗೋಕೆ ಒಂದು ವಾರ ಹಿಂದೇನೆ ಜ್ವರ ಬಂದು ಬಿಡೋದು. ಕೋರ್ಟಿಗೆ ಹೋಗೋಕೆ ಎರಡು ದಿನ ಮುಂಚೇನೆ ಅವರ ಮನೆಗಳಿಗೆ ಹೋಗಿ ಧೈರ್ಯ ತುಂಬ್ತಿದ್ವಿ. ನಾವೇನು ಸುಳ್ಳು ಹೇಳ್ತಿಲ್ಲ, ಸತ್ಯ ಹೇಳ್ತಿದೀವಿ. ನಮಗೆ ಅನ್ಯಾಯ ಮಾಡಿದವರಿಗೆ ಶಿಕ್ಷೆ ಕೊಡಿ ಅಂತ ಕೇಳ್ತಿದೀವಿ, ನಾವು ನ್ಯಾಯವಾಗಿದೀವಿ ಅಂತೆಲ್ಲ ಹೇಳುತ್ತಿದ್ದೆವು. ಮನೆಯ ಹೆಣ್ಣುಮಕ್ಕಳು ರೈತ ಸಂಘದವರ ಪರ ಗಟ್ಟಿಯಾಗಿ ನಿಂತು ಅವರ ಗಂಡ, ಮಕ್ಕಳಲ್ಲಿ ಹುಮ್ಮಸ್ಸು ತುಂಬಿ ಕಳುಹಿಸುತ್ತಿದ್ದರು. ತನಿಖೆ ವರ್ಷಾನುಗಟ್ಟಲೆ ನಡೆದು ಕೊನೆಗೆ ನ್ಯಾಯಮೂರ್ತಿಗಳು **`It is purely police atrocity'** ಎಂದು ತೀರ್ಪು ಬರೆದರು.

ಘಟನೆಯಲ್ಲಿ ಒಬ್ಬ ಪೊಲೀಸ್ ಅಧಿಕಾರಿಯ ಕೂದಲೂ ಕೊಂಕಿರಲಿಲ್ಲ. ಮೂವರು ರೈತರು ಸತ್ತಿದ್ದರು. ಹಲವಾರು ರೈತರು ಗುಂಡೇಟು ತಿಂದಿದ್ದರು. ಇವತ್ತಿಗೂ ಅವತ್ತು ಗುಂಡೇಟು ತಿಂದವರು ಅಂಗವಿಕಲರಾಗೇ ಇದ್ದಾರೆ. ಆದರೆ ಈ ದುರ್ಘಟನೆಗೆ ಕಾರಣರಾದ ಯಾವ ಪೊಲೀಸ್ ಅಧಿಕಾರಿಗೂ ಶಿಕ್ಷೆ ಆಗಲಿಲ್ಲ. ಬದಲಿಗೆ ಅವರಿಗೆ ಪ್ರಮೋಷನ್, ಪದಕ ಮತ್ತೇನೇನೋ ದೊರಕಿತು. ನಾಗಸಮುದ್ರ ಗೋಲಿಬಾರ್ ಘಟನೆ ಎಷ್ಟು ಪೂರ್ವನಿಯೋಜಿತವಾದದ್ದು ಎಂಬುದಕ್ಕೆ ಅಂದು ಬೆಳಿಗ್ಗೆಯೇ ಸಚಿವ ಕಾಗೋಡು ತಿಮ್ಮಪ್ಪನವರು ತಮ್ಮ ಮಂಗೋಟೆ ಕಾರ್ಯಕ್ರಮವನ್ನು ರದ್ದು ಮಾಡಿ ತುರ್ತು ಕರೆ ಬಂದಿದ್ದರಿಂದ ಬೆಂಗಳೂರಿಗೆ ತೆರಳಿದ್ದರು. ಇದು ಪೊಲೀಸರಿಗೆ ಬೆಳಿಗ್ಗೆಯೇ ತಿಳಿದಿದ್ದರೂ ಪ್ರತಿಭಟನಾ ನಿರತ ರೈತರಿಗೆ ವಿಷಯದ ಸತ್ಯಾಸತ್ಯತೆ ತಿಳಿಸದೆ ಹಗಲಿಡಿ ಕಾಯಿಸಿ ಸಂಜೆ ಹೊತ್ತಿಗೆ ರೈತರ ಮೇಲೆ ಗುಂಡಿನ ದಾಳಿ ನಡೆಸಿದ್ದರು.

ನಾಗಸಮುದ್ರದಲ್ಲಿ ಆ ಹುಡುಗ ನಟರಾಜ ಕಣ್ಣೆದುರೆ ಪ್ರಾಣ ಬಿಟ್ಟಿದ್ದನ್ನು ನೋಡಿದ ನನ್ನ ಕಣ್ಣುಗಳು ಅವತ್ತಿನಿಂದ ನೆಮ್ಮದಿಯ ನಿದ್ದೆಯನ್ನೆ ಕಳೆದುಕೊಂಡಿವೆ. ಯಾವ್ಯಾವ ಡಾಕ್ಟರ್‌ಗಳನ್ನು ಕಂಡಾಯಿತು ಏನೂ ಪ್ರಯೋಜನ ಆಗಲಿಲ್ಲ, ಅವತ್ತು ಹೋದ ನಿದ್ದೆ ಇವತ್ತಿಗೂ ಬಂದಿಲ್ಲ, ಇನ್ನು ಮುಂದೆಯೂ ಬರಲಾರದು.

(ಮುಂದುವರೆಯುವುದು)




ನಾಗಸಮುದ್ರದಲ್ಲಿ ಗೋಲಿಬಾರ್‌ಗೆ ಬಲಿಯಾದ ಮೂವರು ರೈತರ ಸ್ಮರಣಾರ್ಥ ರೈತಹುತಾತ್ಮ ದಿನಾಚರಣೆಯನ್ನು ಹಮ್ಮಿಕೊಂಡೆವು. ಹುತಾತ್ಮ ರೈತರಾದ ವೃದ್ಧ ಮಲ್ಲಪ್ಪ, ಯುವಕ ಬಸವನಗೌಡ, ಬಾಲಕ ನಟರಾಜರ ನೆನಪಿಗಾಗಿ ಮೂರು ವೀರಗಲ್ಲುಗಳನ್ನು ಅವರ ಸಮಾಧಿ ಸ್ಥಳದಲ್ಲಿ ನೆಡಲಾಯಿತು. ಅಂದು ಮುಖ್ಯ ಅತಿಥಿಯಾಗಿ ತಮಿಳುನಾಡಿನ ರೈತ ಮುಖಂಡರಾದ ನಾರಾಯಣಸ್ವಾಮಿ ನಾಯ್ಡು ಆಗಮಿಸಿದ್ದರು. ಈ ಸಮಾರಂಭಕ್ಕೆ ಒಂದು ಲಕ್ಷಕ್ಕಿಂತ ಹೆಚ್ಚು ಜನ ಆಗಮಿಸಿ ಹುತಾತ್ಮ ರೈತರಿಗೆ ಶ್ರದ್ಧಾಂಜಲಿ ಸಲ್ಲಿಸಿದರು. ರೈತರ ಒಗ್ಗಟ್ಟನ್ನು ನೋಡಿ ಸರ್ಕಾರವೇ ಹೆದರುವಂತಾಯ್ತು.



R B P LANKESH, Kannada Weekly Price Rs. 12/- 29-04-2009 RNI No. KARKAN2005/14648 Regd.No.KA/…





ಕೃಶಕಾಯದ, ಟಿಬಿ ಪೇಷಂಟ್ ತರಹ ಕಾಣಿಸುವ ಪೋಷಕ ನಟ ಬರಾದಾರ ಈಗ ನಾಯಕ ನಟ! ಅದೂ ಗಿರೀಶ್ ಕಾಸರವಳ್ಳಿಯವರ ಹೊಸ ಚಿತ್ರದಲ್ಲಿ!!

ಬರಾದಾರ ಯಾವಾಗಲೂ ಕುಡುಕ ಅಥವಾ ಭಿಕ್ಷುಕನ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಾರೆ. ಹಿಂದೊಮ್ಮೆ ಹೊಟ್ಟೆಪಾಡಿಗಾಗಿ ಈತ ಸೆಕ್ಸ್ ಚಿತ್ರದಲ್ಲೂ ನಟಿಸಿದ್ದುಂಟು. ಆದರೆ ಈತ ಪ್ರತಿಭಾವಂತ, ಈತನಿಗೂ ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳಿದ್ದಾರೆ ಎಂಬುದೂ ಅಷ್ಟೇ ನಿಜ. ಇಂತಹ ವ್ಯಕ್ತಿ ಈಗ ಏಳು ಸ್ವರ್ಣ ಕಮಲಗಳನ್ನು ಪಡೆದಿರುವ ಗಿರೀಶ್ ಕಾಸರವಳ್ಳಿಯವರ ಚಿತ್ರಕ್ಕೆ ನಾಯಕ ನಟನಾಗಿರುವುದು ಸಂತೋಷದ ವಿಷಯ. ರಿಲಾಯನ್ಸ್ ಸಂಸ್ಥೆಗಾಗಿ ಸದ್ಯದಲ್ಲೇ ಆರಂಭಿಸಲಿರುವ ಈ ಚಿತ್ರಕ್ಕೆ ಕಾಸರವಳ್ಳಿ ಇನ್ನೂ ಹೆಸರಿಟ್ಟಿಲ್ಲ.

ಹಾಗೆ ನೋಡಿದರೆ ಗಿರೀಶ್ ಕಾಸರವಳ್ಳಿಯವರು ತಮ್ಮ ಟ್ರಾಕ್ ಬದಲಿಸಿದ್ದಾರೆ ಎಂದೆನಿಸುತ್ತದೆ. ಪೂರ್ಣಚಂದ್ರ ತೇಜಸ್ವಿಯವರ ಕಥೆಯನ್ನಾಧರಿಸಿದ 'ತಬರನ ಕಥೆ' ಚಿತ್ರದ ನಂತರ ಬಹುತೇಕ ನಾಯಕಿ ಪ್ರಧಾನ ಚಿತ್ರಗಳನ್ನೇ ಕಾಸರವಳ್ಳಿ ನಿರ್ದೇಶಿಸುತ್ತಾ ಬಂದಿದ್ದಾರೆ. ಕಳೆದೆರಡು ದಶಕಗಳಿಂದ ಮಹಿಳಾ ಪ್ರಧಾನ ಚಿತ್ರಗಳನ್ನೇ ಮಾಡಿರುವ ಕಾಸರವಳ್ಳಿ ಜಯಮಾಲಾಗಾಗಿ 'ತಾಯಿ ಸಾಹೇಬ', ಸೌಂದರ್ಯಳಿಗಾಗಿ 'ದ್ವೀಪ', ತಾರಾಗಾಗಿ 'ಹಸೀನಾ', ಉಮಾಶ್ರೀಗಾಗಿ 'ಗುಲಾಬಿ ಟಾಕೀಸ್' ಮತ್ತು ಪವಿತ್ರ ಲೋಕೇಶ್‌ಗಾಗಿ 'ನಾಯಿನೆರಳು' ಚಿತ್ರವನ್ನು ನಿರ್ದೇಶಿಸಿದ್ದರು.

ಈಗ ಬರಾದಾರನನ್ನು ನಾಯಕ ನಟನಾಗಿಸಿ ಎಲ್ಲರನ್ನು ಅಚ್ಚರಿಗೊಳಿಸಿದ್ದಾರೆ. ಈ ಚಿತ್ರದ ಇನ್ನೊಂದು ವೈಶಿಷ್ಟ್ಯವೆಂದರೆ ಸಾಧಾರಣವಾಗಿ ಕಾಸರವಳ್ಳಿ ಸಿನಿಮಾದಲ್ಲಿ ಕಲಾವಿದರು ರಿಪೀಟ್ ಆಗುವುದಿಲ್ಲ. ಆದರೆ ಕಾಸರವಳ್ಳಿ ನಿರ್ದೇಶನದ 'ಗುಲಾಬಿ ಟಾಕೀಸ್'ನಲ್ಲಿ ಮಿಂಚಿದ ಉಮಾಶ್ರೀ ಮತ್ತು 'ನಾಯಿನೆರಳು' ಚಿತ್ರದಲ್ಲಿ ಮೆರೆದ ಪವಿತ್ರ ಲೋಕೇಶ್ ಇವರಿಬ್ಬರೂ ಈ ಹೊಸ ಚಿತ್ರದಲ್ಲಿ ಪ್ರಮುಖ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ. ಹೆಚ್ಚೆಂದರೆ ಸಿನಿಮಾದ ಒಂದೆರಡು ದೃಶ್ಯಗಳಲ್ಲಿ ಕಾಣಿಸಿಕೊಳ್ಳುತ್ತಿದ್ದ ಪೋಷಕ ನಟ ಬರಾದಾರನನ್ನು ಪೂರ್ಣ ಪ್ರಮಾಣದ ನಾಯಕನನ್ನಾಗಿ ಮಾಡುವ ಮುಖಾಂತರ ಗಿರೀಶ್ ಕಾಸರವಳ್ಳಿ ಹೊಸದನ್ನು ಮಾಡಲು ಹೊರಟಿದ್ದಾರೆ.

ಹತ್ತಿಪ್ಪತ್ತು ವರ್ಷಗಳ ಕಾಲ ಕಮರ್ಷಿಯಲ್ ಚಿತ್ರಗಳಲ್ಲಿ ನಟಿಸಿ ಹಣ ಮಾಡಿದ ನಂತರ ಪ್ರಶಸ್ತಿಗಾಗಿ ಹಂಬಲಿಸುವ ನಾಯಕಿಯರಿಗಾಗಿ ಕಾಸರವಳ್ಳಿಯಂತಹ ಪ್ರತಿಭಾವಂತ ಚಿತ್ರ ನಿರ್ದೇಶಿಸುವುದನ್ನು ಬಿಟ್ಟು ಹೊಸ ಪ್ರಯೋಗಗಳಿಗೆ ಹೆಚ್ಚೆಚ್ಚು ಒತ್ತು ಕೊಡುವಂತಾಗಲಿ.

■ ಶೆಣೈ

ಸುತ್ತಿಟ್ಟ ಸಂಪಿಗೆ....



ಮೊನ್ನೆ ಮೊನ್ನೆ ನಾಯಕ ನಟ ಪ್ರಶಾಂತ್ ನಟಿಸಿದ 'ಹೃದಯಗಳ ವಿಷಯ' ಚಿತ್ರ ಎರಡೇ ದಿನಕ್ಕೆ ಥಿಯೇಟರ್‌ನಿಂದ ಎತ್ತಂಗಡಿಯಾಗಿತ್ತು. ಅದಕ್ಕಿಂತ ಮೊದಲು ಆತ ನಟಿಸಿದ್ದ 'ಅಂಜದಿರು' ಎಂಬ ಚಿತ್ರದ ಗತಿಯೂ ಇದಕ್ಕಿಂತ ವಿಭಿನ್ನವಾಗೇನೂ ಇರಲಿಲ್ಲ. ಹೀಗೆ ಎರಡು ವಾರದ ಎರಡೇ ದಿನಗಳಿಗೆ ಪ್ರಶಾಂತ ನಟಿಸಿದ ಎರಡೂ ಚಿತ್ರಗಳನ್ನು ಪ್ರೇಕ್ಷಕ ತಿರಸ್ಕರಿಸಿದ್ದ. ಇಂತಹ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಇದೀಗ ಪ್ರಶಾಂತ್ ನಟಿಸಿದ ಮತ್ತೊಂದು ಚಿತ್ರ ಮುಂದಿನವಾರ ಬಿಡುಗಡೆಯಾಗಲಿದೆ.

ಈ ಚಿತ್ರದ ಹೆಸರು 'ಚೆಲ್ಲಿದರು ಸಂಪಿಗೆಯಾ'. ಇದನ್ನು ಅತ್ಯಂತ ನಿಗೂಢವಾಗಿ ಮತ್ತು ವೇಗವಾಗಿ ನಿರ್ಮಿಸಿ-ನಿರ್ದೇಶಿಸಿದವರು ಮತ್ತು ಅದನ್ನು ಅಷ್ಟೇ ರಹಸ್ಯವಾಗಿ ಯಾವುದೇ ಪ್ರಚಾರ ನೀಡದೆ ಬಿಡುಗಡೆ ಮಾಡಲು ಹೊರಟಿರುವವರು ಎಸ್.ನಾರಾಯಣ್! 'ಒರಟ ಐ ಲವ್ ಯೂ' ಚಿತ್ರದ ಮುಖಾಂತರ ಬೆಳಕಿಗೆ ಬಂದ ನಟ ಪ್ರಶಾಂತ್ ಇತ್ತೀಚಿನ ಸೋಲುಗಳ ಸರಪಳಿಯಿಂದ ಈ ಚಿತ್ರವಾದರೂ ತನಗೆ ಬಿಡುಗಡೆ ನೀಡುತ್ತದೆ ಎಂದು ಆಶಿಸಿದ್ದ. ಆದರೆ ನಾರಾಯಣನ ಮರ್ಮ ಬಲ್ಲ ಗಾಂಧಿನಗರಿಗಳು ಈ ಚಿತ್ರವೂ ಒಂದೆರಡು ದಿನಗಳಲ್ಲಿ ಎತ್ತಂಗಡಿಯಾಗುತ್ತದೆ ಎಂದು ಭವಿಷ್ಯ ನುಡಿಯುತ್ತಿದ್ದಾರೆ.

ಇದಕ್ಕೆ ಕಾರಣವೂ ಇದೆ. ಈ ಹಿಂದೆ ನಾರಾಯಣ್ ದೊಡ್ಡದೊಡ್ಡ ನಾಯಕ ನಟರ ಚಿತ್ರಗಳನ್ನು ನಿರ್ದೇಶಿಸಿದ್ದರು ಎಂಬ ಗೌರವದಿಂದ ಪ್ರಶಾಂತ್ ಆತನಿಗೆ ಕಾಲ್‌ಶೀಟ್ ನೀಡಿದ್ದ. ಆದರೆ ಈ ಚಿತ್ರದ ಚಿತ್ರೀಕರಣ ಸಂದರ್ಭದಲ್ಲೇ ನಾರಾಯಣ್ ಮತ್ತು ಪ್ರಶಾಂತ್ ನಡುವೆ ಸಾಕಷ್ಟು ಕಿರಿಕ್ ನಡೆದಿತ್ತು. ಇದರಿಂದ ಬೇಸತ್ತ ನಾರಾಯಣ್ ಚಿತ್ರವನ್ನು ಬೇಗ ಬೇಗ ಸುತ್ತಿ ಈಗ ಪ್ರಚಾರವನ್ನೂ ಮಾಡದೇ ಚಿತ್ರಮಂದಿರಕ್ಕೆ ಬಿಸಾಡುತ್ತಿದ್ದಾರೆ.



ಇದನ್ನು ಕಂಡು ಪ್ರಶಾಂತ್ ಈಗ ತಲೆಮೇಲೆ ಕೈಹೊತ್ತುಕೊಂಡು ಕುಳಿತಿದ್ದಾನೆ.

ದೊಡ್ಡ ಸಾಧಕನ ಸಿಂಪಲ್ ಬದುಕು

ಆ ಮನುಷ್ಯನನ್ನು ನೋಡಿದ ಯಾರಿಗೇ ಆದರೂ ಆತ ಸದ್ಯ ಭಾರತದಲ್ಲಿ ಅಪಾರ ಬೇಡಿಕೆಯಲ್ಲಿರುವ ದೊಡ್ಡ ನಿರ್ದೇಶಕ ಎಂಬ ಸಣ್ಣ ಸುಳಿವೂ ಸಿಗುವಂತಿರಲಿಲ್ಲ. ಸುಮಾರು 35-60 ವರ್ಷ ವಯಸ್ಸಿನ ಆತನದ್ದು ಸವಕಲು ದೇಹ, ಕುಬ್ಜ ಆಕಾರ. ಅತಿ ಸಾಧಾರಣ ಬಟ್ಟೆ ತೊಟ್ಟಿದ್ದ. ಸಂಖ್ಯೆಗಳನ್ನು ತೋರುವ ಎಲೆಕ್ಟ್ರಾನಿಕ್ ವಾಚನ್ನು ಸಣ್ಣಮಕ್ಕಳು ಕೈಗೆ ಕಟ್ಟಿಕೊಂಡು ಸಂಭ್ರಮಿಸುತ್ತಾರಲ್ಲ, ಅಂತಹ ಸುಮಾರು ನೂರಿನ್ನೂರು ರೂಪಾಯಿ ಬೆಲೆಬಾಳುವ ಕೈಗಡಿಯಾರವನ್ನು ಕಟ್ಟಿದ್ದ. ತಾನೊಬ್ಬ ಖ್ಯಾತ ನಿರ್ದೇಶಕ ಎಂದು ತೋರುವ ಯಾವ ಹಮ್ಮು-ಬಿಮ್ಮು ಇಲ್ಲದ ಹಾವಭಾವ.

ಇಷ್ಟೊಂದು ಸಿಂಪಲ್ ಆಗಿದ್ದ ಬೇರಾರೂ ಅಲ್ಲ: 'ದೀನ', 'ರಮಣ', 'ಸ್ಟಾಲಿನ್' ಮತ್ತು 'ಗಜನಿ' ತರಹದ ಹಿಟ್ ಚಿತ್ರಗಳನ್ನು ನಿರ್ದೇಶಿಸಿರುವ ಮುರುಗಾದಾಸ್! ಮೊನ್ನೆ ಚೈತನ್ಯ ನಿರ್ದೇಶನದ 'ಸೂರ್ಯಕಾಂತಿ' ಚಿತ್ರದ ಮುಹೂರ್ತಕ್ಕೆ ಮುರುಗದಾಸ್ ಬಂದಿದ್ದಾಗ ಅವರನ್ನು ಮೊದಲಿಗೆ ಯಾರೆಂದರೆ ಯಾರೂ ಗುರುತು ಹಿಡಿಯಲಿಲ್ಲ. ಐವತ್ತು ದಿನಗಳ ಆವರೇಜ್ ಸಿನಿಮಾ ಕೊಟ್ಟ ಕನ್ನಡದ ಕೆಲ ನಿರ್ದೇಶಕರೂ ತಾವು ಯಾವ ಹಾಲಿವುಡ್ ನಿರ್ದೇಶಕರಿಗೂ ಕಮ್ಮಿ ಇಲ್ಲ ಎಂಬಂತೆ ಪೋಸು ಕೊಡುವಾಗ, ಇವರ ಸರಳತನವನ್ನು ನೋಡಿ ಪತ್ರಕರ್ತರು ಅಚ್ಚರಿಗೊಂಡರು.


ಮುರುಗದಾಸ್ ಅವರ ಸರಳತನಕ್ಕೆ ಅವರು ಬದುಕಿನಲ್ಲಿ ಕಂಡ ಕಡು ಬಡತನವೇ ಕಾರಣ ಎಂದರೆ ಅಚ್ಚರಿಯಾಗುತ್ತದೆ. ಒಂದು ಕಾಲದಲ್ಲಿ ಅವರು ಬಡತನದ ಬೇಗೆಯಲ್ಲಿ ಬದುಕು ಸಾಗಿಸುತ್ತಿದ್ದಾಗ ಅವರ ತಂದೆ ತೀವ್ರ ಅನಾರೋಗ್ಯದಿಂದ ನರಳಿ ಸರ್ಕಾರಿ ಆಸ್ಪತ್ರೆಯಲ್ಲೇ ಜೀವಬಿಟ್ಟರಂತೆ. ಸತ್ತ ತಂದೆಯ ಡೆತ್ ಸರ್ಟಿಫಿಕೇಟ್ ನೀಡಲೂ ಅಲ್ಲಿನ ಅಧಿಕಾರಿಗಳು ಮುರುಗದಾಸ್‌ರಿಂದ ಲಂಚ ಕೇಳಿದ್ದರಂತೆ. ಬೇರೆ ಯಾರಾದರೂ ಆಗಿದ್ದರೆ ಎಲ್ಲಿಂದಲಾದರೂ ಸಾಲ-ಸೋಲ ಮಾಡಿಯಾದರೂ ಹಣ ಹೊಂಚಿಕೊಂಡು ಅಧಿಕಾರಿಯ ಕೈಗೆ ಅದನ್ನು ತುರುಕಿ ಮರಣಪತ್ರವನ್ನು ಪಡೆಯುತ್ತಿದ್ದರು. ಆದರೆ ಮುರುಗದಾಸ್ ಮಾತ್ರ ತಂದೆ ಸತ್ತು ಒಂದೂವರೆ ತಿಂಗಳು ಕಳೆದರೂ ಲಂಚ ಕೊಡಬಾರದು ಎಂಬ ಕಾರಣಕ್ಕೆ ತಂದೆಯ ಡೆತ್ ಸರ್ಟಿಫಿಕೇಟ್ ಪಡೆದಿರಲಿಲ್ಲವಂತೆ. ಈತನ ಮೊಂಡು ಹಠವನ್ನು ಕಂಡ ಇವರ ಚಿಕ್ಕಪ್ಪ ಹೋಗಿ ಲಂಚ ನೀಡಿ ಆ ಸರ್ಟಿಫಿಕೇಟು ಪಡೆದಿದ್ದರಂತೆ.

ಅದಕ್ಕೇ ಇರಬಹುದು, ಇವರ ನಿರ್ದೇಶನದ ಎಲ್ಲ ಚಿತ್ರಗಳೂ ಭಾರತದಲ್ಲಿ ಬೇರೂರಿರುವ ಲಂಚಕೋರತನ ಮತ್ತು ಅದನ್ನು ಪ್ರತಿಭಟಿಸುವ ಕಥಾವಸ್ತುಗಳನ್ನೇ ಹೊಂದಿರುವುದು ವಿಶೇಷ. ಉದಾಹರಣೆಗೆ ನಮ್ಮ ಇಂಡಿಯಾದಲ್ಲಿನ ಇಂಥದ್ದೇ ಹುಳುಕುಗಳನ್ನು ಆಧಾರವಾಗಿರಿಸಿಕೊಂಡು ಮುರುಗದಾಸ್ 'ಗಜನಿ' ನಿರ್ದೇಶಿಸಿದ್ದರು.

ಅಂದಹಾಗೆ, ಈ 'ಗಜನಿ' ಚಿತ್ರದ ಒಟ್ಟಾರೆ ಬಂಡವಾಳ ಮತ್ತು ಗಳಿಕೆಯ ವಿವರವನ್ನು ಕೇಳಿದರೆ ಬೆಚ್ಚಿಬೀಳುವಂತಾಗುತ್ತದೆ! ಮೊದಲಿಗೆ ತಮಿಳಿನಲ್ಲಿ ನಿರ್ಮಾಣವಾದ ಈ ಚಿತ್ರದ ಬಜೆಟ್ ಏಳೂವರೆ ಕೋಟಿ ರೂಪಾಯಿಗಳು. ಅದರಿಂದ ಬಂದ ಗಳಿಕೆ ಬರೋಬ್ಬರಿ ಮೂವತ್ತೈದು ಕೋಟಿಗಳು. ಮೊನ್ನೆ ಅದೇ 'ಗಜನಿ' ಅಮೀರ್‌ಖಾನ್ ಅಭಿನಯದಲ್ಲಿ ಹಿಂದಿಗೆ ರಿಮೇಕ್ ಆಯಿತಲ್ಲಾ, ಅದರ ಒಟ್ಟು ಖರ್ಚು ಮೂವತ್ತೈದು ಕೋಟಿ ರೂಪಾಯಿಗಳು. ಭಾರತ ಸೇರಿದಂತೆ ಹಲವಾರು ದೇಶಗಳಲ್ಲಿ ನಿರೀಕ್ಷೆಗಿಂತ ಹೆಚ್ಚು ವ್ಯಾಪಾರವಾಗಿದ್ದರಿಂದ ಆ ಚಿತ್ರ ಪಡೆದ ಲಾಭ ಇನ್ನೂರೈವತ್ತು ಕೋಟಿಗಳಿಗಿಂತ ಹೆಚ್ಚು.

'ಗಜನಿ' ಚಿತ್ರದ ಹಿಂದಿ ಅವತರಣಿಕೆಗಾಗಿ ಮುರುಗದಾಸ್‌ಗೆ ಅದರ ನಿರ್ಮಾಪಕ ಅಲ್ಲು ಅರವಿಂದ್ ನೀಡಿದ ಆರಂಭಿಕ ಸಂಭಾವನೆ ಐದು ಕೋಟಿ ರೂಪಾಯಿಗಳು. ನಂತರ ಸಿನಿಮಾ ನೂರು ಕೋಟಿಗಳ ಲಾಭ ತಂದುಕೊಟ್ಟ ತಕ್ಷಣ ಅರವಿಂದ್ ಬಂದು ಇನ್ನೂ ಐದು ಕೋಟಿಗಳನ್ನು ಮುರುಗದಾಸ್‌ರ ಜೇಬಿಗಿಟ್ಟು ಹೋದರಂತೆ. ಕಡೆಗೆ 'ಗಜನಿ'ಯ ದಯೆಯಿಂದ ನಿರ್ಮಾಪಕನಿಗೆ ಇನ್ನೂರೈವತ್ತು ರೂಪಾಯಿಗಳ ಕಲೆಕ್ಷನ್ ಆದದ್ದೇ ತಡ ಮತ್ತೆ ಹತ್ತು ಕೋಟಿಗಳ ಸಂಭಾವನೆಯನ್ನು ಮುರುಗದಾಸ್‌ರ ಮಡಿಲಿಗೆ ತುಂಬಿದರಂತೆ.

ಹೀಗೆ ಒಂದೇ ಚಿತ್ರಕ್ಕೆ ದೊರೆತ ಇಪ್ಪತ್ತು ಕೋಟಿ ರೂಪಾಯಿಗಳ ಬೃಹತ್ ಮೊತ್ತದಿಂದ ಮುರುಗದಾಸ್ ಆಡಂಬರದ ವಿಲಾಸೀ ಜೀವನವನ್ನು ನಡೆಸಬಹುದಿತ್ತು. ಆದರೆ ತಮ್ಮ ಜೀವನಕ್ಕೆ ಬೇಕಾದಷ್ಟು ಹಣವನ್ನು ಮಾತ್ರ ಇರಿಸಿಕೊಂಡು ಮಿಕ್ಕೆಲ್ಲವನ್ನೂ ಬಡವರ, ಅನಾಥ ಮಕ್ಕಳ ಏಳ್ಗೆಗಾಗಿ ಧಾರೆಯೆರೆಯುತ್ತಿದ್ದಾರೆ ಮುರುಗದಾಸ್.



ಇಷ್ಟು ಚಿಕ್ಕ ವಯಸ್ಸಿನಲ್ಲೇ ಇಷ್ಟು ಸಾಧನೆಗೈದಿರುವ ಮುರುಗದಾಸ್ ತಮಗೆ ಚಿತ್ರ ನಿರ್ದೇಶಿಸಲಿ ಎಂದು ಬಾಲಿವುಡ್‌ನ ಬಿಗ್ ಬಿ ಅಮಿತಾಭ್ ಸೇರಿದಂತೆ ಹಲವಾರು ಜನ ಬೆನ್ನುಬಿದ್ದಿದ್ದಾರೆ. ಇಂಥ ಅವಕಾಶಗಳು ಬೇರೆ ಯಾರಿಗಾದರೂ ಸಿಕ್ಕಿದ್ದರೆ ಅವರು ಖಂಡಿತವಾಗಿಯೂ ಆತುರಕ್ಕೆ ಬಿದ್ದು 'ಸಂತೆ ಹೊತ್ತಿಗೆ ಮೊಳ' ನೇಯುವ ಕೆಲಸಕ್ಕೆ ಕೈಹಾಕುತ್ತಿದ್ದರು. ಆದರೆ ಮುರುಗದಾಸ್ ಮಾತ್ರ ಹಾಗೆ ಮಾಡುವವರಲ್ಲ. ಸದ್ಯಕ್ಕೆ ಅವರು ಶಾರುಖ್ ಖಾನ್‌ಗಾಗಿ ಸಿನಿಮಾವೊಂದನ್ನು ನಿರ್ದೇಶಿಸಲು ಅದರ ಪೂರ್ವಭಾವಿ ಕೆಲಸಗಳಲ್ಲಿ ಮಗ್ನರಾಗಿದ್ದಾರೆ.

ಇನ್ನೈದು ವರ್ಷಗಳೊಳಗೆ ಹಾಲಿವುಡ್ ಸಿನಿಮಾವನ್ನು ನಿರ್ದೇಶಿಸಬೇಕು ಎಂಬ ಮಹತ್ವಾಕಾಂಕ್ಷೆ ಹೊತ್ತಿರುವ ಮುರುಗದಾಸ್ ಅದಕ್ಕೆ ಬೇಕಿರುವ ಎಲ್ಲ ರೀತಿಯ ತಾಂತ್ರಿಕ ಕೌಶಲ್ಯಗಳನ್ನು ಅಧ್ಯಯನ ಮಾಡುತ್ತಿದ್ದಾರೆ.

ನಿಜ ಪ್ರತಿಭೆ ಎಂದರೆ ಇದೇ ಅಲ್ಲವೇ?

■ ಅರುಣ್.ಜಿ



ಏಕೀ ಮುನಿಸು ಮಹಾಪ್ರಭು...?

ಕನ್ನಡ ಚಿತ್ರಗಳನ್ನು ನೋಡಲೇ ಬಾರದು ಎಂದು ಪ್ರೇಕ್ಷಕ ಪ್ರಭು ನಿರ್ಧಾರ ಮಾಡಿರುವಂತಿದೆ.

ಯಾಕೆಂದರೆ ಕಳೆದ ವಾರ ತೆರೆಕಂಡ ಶಿವಮಣಿ ನಿರ್ದೇಶನದ 'ಜೋಶ್' ಚಿತ್ರ ವಿಮರ್ಶಕರಿಂದ ಪ್ರಶಂಸಿಸಲ್ಪಟ್ಟಿತ್ತು. ಶಿವಮಣಿ ನಿರೂಪಣೆ ಮತ್ತು ಹೊಸ ಹುಡುಗ-ಹುಡುಗಿಯರ ನಟನೆ ಎಲ್ಲವೂ ಆಹ್ಲಾದಕರವಾಗಿತ್ತು. ಆದ್ದರಿಂದ ಇತ್ತೀಚೆಗೆ ಸೋಲಿನ ಸರಮಾಲೆಯನ್ನೆ ಕಾಣುತ್ತಿರುವ ಕನ್ನಡ ಚಿತ್ರರಂಗದಲ್ಲಿ ಈ ಚಿತ್ರ ಗೆಲುವಿನ ಮುನ್ನುಡಿ ಬರೆಯಬಹುದೆಂದು ಎಲ್ಲರೂ ಭಾವಿಸಿದ್ದರು.

ಆದರೆ ಹೊಸಬರೇ ತುಂಬಿ ತುಳುಕಿರುವ ಸ್ವಮೇಕ್ ಚಿತ್ರವಾದ 'ಜೋಶ್'ನತ್ತ ಪ್ರೇಕ್ಷಕರು ಸುಳಿಯದಿರುವುದರಿಂದ ಬಾಕ್ಸ್ ಆಫೀಸಿನಲ್ಲಿ ಇದರ ಗಳಿಕೆ ಆಶಾದಾಯಕವಾಗಿಲ್ಲ. ಇದೇ ಸಾಲಿಗೆ ಸೇರುವ ಮತ್ತೊಂದು ಚಿತ್ರವೆಂದರೆ ರಾಮೋಜಿ ರಾವ್ ನಿರ್ಮಾಣದ 'ಸವಾರಿ'. ಇದು ತೆಲುಗಿನ 'ಗಮ್ಯಂ' ಚಿತ್ರದ ರಿಮೇಕ್ ಎಂಬ ಆಕ್ಷೇಪವನ್ನು ಮರೆತು ನೋಡಿದರೆ ಇದು ಕೂಡ ಮನೆಮಂದಿಯೆಲ್ಲ ನೋಡಿ ಆನಂದಿಸಬಹುದಾದ ಚಿತ್ರ. ನಾಗತಿಹಳ್ಳಿಯವರ 'ಪ್ಯಾರಿಸ್ ಪ್ರಣಯ' ಚಿತ್ರದ ಮುಖಾಂತರ ನಾಯಕನಾದ ರಘು ಮುಖರ್ಜಿ ಈ ಚಿತ್ರದಲ್ಲಿ ಮನೋಜ್ಞವಾಗಿ ನಟಿಸಿದ್ದಾರೆ. ಹಾಗೆಯೇ ಕಳ್ಳನ ಪಾತ್ರದಲ್ಲಿ ನಟಿಸಿರುವ ಶ್ರೀನಗರ ಕಿಟ್ಟಿ ಚಿತ್ರಮಂದಿರಕ್ಕೂ ಸಖತ್ತಾಗಿ ರಂಜಿಸುತ್ತಾರೆ. ಚಿತ್ರದ ಕೊನೆಗೆ ಒಂದು ಮೆಸೇಜು ಇದೆ.

ಆದರೆ ಈ ಚಿತ್ರದ ಗಳಿಕೆಯೂ ಆಶಾದಾಯಕವಾಗಿಲ್ಲವಂತೆ! ಇದನ್ನು ಕಂಡು ಪ್ರೇಕ್ಷಕ ಮಹಾಪ್ರಭು ಕನ್ನಡ ಚಿತ್ರಗಳ ವಿರುದ್ಧ ಪ್ರತಿಭಟನೆಯ ಘೋಷಣೆ ಹೊರಡಿಸಿದ್ದಾನೆಯೇ ಎಂಬ ಪ್ರಶ್ನೆ ಸಹಜವಾಗಿಯೇ ಮೂಡುತ್ತದೆ.

ಸುಖವಾಗಿ ಧರೆಗಿಳಿದ ಮಳೆಬಿಲ್ಲು

ರಸ್ತೆ ಅಪಘಾತವೊಂದರಲ್ಲಿ ಸಿಕ್ಕಿಹಾಕಿಕೊಂಡು ಅದು ಹೇಗೋ ಸಾವಿನ ದವಡೆಯಿಂದ ಪಾರಾಗಿ, ಒಂದು ವರ್ಷಗಳ ಕಾಲ ಹಾಸಿಗೆಯಲ್ಲೇ ಮಲಗಿದ್ದ ಮಹೇಶ್ ಸುಖಧರೆ ಮತ್ತೆ ಚಿತ್ರ ನಿರ್ದೇಶನಕ್ಕೆ ಬಂದಿದ್ದಾರೆ. ಅವರು ಈಗ ಸದ್ದಿಲ್ಲದೆ ಮುಗಿಸಿರುವ ಚಿತ್ರದ ಹೆಸರು 'ಮಳೆ ಬಿಲ್ಲೇ'.

ಒಂದು ವರ್ಷ ಹಾಸಿಗೆಯಲ್ಲಿದ್ದಾಗ ಮಹಾತ್ಮ ಗಾಂಧೀಜಿ, ಚಾರ್ಲಿ ಚಾಪ್ಲಿನ್ ಮೊದಲಾದವರ ಆತ್ಮಕಥನಗಳನ್ನು ಓದಿ ಅವುಗಳಿಂದ ಸ್ಫೂರ್ತಿಪಡೆದ ಸುಖಧರೆ ಈಗ ಯುವಕರಲ್ಲಿ ಆತ್ಮಸ್ಥೈರ್ಯ ಹೆಚ್ಚಿಸುವ ಕಥೆ ಮಾಡಿದ್ದಾರೆ. "ಸಣ್ಣ ಸಣ್ಣ ವಿಷಯಗಳಿಗೆ ಬೇಜಾರು ಮಾಡಿಕೊಂಡು ಆತ್ಮಹತ್ಯೆ ಮಾಡುವುದು ಸರಿಯಲ್ಲ; ಅದರಿಂದಾಚೆಗೂ ಒಂದು ಲೋಕವಿದೆ'' ಎಂಬುದು ಚಿತ್ರದ ತಿರುಳಂತೆ.

ಅಂದಹಾಗೆ, ಸುಖಧರೆ ವೃತ್ತಿಜೀವನ ಆರಂಭವಾಗಿದ್ದು 'ಸಂಭ್ರಮ' ಚಿತ್ರದಿಂದ. ಅನಂತರ 'ಸೈನಿಕ', 'ಸಾರ್ವಭೌಮ' ಮತ್ತು 'ಸಿದ್ದು' ಚಿತ್ರಗಳನ್ನು ನಿರ್ದೇಶಿಸಿದ್ದರು. ಅವುಗಳಲ್ಲಿ ಎರಡು ಹಿಟ್, ಇನ್ನೆರಡು ಸುಮಾರು. ಆದರೂ ಭಾರ್ಗವ ಅವರ ಶಿಷ್ಯರಾದ ಸುಖಧರೆಯ ಮೇಲೆ ಉದ್ಯಮದವರಿಗೆ ವಿಶ್ವಾಸವಿತ್ತು. ಅಷ್ಟೊತ್ತಿಗೆ ಅಪಘಾತದಿಂದ ಹಾಸಿಗೆ ಹಿಡಿದರು. ಈಗ ಹೊಸ ಉತ್ಸಾಹದಲ್ಲಿ ಹೊಸ ಹುಡುಗರೊಂದಿಗೆ ಸುಖಧರೆ ಮತ್ತೆ ಗಾಂಧಿನಗರಕ್ಕೆ ಕಾಲಿಟ್ಟಿದ್ದಾರೆ.

ಅವರಿಗೆ ಒಳ್ಳೆಯದಾಗಲಿ...



PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44